# ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ ಮಾರ್ಚ್ 2019 ಮತ್ತು ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷ

ಕರ್ನಾಟಕ ಸರ್ಕಾರ

ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I) ರವರ ಕಛೇರಿ,
ಕರ್ನಾಟಕ

## ವಿಷಯಸೂಚಿ


| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಪ್ರಸ್ತಾವನೆ | | iii |
| ಸ್ಥೂಲನೋಟ | | v |
| **ಅಧ್ಯಾಯ–I** | | |
| **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** | | |
| ರಾಜ್ಯದ ಗ್ರಾಮ ಪಂಚಾಯತಿಗಳ ಅವಲೋಕನ | | |
| **A.** ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆ | 1.1 | 1 |
| **B.** ಹಣಕಾಸು ವ್ಯವಸ್ಥೆ | 1.11 | 8 |
| **C.** ಗ್ರಾಮ ಪಂಚಾಯತಿಗಳಲ್ಲಿ ಸಾರ್ವಜನಿಕ ಉತ್ತರದಾಯಿತ್ವದ ವ್ಯವಸ್ಥೆ. | 1.13 | 11 |
| **ಅಧ್ಯಾಯ–II** | | |
| **ನಗರಾಭಿವೃದ್ಧಿ ಇಲಾಖೆ** | | |
| ರಾಜ್ಯದ ಪೌರಾಡಳಿತ ವ್ಯವಸ್ಥೆಯ ಅವಲೋಕನ | | |
| **A.** ನಗರ ಸ್ಥಳೀಯ ಸಂಸ್ಥೆಗಳ ಕಾರ್ಯವೈಖರಿ | 2.1 | 19 |
| **B.** ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ | 2.11 | 26 |
| **C.** ರಾಜ್ಯದಲ್ಲಿ ಸಾರ್ವಜನಿಕ ಉತ್ತರದಾಯಿತ್ವದ ವ್ಯವಸ್ಥೆ | 2.14 | 35 |
| **ಅಧ್ಯಾಯ–III** | | |
| ತಾಂತ್ರಿಕ ಮಾರ್ಗದರ್ಶನ ಹಾಗು ಬೆಂಬಲದಡಿಯಲ್ಲಿನ ಕಾರ್ಯಾಚರಣೆಯ ಅವಲೋಕನ | 3.1 | 41 |

# ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.1 | ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ | 53 |
| 1.2 | ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿರ್ದಿಷ್ಟಪಡಿಸಲಾದ ಪ್ರಕಾರ್ಯಗಳು | 54 |
| 1.3 | ರಾಜ್ಯ ಹಣಕಾಸು ಆಯೋಗಗಳ ಶಿಫಾರಸುಗಳು ಮತ್ತು ಮಾರ್ಪಾಡುಗಳ ವಿವರಗಳು | 76 |
| 2.1 | ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಸಾಂಸ್ಥಿಕ ರಚನೆ | 77 |
| 2.2 | ಭಾರತೀಯ ಸಂವಿಧಾನದ ಹನ್ನೆರಡನೆಯ ಶೆಡ್ಯೂಲ್ ಅಡಿಯಲ್ಲಿ 18 ಐಟಂಗಳ ಪಟ್ಟಿ | 78 |
| 3.1 | ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿ ಹಾಗೂ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯಲ್ಲಿ ಸೇರಿಸಲಾದ ಕಂಡಿಕೆಗಳ ಪಟ್ಟಿ | 79 |
| 3.2 | ಪರೀಕ್ಷಾ–ತನಿಖೆ ಮಾಡಿದ ಗ್ರಾಮ ಪಂಚಾಯತಿಗಳ ಪಟ್ಟಿ | 81 |
| 3.3 | ಸಿಮೆಂಟಿನ ಖರೀದಿಯಲ್ಲಿ ಅಕ್ರಮಗಳು. | 84 |
| 3.4 | ಎಲ್ಇಡಿ ದೀಪಗಳ ಖರೀದಿಯಲ್ಲಿ ಅಕ್ರಮಗಳು | 85 |
| 3.5 | ಪರೀಕ್ಷಾ–ತನಿಖೆಗೆ ಒಳಗಾದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ | 86 |

# ಪ್ರಸ್ತಾವನೆ

ಮಾರ್ಚ್ 2019 ಮತ್ತು ಮಾರ್ಚ್ 2020ಕ್ಕೆ ಅಂತ್ಯಗೊಂಡ ವರ್ಷದ ಸಂಯೋಜಿತ ವರದಿಯನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸುವುದಕ್ಕಾಗಿ ಸಿದ್ಧಪಡಿಸಲಾಗಿದೆ. ಗ್ರಾಮ ಪಂಚಾಯತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಪ್ರಾಥಮಿಕ ಲೆಕ್ಕ ಪರಿಶೋಧನೆಯನ್ನು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಗಳ ಇಲಾಖೆ ನಡೆಸುತ್ತದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಹಾಗು ಸೇವಾ ಷರತ್ತುಗಳ ಅಧಿನಿಯಮ, 1971ರ, ಪರಿಚ್ಛೇದ 20(1)ರ ಅನ್ವಯ, ತಾಂತ್ರಿಕ ಮಾರ್ಗಸೂಚಿ ಹಾಗು ಮೇಲ್ವಿಚಾರಣೆ ನೀಡುವ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ, ಎಪ್ರಿಲ್ 1, 2010ರಿಂದ ಹಾಗು ನಗರ ಸ್ಥಳೀಯ ಸಂಸ್ಥೆಗಳಿಗೆ ಎಪ್ರಿಲ್ 1, 2011ರಿಂದ ಅಧಿಕೃತವಾಗಿ ಸಿಎಜಿಗೆ ವಹಿಸಿಲಾಯಿತು. ಅದರಂತೆ, ಈ ವರದಿಯು ಕೇವಲ ಗ್ರಾಮ ಪಂಚಾಯತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮಾರ್ಗಸೂಚಿ ಹಾಗು ಮೇಲ್ವಿಚಾರಣೆಯ ಅಡಿಯಲ್ಲಿ ನಡೆಯುವ ಲೆಕ್ಕಪರಿಶೋಧನೆಯ ಕಾರ್ಯಾಚರಣೆಗಳಿಗೆ ಸೀಮಿತವಾಗಿದೆ.

ಈ ವರದಿಯು, ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ಗಮನಾರ್ಹ ಫಲಿತಾಂಶಗಳನ್ನು ಒಳಗೊಂಡಿದೆ.

ಈ ವರದಿಯಲ್ಲಿ ತಿಳಿಸಿರುವ ಪ್ರಕರಣಗಳು 2018–19 ಮತ್ತು 2019–20ರ ವರ್ಷದಲ್ಲಿ ಲೆಕ್ಕಪತ್ರಗಳ ಪರೀಕ್ಷಾ–ಪರಿಶೀಲನೆಯ ಸಮಯದಲ್ಲಿ ಗಮನಕ್ಕೆ ಬಂದವುಗಳೇ ಅಲ್ಲದೆ ಅದಕ್ಕಿಂತ ಮುಂಚಿನ ವರ್ಷಗಳಲ್ಲಿ ಗಮನಿಸಿದ್ದಾದರೂ ಹಿಂದಿನ ವರದಿಗಳಲ್ಲಿ ಸೇರಿಸಲಾಗದೇ ಇರುವಂತಹವುಗಳನ್ನು, ಅವಶ್ಯವಿದ್ದಡೆಯಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಲೆಕ್ಕಪರಿಶೋದನೆಯನ್ನು ನೆಡಸಲಾಗಿದೆ.

ಭಾಷಾಂತರಿಸಿದ ಈ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಸ್ಥೂಲನೋಟ

## ಸ್ಥೂಲನೋಟ

*ಈ ವರದಿಯು ಮೂರು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಮತ್ತು ಎರಡನೆಯ ಅಧ್ಯಾಯಗಳು ಅನುಕ್ರಮವಾಗಿ ರಾಜ್ಯದ ಗ್ರಾಮ ಪಂಚಾಯತಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅವಲೋಕನವನ್ನು ಒಳಗೊಂಡಿದೆ. ಮೂರನೇ ಅಧ್ಯಾಯವು ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಡಿಯಲ್ಲಿ ಗ್ರಾಮ ಪಂಚಾಯತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಒಳಗೊಂಡಿದೆ. ಅವುಗಳ ಸಾರಾಂಶವನ್ನು ಈ ಅವಲೋಕನದಲ್ಲಿ ಪ್ರಸ್ತುತಪಡಿಸಲಾಗಿದೆ.*

## 1. ರಾಜ್ಯದ ಗ್ರಾಮ ಪಂಚಾಯತಿಗಳ ಅವಲೋಕನ

*ರಾಜ್ಯದ ಗ್ರಾಮ ಪಂಚಾಯತಿಗಳು ತಮ್ಮ ಲೆಕ್ಕಪತ್ರಗಳ ನಿರ್ವಹಣೆಗೆ ಎಂಪಿಎಎಸ್ ಮಾದರಿಗಳನ್ನು ಇನ್ನೂ ಅಳವಡಿಸಿಕೊಂಡಿರಲಿಲ್ಲ. ಓಂಬಡ್ಸ್ಮನ್‌ರವರು ವಸೂಲಾತಿಗಾಗಿ ಆದೇಶಿಸಿದ್ದ ₹24.12 ಕೋಟಿಗಳಲ್ಲಿ ಕೇವಲ ₹2.47 ಕೋಟಿಗಳನ್ನು ವಸೂಲಿ ಮಾಡಲಾಗಿದೆ ಮತ್ತು ₹21.65 ಕೋಟಿ ವಸೂಲಾತಿಯು ಬಾಕಿ ಉಳಿದಿದೆ. 2015–16ರಲ್ಲಿ ₹304.46 ಕೋಟಿಯಷ್ಟಿದ್ದ ತೆರಿಗೆ ರಾಜಸ್ವವು 2018–19 ರ ಅವಧಿಗೆ ಶೇಕಡ 25ರಷ್ಟು ಹೆಚ್ಚಾಗಿ ₹379.68 ಕೋಟಿಯಷ್ಟಾಗಿತ್ತು ಮತ್ತು ತೆರಿಗೆಯೇತರ ರಾಜಸ್ವಗಳು 2015–16 ರಿಂದ 2018–19 ರ ಅವಧಿಗೆ ₹174.29 ಕೋಟಿಯಿಂದ ₹131.47 ಕೋಟಿಗೆ ಕಡಿಮೆಯಾಗಿದ್ದಿತು. ಒಟ್ಟು ಆದಾಯಗಳಿಗೆ ಹೋಲಿಸಿದರೆ ಸ್ವಂತ ಆದಾಯದ ಶೇಕಡಾವಾರು ಪ್ರಮಾಣವು ಶೇಕಡ 5.94 (2016–17) ರಿಂದ ಶೇಕಡ 9.1 (2015–16) ವ್ಯಾಪ್ತಿಯಲ್ಲಿತ್ತು ಮತ್ತು ರಾಜಸ್ವ ವೆಚ್ಚಕ್ಕೆ ಹೋಲಿಸಿದರೆ ಸ್ವಂತ ಆದಾಯದ ಕೊಡುಗೆ ಶೇಕಡ ಹತ್ತಕ್ಕಿಂತ ಕಡಿಮೆಯಿತ್ತು. 2015–16ರಲ್ಲಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾದ ಶಾಸನಬದ್ಧ ಅನುದಾನವು ₹616.62 ಕೋಟಿಯಿದ್ದು 2018–19ರಲ್ಲಿ ₹902.99 ಕೋಟಿಗೆ ಹೆಚ್ಚಾಗಿದೆ. 2018–19ನೇ ಸಾಲಿನ ನಿಗದಿತ ಕಾರ್ಯಕ್ಷಮತೆ ಅನುದಾನವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ 2019 ರ ಮಾರ್ಚ್ ಅಂತ್ಯದವರೆಗೆ ಭಾರತ ಸರ್ಕಾರವು ಬಿಡುಗಡೆ ಮಾಡಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನವೆಂಬರ್ 2020ರ ವೇಳೆಗೂ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ರಚಿಸಲಾಗಿಲ್ಲ. ಸೆಪ್ಟೆಂಬರ್ 2020 ರ ಅಂತ್ಯದ ವೇಳೆಗೆ, 2881 ಪ್ಯಾರಾಗಳನ್ನು ಒಳಗೊಂಡಿರುವ 253 ಪರಿಶೀಲನಾ ವರದಿಗಳಿಗೆ ವಿವಿಧ ಗ್ರಾಮಪಂಚಾಯತಿಗಳಿಂದ ಬರಬೇಕಾದ ಅನುಸರಣೆಗಳು ಬಾಕಿ ಉಳಿದಿವೆ.*

***(ಅಧ್ಯಾಯ I)***

## 2. ರಾಜ್ಯದ ಪೌರಾಡಳಿತ ವ್ಯವಸ್ಥೆಯ ಪಕ್ಷಿನೋಟ

*ವಾರ್ಡ್ ಸಮಿತಿಗಳು ಬಿಬಿಎಮ್‌ಪಿಯನ್ನು ಹೊರತುಪಡಿಸಿ ಇತರೆ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ರಚನೆಯಾಗಿರಲಿಲ್ಲ. ಜಿಲ್ಲಾ ಯೋಜನಾ ಸಮಿತಿಯನ್ನು ಬಾಗಲಕೋಟೆ ಜಿಲ್ಲೆಯನ್ನು ಹೊರತುಪಡಿಸಿ ಎಲ್ಲಾ ಜಿಲ್ಲೆಗಳಲ್ಲಿ ರಚಿಸಲಾಗಿದ್ದಿತು. 2014–19ರ ಅವಧಿಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳಿಗೆ (ಬಿಬಿಎಮ್‌ಪಿಯನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಒಟ್ಟು ಸ್ವೀಕೃತಿಗಳಿಗೆ ಸ್ವಂತ ಆದಾಯದ ಪ್ರಮಾಣವು ಕೇವಲ 26 ರಿಂದ 33 ಪ್ರತಿಶತದಷ್ಟಿದ್ದರೆ, ಬಿಬಿಎಮ್ಪಿಗೆ ಇದು ಶೇಕಡಾ 41 ರಿಂದ 57 ರ ವ್ಯಾಪ್ತಿಯಲ್ಲಿತ್ತು. 2014–15ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ (ಬಿಬಿಎಮ್‌ಪಿಯನ್ನು ಹೊರತುಪಡಿಸಿ)) ಆಸ್ತಿ ತೆರಿಗೆ ಬಾಕಿಗಳು ₹105 .74 ಕೋಟಿಗಳಿದ್ದು 2018–19ರಲ್ಲಿ ₹503.09 ಕೋಟಿಗೆ ಹೆಚ್ಚಳಗೊಂಡಿರುತ್ತದೆ ಮತ್ತು 2014–15ರಲ್ಲಿದ್ದ ಶೇಕಡಾ 80ರ ವಸೂಲಾತಿಯು 2018–19ರಲ್ಲಿ ಶೇಕಡಾ 59ಕ್ಕೆ ಇಳಿದಿರುತ್ತದೆ. ಬಿಬಿಎಮ್‌ಪಿಯು 2014–15ರಿಂದ 2018–19ರ ಅವಧಿಯಲ್ಲಿ ಆಸ್ತಿ ತೆರಿಗೆಯ ವಸೂಲಾತಿಯ ನಿಗದಿತ ಗುರಿಯನ್ನು ಸಾಧಿಸಿರಲಿಲ್ಲ. ಆದಾಗ್ಯೂ, ವಸೂಲಾತಿಯು 2014–15ರಲ್ಲಿದ್ದ ಶೇಕಡಾ 62ರಿಂದ 2018– 19ರ ಸಾಲಿಗೆ ಶೇಕಡಾ 77ರಷ್ಟು ಹೆಚ್ಚಳಗೊಂಡಿತು. ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು*

*(ಬಿಬಿಎಮ್‌ಪಿಯನ್ನು ಹೊರತುಪಡಿಸಿ) ₹378.15 ಕೋಟಿ ಆರೋಗ್ಯ ಉಪಕರ ₹60.63 ಕೋಟಿ ಗ್ರಂಥಾಲಯ ಉಪಕರ ಹಾಗೂ ₹24.18 ಕೋಟಿ ಭಿಕ್ಷಾಟನಾ ಉಪಕರವನ್ನು ಸಂಬಂಧಿಸಿದ ಇಲಾಖೆಗಳಿಗೆ/ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಿರಲಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಂಗ್ರಹಣೆ ಮಾಡಿದ ₹1,087.28 ಕೋಟಿ ಮೊತ್ತದ ಸಂಪೂರ್ಣ ಆರೋಗ್ಯ ಉಪಕರವನ್ನು ರಾಜ್ಯ ಸರ್ಕಾರಕ್ಕೆ ಪಾವತಿ ಮಾಡಿರಲಿಲ್ಲವಾದರೆ, ಬಾಕಿ ಉಳಿದ ಗ್ರಂಥಾಲಯ ಉಪಕರ ₹226.73 ಕೋಟಿ ಹಾಗೂ ಭಿಕ್ಷಾಟನಾ ಉಪಕರ ₹150.55 ಕೋಟಿ ಮೊತ್ತವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲ. 2018–19ರ ಸಾಲಿನ ಸ್ಥಿರಾಸ್ತಿ ವರ್ಗಾವಣೆ ಮೇಲಿನ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಇನ್ನೂ ವರ್ಗಾಯಿಸಿರಲಿಲ್ಲ (ಜೂನ್ 2021). ನಗರ ಸ್ಥಳೀಯ ಸಂಸ್ಥೆಗಳಿಗೆ 2014–15ರಿಂದ 2018–19ರ ಅವಧಿಯಲ್ಲಿ ಕಡಿಮೆಯಾಗಿ ಬಿಡುಗಡೆಗೊಳಿಸಿದ ಅನುದಾನವು ಶೇಕಡಾ 20ರಿಂದ 50ರವರೆಗೆ ವ್ಯಾಪಿಸಿದ್ದಿತು. ರಾಜ್ಯದಲ್ಲಿ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸಿರಲಿಲ್ಲ (ಜುಲೈ 2020). ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ಪೌರಾಡಳಿತವು ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಹೊಂದಿರಲಿಲ್ಲ. ಬಾಕಿ ಉಳಿದಿರುವ 608 ತಪಾಸಣಾ ವರದಿಗಳಲ್ಲಿ 4,680 ಕಂಡಿಕೆಗಳನ್ನು ಒಳಗೊಂಡಿರುವ (ಶೇಕಡಾ 44) 312 ತಪಾಸಣಾ ವರದಿಗಳು (ಶೇಕಡಾ 52) ನಾಲ್ಕು ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿದ್ದವು. ಇದು ನಗರ ಸ್ಥಳೀಯ ಸಂಸ್ಥೆಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತಿದ್ದವು.*

***(ಅಧ್ಯಾಯ II)***

## 3. ಟಿಜಿಎಸ್ ಕಾರ್ಯಾಚರಣೆಯ ಅವಲೋಕನ

ಲೆಕ್ಕಪರಿಶೋಧನೆಯ ಯೋಜನೆಯ ಪ್ರಕಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು 31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ ಶೇಕಡ 92 ರಷ್ಟು ಗ್ರಾಮ ಪಂಚಾಯತಿಗಳನ್ನು (6,022 ರಲ್ಲಿ 5,881) ಹಾಗೂ ಶೇಕಡಾ 98.6 ರಷ್ಟು ನಗರ ಸ್ಥಳೀಯ ಸಂಸ್ಥೆಗಳನ್ನು (277 ರಲ್ಲಿ 273) ಲೆಕ್ಕಪರಿಶೋಧನೆಗೆ ಒಳಪಡಿಸಲು ಯೋಜಿಸಿತ್ತು. ಆದರೆ ವಾಸ್ತವವಾಗಿ ಜುಲೈ 2019ರ ಕೊನೆಗೆ 2017–18ರ ಸಾಲಿಗೆ ಲೆಕ್ಕಪರಿಶೋಧನೆ ನಡೆಸಿದ ಘಟಕಗಳು 5,297 ಗ್ರಾಮ ಪಂಚಾಯತಿಗಳು ಹಾಗು 169 ನಗರ ಸ್ಥಳೀಯ ಸಂಸ್ಥೆಗಳಾಗಿದ್ದವು. ಎಜಿ(ಆಡಿಟ್)ಗೆ ಸಲ್ಲಿಸಬೇಕಾಗಿದ್ದ ಸಲ್ಲಿಕೆಗಳನ್ನು ನಿಯಮಿತವಾಗಿ ಒದಗಿಸಲಾಗಿಲ್ಲ. ವರ್ಷಕ್ಕೆ ಒಮ್ಮೆ ಜುಲೈ 2018 ಮತ್ತು ಜನವರಿ 2020 ರಲ್ಲಿ ಒಮ್ಮೆ ಮಾತ್ರ ಕಳುಹಿಸಲಾಗಿದೆ. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ದಿಡ್ಡಿಗೆ ಗ್ರಾಮ ಪಂಚಾಯತಿಯ ತಪಾಸಣಾ ವರದಿಯಲ್ಲಿ ಗ್ರಾಮ ವಿಕಾಸ ಯೋಜನೆಯಡಿ ಮಾಡಿದ ಖರೀದಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದ ಉಲ್ಲಂಘನೆಯಾಗಿದೆ ಎಂಬುವುದನ್ನು ಗಮನಿಸಿದ್ದು ಉಲ್ಲಂಘನೆಯ ವಿವರವಾದ ವಿಶ್ಲೇಷಣೆಯ ಬದಲಾಗಿ ಸಂಪೂರ್ಣ ವೆಚ್ಚದ ಮೊತ್ತವನ್ನು (₹23.64 ಲಕ್ಷ) ಆಕ್ಷೇಪಣೆಯಲ್ಲಿ ಇರಿಸಿದೆ. ತುಮಕೂರು ಮಹಾನಗರ ಪಾಲಿಕೆಯು ಬಾಡಿಗೆ ನಿಗದಿಯಾದ ದಿನದಿಂದ ಅಥವಾ 26.10.2009ರ ಸುತ್ತೋಲೆ ಜಾರಿಯಾದ ದಿನದಿಂದ ಮೂರು ವರ್ಷಗಳು ಮುಗಿದ ನಂತರವೂ ಬಾಡಿಗೆಯನ್ನು ಶೇಕಡಾ 10ರಷ್ಟು ಹೆಚ್ಚಿಸುವಲ್ಲಿ ವಿಫಲವಾಗಿದೆ. ಇದರಿಂದ ಕಂದಾಯದ ಸಂಗ್ರಹಣೆಯಲ್ಲಿ ₹38.35 ಲಕ್ಷಗಳಷ್ಟು ಕಡಿತವಾಯಿತು. ಮೂರು ವರ್ಷಗಳಿಗಿಂತ ಹಳೆಯದಾದ ಕ್ಲೇಮು ಆಗಿರದ ₹108.95 ಲಕ್ಷ ಮೊತ್ತದ ಠೇವಣಿಗಳನ್ನು, ಮೂರು ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಠೇವಣಿ ವಹಿಯಲ್ಲಿ ತೋರಿಸಿದ್ದರೂ ಸಹ, ಆ ಠೇವಣಿಗಳನ್ನು ಪಾಲಿಕೆಯ ಆದಾಯವೆಂದು ಪರಿಗಣಿಸಿರಲಿಲ್ಲ. ಶಾಸನಬದ್ಧ ಬೆಂಬಲವನ್ನು ಹೊಂದಿರುವ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯ ಅಂಶವು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪರಿಷ್ಕೃತ ಕೈಪಿಡಿಯಲ್ಲಿ ಸ್ಥಾನ ಪಡೆದಿಲ್ಲ.

***(ಅಧ್ಯಾಯ III)***

# ಅಧ್ಯಾಯ - I

# ರಾಜ್ಯದ ಗ್ರಾಮ ಪಂಚಾಯತಿಗಳ ಅವಲೋಕನ

# ಅಧ್ಯಾಯ -I

## 1. ರಾಜ್ಯದ ಗ್ರಾಮ ಪಂಚಾಯತಿಗಳ ಅವಲೋಕನ

## A: ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆ

### 1.1 ಪರಿಚಯ

73 ನೇ ಸಾಂವಿಧಾನಿಕ ತಿದ್ದುಪಡಿ ಅಧಿನಿಯಮದ ಪರಿಣಾಮವಾಗಿ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಗ್ರಾಮಗಳಲ್ಲಿ ಗ್ರಾಮ ಪಂಚಾಯತಿಗಳು, ತಾಲ್ಲೂಕುಗಳಲ್ಲಿ ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಗಳು ಎಂಬ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸ್ಥಾಪಿಸುವ ಉದ್ದೇಶದಿಂದ, ರಾಜ್ಯ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಜಾರಿಗೆ ತಂದಿತು (ಇನ್ನು ಮುಂದೆ ಇದನ್ನು ಕೆಪಿಆರ್ ಅಧಿನಿಯಮ 1993 ಎಂದು ಕರೆಯಲಾಗುತ್ತದೆ). ಕೆಪಿಆರ್ ತಿದ್ದುಪಡಿ ಅಧಿನಿಯಮ 2011ರನುಸಾರವಾಗಿ ಪರಿಚ್ಛೇಧ 246ರಡಿ ಉಪ ಪರಿಚ್ಛೇಧ(i)ನ್ನು ಸೇರಿಸಲ್ಪಟ್ಟಿದ್ದು, ಅದರನ್ವಯ ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಸೇವಾ ಷರತ್ತುಗಳ ಅಧಿನಿಯಮ, 1971 (ಸಿಎಜಿ ಡಿಪಿಸಿ ಅಧಿನಿಯಮ 1971) ರ ಅನುವುಗಳನುಸಾರ "ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಲೆಕ್ಕಪತ್ರಗಳ ಪರಿಶೋಧನೆಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡುವುದರ ಜೊತೆಗೆ ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳ ಪರೀಕ್ಷಾ ಪರಿಶೋಧನೆಯನ್ನು ಸಹ ಮಾಡಬಹುದಾಗಿರುತ್ತದೆ". ಈ ಕಾಯ್ದೆಯನ್ನು 2013, 2015 ರಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲಾಯಿತು ಮತ್ತು 2017 ರಲ್ಲಿ ಇದನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 (ಕೆಪಿಆರ್ ಅಧಿನಿಯಮ 1993) ಎಂದು ಮರುನಾಮಕರಣ ಮಾಡಲಾಯಿತು.

ಜನರ ಅಗತ್ಯತೆಗಳನ್ನು ಒದಗಿಸಲು ಮತ್ತು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆ ಅತ್ಯಗತ್ಯ. ರಾಜ್ಯದ ಗ್ರಾಮೀಣ ಜನಸಂಖ್ಯೆಗೆ ಸಂಬಂಧಿಸಿದ ಪ್ರಮುಖ ಅಂಕಿಅಂಶಗಳನ್ನು **ಕೋಷ್ಟಕ 1.1** ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.1: ರಾಜ್ಯದ ಗ್ರಾಮೀಣ ಜನಸಂಖ್ಯೆಯ ಪ್ರಮುಖ ಅಂಕಿಅಂಶಗಳು**

| ಸೂಚಕಗಳು | ಘಟಕ | ರಾಜ್ಯ | ರಾಷ್ಟ್ರೀಯ |
|---|---|---|---|
| **ಜನಸಂಖ್ಯೆ** | ಲಕ್ಷಗಳಲ್ಲಿ | 610.95 | 12105.69 |
| **ಗ್ರಾಮೀಣ ಜನಸಂಖ್ಯೆ** | ಲಕ್ಷಗಳಲ್ಲಿ | 374.69 | 8334.63 |
| **ಗ್ರಾಮೀಣ ಜನಸಂಖ್ಯೆ** | ಜನಸಂಖ್ಯೆಯ ಶೇಕಡಾವಾರು | 61.33 | 68.8 |
| **ಜನಸಂಖ್ಯಾ ಸಾಂದ್ರತೆ** | ವ್ಯಕ್ತಿಗಳು / ಚದರ ಕಿ.ಮೀ | 319 | 382 |
| **ಗ್ರಾಮೀಣ ಲಿಂಗಾನುಪಾತ** | ಪ್ರತಿ ಸಾವಿರಕ್ಕೆ | 979 | 949 |
| **ಗ್ರಾಮೀಣ ಸಾಕ್ಷರತಾ ಪ್ರಮಾಣ** | ಶೇಕಡಾವಾರು | 68.70 | 67.8 |
| **ಜಿಲ್ಲಾ ಪಂಚಾಯತಿಗಳು** | ಸಂಖ್ಯೆಗಳು | 30 | 540 (ಅಂದಾಜು) |
| **ತಾಲ್ಲೂಕು ಪಂಚಾಯತಿಗಳು** | ಸಂಖ್ಯೆಗಳು | 176 | 6,000 (ಅಂದಾಜು) |
| **ಗ್ರಾಮ ಪಂಚಾಯತಿಗಳು** | ಸಂಖ್ಯೆಗಳು | 6022 | 2,34,000 (ಅಂದಾಜು) |

ಆಧಾರ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಾರ್ಷಿಕ ವರದಿ 2018–19, ಜನಗಣತಿ 2011 ಮತ್ತು ಕರ್ನಾಟಕದ ಆರ್ಥಿಕ ಸಮೀಕ್ಷೆ 2018–19

ಭೌಗೋಳಿಕ ಪ್ರದೇಶದ (191791 ಚದರ ಕಿ. ಮೀ) ದೃಷ್ಟಿಯಿಂದ ಕರ್ನಾಟಕವು ಭಾರತದ ಏಳನೆಯ ಅತಿದೊಡ್ಡ ರಾಜ್ಯವಾಗಿದೆ ಮತ್ತು ಭಾರತದ ಜನಸಂಖ್ಯೆಯ ಶೇಕಡಾ 5.05 ರಷ್ಟಿದೆ. ರಾಷ್ಟ್ರೀಯ ಸಾಕ್ಷರತಾ ಪ್ರಮಾಣಕ್ಕಿಂತ (ಶೇಕಡಾ 67.8) ರಾಜ್ಯದ ಗ್ರಾಮೀಣ ಸಾಕ್ಷರತೆ (ಶೇಕಡಾ 68.7) ಉತ್ತಮವಾಗಿದೆ.

## 1.2 ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ

ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ ನೇತೃತ್ವದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ರಾಜ್ಯ ಮಟ್ಟದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ (ಪಂ.ರಾ.ಸಂ) ಸಂಪರ್ಕಸೇತುವಾಗಿದೆ. ರಾಜ್ಯದಲ್ಲಿ ಗ್ರಾಮೀಣ ಪಂಚಾಯತ್ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸಾಂಸ್ಥಿಕ ರಚನೆಯನ್ನು **ಅನುಬಂಧ 1.1** ರಲ್ಲಿ ನೀಡಲಾಗಿದೆ.

## 1.3 ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಿಎಜಿಯವರ ಅಧ್ಯಾದೇಶ ಮತ್ತು ಲೆಕ್ಕಪರಿಶೋಧನೆಯ ವ್ಯಾಪ್ತಿ

ಗ್ರಾಮೀಣ ಭಾಗದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಒಂದು ರೀತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಮತ್ತೊಂದು ರೀತಿಯಲ್ಲಿ ಸಿಎಜಿಯವರ ಪಾತ್ರವು ವಿಭಿನ್ನವಾಗಿರುತ್ತದೆ.

- ಕೆ ಪಿ ಆರ್ ಅಧಿನಿಯಮ 1993ರ ಪರಿಚ್ಛೇದ 262ರ ಪ್ರಕಾರ, ಜಿಲ್ಲಾ ಪಂಚಾಯತ್ ನಿಧಿಯ ಲೆಕ್ಕಪತ್ರಗಳು, ಸಿಎಜಿ (ಡಿಪಿಸಿ) ಅಧಿನಿಯಮ 1971ರ ಅನುಸಾರವಾಗಿ ಭಾರತದ ಸಿಎಜಿಯವರಿಂದ ಪರಿಶೋಧನೆ ಮಾಡಲ್ಪಡುತ್ತದೆ. ಅದೇ ರೀತಿ, ಕೆಪಿಆರ್ ಅಧಿನಿಯಮದ 253ನೇ ಪರಿಚ್ಛೇದವು, ತಾಲ್ಲೂಕು ಪಂಚಾಯತ್ ನಿಧಿಯ ಲೆಕ್ಕಪತ್ರಗಳನ್ನು ಸಿಎಜಿಯ (ಡಿಪಿಸಿ) ಅಧಿನಿಯಮ 1971 ರನುಸಾರ ಪರಿಶೋಧಿಸಲು ಆದೇಶಿಸುತ್ತದೆ. ಈ ಲೆಕ್ಕಪರಿಶೋಧನೆಯನ್ನು ಡಿಪಿಸಿ ಅಧಿನಿಯಮದ ಪರಿಚ್ಛೇದ 19(3)ರ ಅಡಿಯಲ್ಲಿ ಮಾಡಲಾಗುತ್ತದೆ ಮತ್ತು ಪ್ರತಿ ಐದು ವರ್ಷಗಳಿಗೊಮ್ಮೆ ಈ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತದೆ. ಇತ್ತೀಚಿನ ವಿಸ್ತರಣೆಯು 1.4.2017 ರಿಂದ 31.3.2022 ರವರೆಗೆ ಇರುತ್ತದೆ. ಅದರಂತೆ, ಎಲ್ಲಾ 30 ಜಿಲ್ಲಾ ಪಂಚಾಯತಿಗಳ ಮತ್ತು 176 ತಾಲ್ಲೂಕು ಪಂಚಾಯತಿಗಳ ಲೆಕ್ಕಪತ್ರಗಳ ಪ್ರಮಾಣೀಕರಣವನ್ನು ಕೈಗೊಳ್ಳಲಾಗಿದ್ದು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯೊಂದನ್ನು (ಎಸ್ ಎ ಆರ್) ಪ್ರತಿ ಜಿಲ್ಲಾ ಪಂಚಾಯತ್‌ಗೆ ಹಾಗೂ ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೂ ಸೇರಿ ಒಂದು ಏಕೀಕೃತ ಎಸ್‌ಎಆರ್ ನೀಡಲಾಗುತ್ತದೆ. ಅನುಪಾಲನಾ ಮತ್ತು ಕ್ರಮಬದ್ಧತೆಯ ಬಗೆಗಿನ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಭಿಪ್ರಾಯಗಳನ್ನು ಸಿಎಜಿ ಯ ಸಾಮಾನ್ಯ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಗುತ್ತದೆ.
- ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ, ಪ್ರಾಥಮಿಕ ಲೆಕ್ಕಪರಿಶೋಧನೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ (ಕೆಎಸ್‌ಎಎಡಿ) ಯಿಂದ ನಡೆಸಲಾಗುತ್ತದೆ ಮತ್ತು ಸಿಎಜಿ ಅವರಿಗೆ 2010 ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಡಿಪಿಸಿ ಅಧಿನಿಯಮದ ಪರಿಚ್ಛೇದ 20 (1) ರ ಅಡಿಯಲ್ಲಿ ತಾಂತ್ರಿಕ ಮಾರ್ಗದರ್ಶನ ಮತ್ತು ಬೆಂಬಲ (ಟಿಜಿಎಸ್) ನೀಡುವ ಅಧಿಕಾರವನ್ನು ವಹಿಸಲಾಗಿದೆ. ಆದ್ದರಿಂದ, ಈ ಅಧ್ಯಾಯವನ್ನು ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಟಿಜಿಎಸ್ ವ್ಯವಸ್ಥೆಯಡಿಯ ಲೆಕ್ಕಪರಿಶೋಧನೆಗೆ ಮಾತ್ರ ಸೀಮಿತಗೊಳಿಸಲಾಗಿದೆ.

ವ್ಯಾಪ್ತಿ: ಕೆಎಸ್‌ಎಎಡಿಯು (ಅಕ್ಟೋಬರ್ 2019) ಒದಗಿಸಿದ ವಿವರಗಳ ಪ್ರಕಾರ, 2017–18 ಮತ್ತು 2018–19 ರ ಅವಧಿಯಲ್ಲಿ ಕ್ರಮವಾಗಿ 2016–17 ಮತ್ತು 2017–18 ವರ್ಷಗಳಿಗೆ 5,091 ಮತ್ತು 5,297 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ನಡೆಸಿತ್ತು. ಲೆಕ್ಕಪರಿಶೋಧನೆ ಮಾಡಲಾದ ಘಟಕಗಳಲ್ಲಿ ನಾವು

2018–19 ಮತ್ತು 2019–20ರ ಅವಧಿಯಲ್ಲಿ ಕ್ರಮವಾಗಿ 42 ಹಾಗೂ 80 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಟಿಜಿಎಸ್ ಅಡಿಯಲ್ಲಿ ಕೈಗೊಂಡಿದ್ದೇವೆ.

## 1.4 ಗ್ರಾಮ ಪಂಚಾಯತಿಗಳ ಕಾರ್ಯಚಟುವಟಿಕೆಗಳ ವರ್ಗಾವಣೆ

73ನೇ ತಿದ್ದುಪಡಿಯು ಭಾರತದ ಸಂವಿಧಾನದ 11 ನೇ ಶೆಡ್ಯೂಲಿನಲ್ಲಿ ಮಾಡಲಾದ 29 ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲು ಉದ್ದೇಶಿಸಿದೆ. ಇದು ಕೆಪಿಆರ್ ಅಧಿನಿಯಮದಲ್ಲೂ ಒಳಗೊಂಡಿದೆ. ಕೆಪಿಆರ್ ಅಧಿನಿಯಮ 1993 ರ ಪರಿಚ್ಛೇದ 58, ಅಧಿನಿಯಮ ಶೆಡ್ಯೂಲು–I ರಲ್ಲಿ ನಿರ್ದಿಷ್ಟಪಡಿಸಿದಂತೆ 31 ಕಾರ್ಯಕ್ರಮಗಳನ್ನು ನಿರ್ವಹಿಸಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರ ನೀಡುತ್ತದೆ. ಅಂತೆಯೇ, ಕೆಪಿಆರ್ ಅಧಿನಿಯಮದ ಪರಿಚ್ಛೇದ 145 ಮತ್ತು ಪರಿಚ್ಛೇದ 184 ಅಧಿನಿಯಮದ ಶೆಡ್ಯೂಲು–II ಮತ್ತು ಶೆಡ್ಯೂಲು–III ರಲ್ಲಿ ಸೂಚಿಸಿದಂತೆ ತಾಲ್ಲೂಕು ಪಂಚಾಯತಿಗಳಿಗೆ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಕ್ರಮವಾಗಿ 30 ಕಾರ್ಯಗಳು ಮತ್ತು 28 ಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ನೀಡುತ್ತದೆ. ರಾಜ್ಯ ಸರ್ಕಾರವು 11ನೇ ಶೆಡ್ಯೂಲಿನಲ್ಲಿ ವಿವರಿಸಿರುವಂತೆ ಎಲ್ಲಾ 29 ಕಾರ್ಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಿದ್ದಾಗ್ಯೂ, ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳ ನಡುವೆ ಎಲ್ಲಾ ಕಾರ್ಯಚಟುವಟಿಕೆಗಳನ್ನು ವಿತರಿಸುವ ನಕ್ಷೆಯನ್ನು ನವೆಂಬರ್ 2016 ರಲ್ಲಿ ಮಾತ್ರ ರೂಪಿಸಲಾಯಿತು. ಕಾರ್ಯಚಟುವಟಿಕೆಯ ನಕ್ಷೆಯನ್ನು **ಅನುಬಂಧ 1.2** ರಲ್ಲಿ ನೀಡಲಾಗಿದೆ.

ಗ್ರಾಮ ಪಂಚಾಯತಿಗಳ ಕೆಲವು ಪ್ರಮುಖ ಕಾರ್ಯಚಟುವಟಿಕೆಗಳೆಂದರೆ ಕುಡಿಯುವ ನೀರು ಸರಬರಾಜು, ಪಟ್ಟಣ ಮತ್ತು ಗ್ರಾಮ ಯೋಜನೆ ಮತ್ತು ಲೋಕೋಪಯೋಗಿ, ಬಡತನ ನಿವಾರಣೆ, ಗ್ರಾಮೀಣ ವಿದ್ಯುದೀಕರಣ, ವಿದ್ಯುತ್ ಮತ್ತು, ವಿಪತ್ತು ನಿರ್ವಹಣೆ ಇತ್ಯಾದಿ.

## 1.5 ಸಮಿತಿಗಳ ರಚನೆ

### 1.5.1. ಗ್ರಾಮ ಪಂಚಾಯತಿಗಳಲ್ಲಿ ಸ್ಥಾಯಿ ಸಮಿತಿಗಳು

ಕೆಪಿಆರ್ ಅಧಿನಿಯಮ, 1993 ರ ಪರಿಚ್ಛೇದ 61 ರ ಪ್ರಕಾರ ಪ್ರತಿ ಗ್ರಾಮ ಪಂಚಾಯತಿಯು ಚುನಾವಣೆಯ ಮೂಲಕ ತನ್ನ ಸದಸ್ಯರುಗಳಿಂದ ಸ್ಥಾಯಿ ಸಮಿತಿಗಳನ್ನು ರಚಿಸಬೇಕು. ಸ್ಥಾಯಿ ಸಮಿತಿಗಳು ಗ್ರಾಮ ಪಂಚಾಯತಿಯಿಂದ ಅವರಿಗೆ ನಿಯೋಜಿಸಿದಂತೆ ಕಾರ್ಯಗಳನ್ನು ನಿರ್ವಹಿಸುತ್ತದೆ. ಸ್ಥಾಯಿ ಸಮಿತಿಗಳಿಗೆ ವಹಿಸಲಾಗಿರುವ ಪಾತ್ರಗಳ ವಿವರಗಳನ್ನು **ಕೋಷ್ಟಕ 1.2** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.2: ಸ್ಥಾಯಿ ಸಮಿತಿಗಳ ರಚನೆ ಮತ್ತು ಕಾರ್ಯಗಳು**

| ಕ್ರಮ ಸಂಖ್ಯೆ | ಸ್ಥಾಯಿ ಸಮಿತಿಗಳು. | ಸ್ಥಾಯಿ ಸಮಿತಿಗಳ ಕಾರ್ಯನಿರ್ವಾಹಕರು | ಸ್ಥಾಯಿ ಸಮಿತಿಗಳ ಕಾರ್ಯಗಳು. |
|---|---|---|---|
| 1. | ಸಾಮಾನ್ಯ ಸ್ಥಾಯಿ ಸಮಿತಿ | ಉಪಾಧ್ಯಕ್ಷ | ಕೃಷಿ ಉತ್ಪಾದನೆಗೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ, ಪಶುಸಂಗೋಪನೆ ಮತ್ತು ಗ್ರಾಮೀಣ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳು, ಶಿಕ್ಷಣ, ಲೋಕೋಪಯೋಗಿ ಮತ್ತು ಗ್ರಾಮ ಪಂಚಾಯತಿಗಳ ಇತರ ಕಾರ್ಯಗಳು. |
| 2. | ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ | ಅಧ್ಯಕ್ಷ | ಗ್ರಾಮ ಪಂಚಾಯತಿಗಳ ಹಣಕಾಸು, ಬಜೆಟ್ ರಚನೆ, ಸ್ವೀಕೃತಿಗಳು ಮತ್ತು ಸಂದಾಯಗಳ ಪಟ್ಟಿಗಳ ಪರಿಶೀಲನೆ, ಆದಾಯ ಮತ್ತು ವೆಚ್ಚಗಳ ಸಾಮಾನ್ಯ ಮೇಲ್ವಿಚಾರಣೆ ಮತ್ತು ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಯಾವುದೇ ಕಾರ್ಯಗಳನ್ನು ನಿರ್ವಹಿಸುವುದು. |
| 3. | ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ | ಚೇರ್ಮನ್ (ಪರಿಶಿಷ್ಟ ಜಾತಿ (ಎಸ್‌ಸಿ) / ಪರಿಶಿಷ್ಟ ಪಂಗಡದ ಸದಸ್ಯರಿಂದ (ಎಸ್‌ಟಿ) ಚುನಾಯಿತರಾದವರು) | ಸಮಿತಿಯು ಈ ಕಾರ್ಯಗಳನ್ನು ಒಳಗೊಂಡಿರುತ್ತದೆ:<br>(ಎ) ಎಸ್‌ಸಿ ಮತ್ತು ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತಾಸಕ್ತಿಗಳ ಉತ್ತೇಜನೆ ಮತ್ತು ಸಾಮಾಜಿಕ ಅನ್ಯಾಯದಿಂದ ಅವರ ರಕ್ಷಣೆ.<br>(ಬಿ) ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಸಾಧಿಸುವ ಮೂಲಕ ಮಹಿಳೆಯರ ಸಬಲೀಕರಣ ಮತ್ತು ಸಾಂಸಾರಿಕ ಹಿಂಸೆಗಳು, ಲೈಂಗಿಕ ಕಿರುಕುಳ ಮುಂತಾದ ಅಪರಾಧಗಳಿಂದ ರಕ್ಷಿಸುವ ಬಗ್ಗೆ ಕಾಳಜಿ ವಹಿಸುವುದು ಮತ್ತು ಸಮಸ್ಯೆಗಳನ್ನು ಪರಿಹರಿಸುವುದು. ಅಲ್ಲದೆ, ಶಾಲೆಗಳು, ಕಚೇರಿಗಳು, ಕಾರ್ಖಾನೆಗಳು, ಆಸ್ಪತ್ರೆಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಸೌಲಭ್ಯಗಳನ್ನು ಖಾತರಿಪಡಿಸುವುದು ಮತ್ತು ಅವರ ದೈನಂದಿನ ಜೀವನವನ್ನು ಸ್ವಾತಂತ್ರ್ಯ ಮತ್ತು ಘನತೆಯಿಂದ ನಡೆಸುವ ದೃಷ್ಟಿಯಲ್ಲಿ ಮಹಿಳಾ ಸ್ನೇಹಿ ಕಾರ್ಯಕ್ರಮಗಳನ್ನು ಉತ್ತೇಜಿಸುವ ಬಗ್ಗೆ ಸಲಹೆ ನೀಡುವುದನ್ನು ಒಳಗೊಂಡಿರುತ್ತದೆ. |

ಆಧಾರ: ಕೆಪಿಆರ್ ಅಧಿನಿಯಮ, 1993

### *1.5.2 ಜಿಲ್ಲಾ ಯೋಜನಾ ಸಮಿತಿ (ಡಿಪಿಸಿ)*

ಕೆಪಿಆರ್ ಅಧಿನಿಯಮ, 1993 ರ ಪರಿಚ್ಛೇದ 309 ರನುಸಾರ, ಪ್ರತಿ ಗ್ರಾಮಪಂಚಾಯತಿಯು ನಿಗದಿತ ರೂಪದಲ್ಲಿ ವಾರ್ಷಿಕ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿಗದಿತ ಸಮಯದೊಳಗೆ ಅದನ್ನು ತಾಲ್ಲೂಕು ಪಂಚಾಯತಿಗಳಿಗೆ ರವಾನಿಸಕ್ಕದ್ದು. ತಾಲ್ಲೂಕು ಪಂಚಾಯತಿಯು ಎಲ್ಲಾ ಗ್ರಾಮ ಪಂಚಾಯತಿಗಳ ಯೋಜನೆಗಳನ್ನು ತಾಲ್ಲೂಕು ಮಟ್ಟದಲ್ಲಿ ಡಿಜಿಟಲ್ ರೂಪದಲ್ಲಿ ಕ್ರೋಢೀಕರಿಸುತ್ತದೆ ಮತ್ತು ಎಲ್ಲ ಯೋಜನೆಗಳ ಸಂಯೋಜನೆಯನ್ನು ಕೈಗೊಳ್ಳಲು ಪರಿಚ್ಛೇದ 309ಡಿ ಅಡಿಯಲ್ಲಿ ರಚಿಸಲಾದ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಮುಂದೆ ಮಂಡಿಸುತ್ತದೆ. ಕೆಪಿಆರ್ ಕಾಯ್ದೆ 1993 ರ ಪರಿಚ್ಛೇದ 310 (1) ರ ಅಡಿಯಲ್ಲಿ ರಚಿಸಲಾದ ಜಿಲ್ಲಾ ಯೋಜನಾ ಸಮಿತಿಯು (ಡಿಪಿಸಿ) ಪ್ರತಿ ಜಿಲ್ಲೆಯಲ್ಲಿನ ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು, ಗ್ರಾಮ ಪಂಚಾಯತಿಗಳು, ಪಟ್ಟಣ ಪಂಚಾಯತಿ, ಪುರಸಭೆ ಮತ್ತು ಜಿಲ್ಲಾ ಮಹಾನಗರ ಪಾಲಿಕೆಗಳು ಸಿದ್ಧಪಡಿಸಿದ ಯೋಜನೆಗಳನ್ನು ಕ್ರೋಢೀಕರಿಸಿ ಒಟ್ಟಾರೆಯಾಗಿ ಜಿಲ್ಲೆಯ ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುತ್ತದೆ. ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಲ್ಲಿ ಸರ್ಕಾರವನ್ನು ಶಕ್ತಗೊಳಿಸಲು ಈ ಕರಡು ಅಭಿವೃದ್ಧಿ ಯೋಜನೆಗಳನ್ನು ಕೆಪಿಆರ್ ಕಾಯ್ದೆ 1993 ರ ಪರಿಚ್ಛೇದ 310ಬಿ ಅಡಿಯಲ್ಲಿ ರಚಿಸಲಾದ ಕರ್ನಾಟಕ ರಾಜ್ಯ ವಿಕೇಂದ್ರೀಕೃತ

ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ (ಡಿಪಿಡಿಸಿ) ರವಾನಿಸಲಾಗುತ್ತದೆ. ಬಾಗಲಕೋಟೆ ಜಿಲ್ಲೆಯನ್ನು ಹೊರತುಪಡಿಸಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಡಿಪಿಡಿಸಿ ಯನ್ನು ರಚಿಸಲಾಗಿದೆ. ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಡಿಪಿಡಿಸಿಯನ್ನು 2020 ರ ಸೆಪ್ಟೆಂಬರ್ 3 ರ ಸರ್ಕಾರಿ ಆದೇಶದ ಮೂಲಕ ಪುನರ್ರಚಿಸಲಾಗಿದೆ. 2018–19 ಮತ್ತು 2019–20ರ ಅವಧಿಯಲ್ಲಿ ಯಾವುದೇ ಡಿಪಿಸಿ ಸಭೆಯನ್ನು ನಡೆಸಲಾಗಿಲ್ಲ.

## 1.6 ಆರ್ಥಿಕ ಅಧಿಕಾರಗಳ ನಿಯೋಜನೆ.

ಪ್ರತಿ ನಾಲ್ಕುನೂರು ಜನಸಂಖ್ಯೆಗೆ ಅಥವಾ ಪಂಚಾಯತ್ ಪ್ರದೇಶದ ಒಂದು ಭಾಗಕ್ಕೆ ಒಬ್ಬ ಸದಸ್ಯನಂತೆ ಗ್ರಾಮ ಪಂಚಾಯತಿಗಳು ಚುನಾಯಿತ ಸದಸ್ಯರನ್ನು ಒಳಗೊಂಡಿರುತ್ತವೆ. ಚುನಾಯಿತ ಸದಸ್ಯರಲ್ಲಿ ಇಬ್ಬರು ಸದಸ್ಯರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎಂದು ಆಯ್ಕೆ ಮಾಡಲಾಗುತ್ತದೆ. ಅಧ್ಯಕ್ಷರು ಗ್ರಾಮ ಪಂಚಾಯತಿಯ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ. ಪ್ರತಿ ಗ್ರಾಮ ಪಂಚಾಯತಿಯು ಚುನಾಯಿತ ಸದಸ್ಯರ ಹೊರತಾಗಿ ಸರ್ಕಾರದ ಅಧಿಕಾರಿಗಳಾದ ಪೂರ್ಣ ಕಾಲದ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಮತ್ತು ಕಾರ್ಯದರ್ಶಿಯನ್ನು ಹೊಂದಿರುತ್ತದೆ ಮತ್ತು ಸರ್ಕಾರದಿಂದ ನೇಮಿಸಲ್ಪಟ್ಟ ಅಂತಹ ಇತರ ಅಧಿಕಾರಿಗಳಿರುತ್ತಾರೆ.

ಕೆಪಿಆರ್ (ಗ್ರಾಮ ಪಂಚಾಯತಿಗಳ ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006, ರ ನಿಯಮ 77 ಮತ್ತು 80, ಗ್ರಾಮ ಪಂಚಾಯತಿಯ ಅಭಿವೃದ್ಧಿ ಕಾರ್ಯಗಳ ಅಂದಾಜುಗಳ ಅನುಮೋದನೆಗೆ ಸಂಬಂಧಿಸಿದಂತೆ ಹಣಕಾಸಿನ ಅಧಿಕಾರ ನೀಡುತ್ತದೆ. ವಿವರಗಳನ್ನು **ಕೋಷ್ಟಕ** 1.3 ರಲ್ಲಿ ನೀಡಲಾಗಿದೆ. ಹಣಕಾಸಿನ ಅಧಿಕಾರದ ನಿಯೋಜನೆಯನ್ನು ಪರಿಕ್ಷಾ ತನಿಖೆ ಒಳಪಟ್ಟ ಗ್ರಾಮ ಪಂಚಾಯತಿಗಳಲ್ಲಿ ಪಾಲಿಸಲಾಗಿದೆ.

**ಕೋಷ್ಟಕ 1.3: ಆರ್ಥಿಕ ಅಧಿಕಾರಗಳ ನಿಯೋಜನೆ**

| ವಿವರಗಳು | ಅಧಿಕಾರ | ಆರ್ಥಿಕ ಅಧಿಕಾರಗಳು |
|---|---|---|
| **ತಾಂತ್ರಿಕ ಮಂಜೂರಾತಿ.** | ಗ್ರಾಮ ಪಂಚಾಯತಿ ಅಭಿಯಂತರರು | ₹.25,000/– ರವರೆಗೆ |
| | ಜಿಲ್ಲಾ ಪಂಚಾಯತಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | > ₹.25,000 < ₹.4,00,000/– |
| | ಕಾರ್ಯನಿರ್ವಾಹಕ ಅಭಿಯಂತರರು | > ₹.4,00,000/– < ₹.10,00,000/– |
| | ಅಧೀಕ್ಷಕ ಅಭಿಯಂತರರು | ₹.10,00,000/– ಮತ್ತು ಹೆಚ್ಚಿನದು |
| **ಆಡಳಿತಾತ್ಮಕ ಅನುಮತಿ** | ಗ್ರಾಮ ಪಂಚಾಯತಿ ಅಧ್ಯಕ್ಷರು | ಗ್ರಾಮ ಪಂಚಾಯತಿ ಸಭೆಯಲ್ಲಿ ಠರಾವಿನ ಮೂಲಕ ಅಂತಹ ಅಧಿಕಾರವನ್ನು ಅಧ್ಯಕ್ಷರಿಗೆ ನಿಯೋಜಿಸಿದ್ದಲ್ಲಿ ₹.5000/– ಮೀರದಂತೆ. |
| | ಗ್ರಾಮ ಪಂಚಾಯತಿಗಳು | > ₹.5,000/– < ₹.10.00.000/– |
| | ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | > ₹.10.00.000/– < ₹.30.00.000/– |
| | ರಾಜ್ಯ ಸರ್ಕಾರ | > ₹.30.00.000/– |

## 1.7 ಲೆಕ್ಕಪತ್ರ ವ್ಯವಸ್ಥೆ

ಗ್ರಾಮ ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳು ನಿಗದಿತ ನಮೂನೆಗಳಲ್ಲಿ ರಶೀದಿ ಮತ್ತು ಪಾವತಿ ಲೆಕ್ಕಗಳು, ಆದಾಯ ಮತ್ತು ಖರ್ಚಿನ ಲೆಕ್ಕಪತ್ರಗಳು ಮತ್ತು ಬ್ಯಾಲೆನ್ಸ್ ಶೀಟ್ ಅನ್ನು ಒಳಗೊಂಡಿರುತ್ತದೆ. ಕೆಪಿಆರ್ (ಗ್ರಾಮ ಪಂಚಾಯತಿಗಳ. ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006ರಲ್ಲಿ ವಿಧಿಸಿರುವಂತೆ ಡಬಲ್ ಎಂಟ್ರಿ ಅಕೌಂಟಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ ಖಾತೆಗಳನ್ನು ಸಂಚಯ ಆಧಾರದ ಮೇಲೆ ತಯಾರಿಸಲಾಗುತ್ತದೆ. ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು ಮತ್ತು ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಯನ್ನು ಮುಂದಿನ ವರ್ಷದ ಜೂನ್ 30ರೊಳಗಾಗಿ ಅದರ ಪರಿಗಣನೆ ಮತ್ತು ಅನುಮೋದನೆಗಾಗಿ ಗ್ರಾಮಪಂಚಾಯತಿಯ ಮುಂದೆ ಮಂಡಿಸಬೇಕು.

ಹದಿಮೂರನೆಯ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ಪಂಚಾಯತ್ ರಾಜ್ ಸಂಸ್ಥೆಗಳು ಭಾರತ ಸರಕಾರವು ಸೂಚಿಸಿದಂತೆ 2011–12 ರಿಂದ ಮಾದರಿ ಪಂಚಾಯತ್ ಅಕೌಂಟಿಂಗ್ ಸಿಸ್ಟಮ್ (ಎಂಪಿಎಎಸ್) ನಲ್ಲಿ ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕು. ಹಿಂದಿನ ಸ್ವರೂಪಕ್ಕಿಂತ ಭಿನ್ನವಾಗಿ, ಎಂಪಿಎಎಸ್ ನಮೂನೆಯು ಮಾಹೆಯಾನ ಸ್ವೀಕೃತಿಗಳು ಮತ್ತು ಪಾವತಿಗಳು, ಬಜೆಟ್ ಹಂಚಿಕೆ, ಬಿಡುಗಡೆಯಾದ ಅನುದಾನ ಮತ್ತು ಖರ್ಚು, ಚರ ಮತ್ತು ಸ್ಥಿರ ಆಸ್ತಿಗಳನ್ನು ತೋರ್ಪಡಿಸಲು ಅನುಕೂಲ ಮಾಡಿಕೊಡುತ್ತದೆ. ಆದಾಗ್ಯೂ ರಾಜ್ಯದ ಗ್ರಾಮ ಪಂಚಾಯತಿಗಳು ತಮ್ಮ ಲೆಕ್ಕಪತ್ರಗಳ ನಿರ್ವಹಣೆಗೆ ಎಂಪಿಎಎಸ್ ಮಾದರಿಗಳನ್ನು ಇನ್ನೂ ಅಳವಡಿಸಿಕೊಂಡಿಲ್ಲ.

ಮೂರು ಹಂತದ ಅಕೌಂಟಿಂಗ್ ವರ್ಗೀಕರಣವನ್ನು ಗ್ರಹಿಸುವ 'ಪ್ರಿಯಸಾಫ್ಟ್' (ಪಂಚಾಯತಿ ರಾಜ್ ಇನ್ಸ್ಟಿಟ್ಯೂಶನ್ಸ್ ಅಕೌಂಟಿಂಗ್ ಸಾಫ್ಟ್‌ವೇರ್) ಅನ್ನು ಪಂಚಾಯತ್ ರಾಜ್ ಸಚಿವಾಲಯವು ಜಾರಿಗೊಳಿಸಿದ್ದು, ಅದು ಸಿಎಜಿ ಸೂಚಿಸಿದ ನಮೂನೆಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ವರದಿಗಳನ್ನು ಸೃಷ್ಟಿಸುತ್ತದೆ. ಇದು ಕೇಂದ್ರೀಕೃತ ಲೆಕ್ಕಪರಿಶೋಧಕ ತಂತ್ರಾಂಶವಾಗಿದ್ದು, ಪಂಚಾಯತ್ ರಾಜ್‌ನ ಎಲ್ಲಾ ಮೂರು ಹಂತಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಬಳಕೆಗೆ ಉದ್ದೇಶಿಸಲಾಗಿದೆ. ಪ್ರಸ್ತುತ, ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ ಹದಿನಾಲ್ಕನೆಯ ಹಣಕಾಸು ಆಯೋಗದ ಅನುದಾನದಿಂದ ಮಾಡಲಾಗುವ ಪಾವತಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಮಾತ್ರ 'ಪ್ರಿಯಸಾಫ್ಟ್' ನಿರ್ವಹಿಸುತ್ತದೆ.

ಆಡಳಿತದಲ್ಲಿ ಪಾರದರ್ಶಕತೆಗೆ ಉತ್ತೇಜನ ನೀಡಲು ಮತ್ತು ಎಲ್ಲಾ ಮಾಹಿತಿಯೂ ಲಭ್ಯವಾಗುವಂತೆ ಮಾಡಲು ಕರ್ನಾಟಕ ಸರ್ಕಾರವು ರಾಷ್ಟ್ರೀಯ ಮಾಹಿತಿ ಕೇಂದ್ರದ ಮೂಲಕ 'ಪಂಚತಂತ್ರ' ಎಂಬ ತಂತ್ರಾಂಶವನ್ನು ಅಭಿವೃದ್ಧಿಪಡಿಸಿತು. ಪಂಚತಂತ್ರವು ಡಬಲ್ ಎಂಟ್ರಿ ಅಕೌಂಟಿಂಗ್ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಮತ್ತು ಗ್ರಾಮ ಪಂಚಾಯತಿಗಳ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಮೂರು ಹಂತದ ವಿನ್ಯಾಸ ಹೊಂದಿರುವ ವೆಬ್ ಆಧಾರಿತ ಅಪ್ಲಿಕೇಶನ್ ಆಗಿದೆ. ತಂತ್ರಾಂಶವನ್ನು ಎಲ್ಲಾ ಪಂಚಾಯತಿಗಳಲ್ಲಿ 2012–13 ರಿಂದ ಜಾರಿಗೆ ತರಲಾಯಿತು. ಗ್ರಾಮಪಂಚಾಯತಿವಾರು ಆದಾಯ ಮತ್ತು ಖರ್ಚು ಪಟ್ಟಿ ಮತ್ತು ಬ್ಯಾಲೆನ್ಸ್ ಶೀಟ್ ಅನ್ನು ಪಂಚತಂತ್ರದಲ್ಲಿ ನೋಡಬಹುದು. ಇಲಾಖೆಯಿಂದ ನಿರ್ವಹಿಸಲ್ಪಟ್ಟ ವಿವಿಧ ವರದಿಗಳು ಪೋರ್ಟಲ್‌ನಲ್ಲಿ ಲಭ್ಯವಿದೆ. ಎಲ್ಲಾ ಗ್ರಾಮಪಂಚಾಯತಿಗಳು ತಮ್ಮ ದಿನನಿತ್ಯದ ಲೆಕ್ಕಪತ್ರ ವ್ಯವಹಾರಕ್ಕಾಗಿ ಪಂಚತಂತ್ರವನ್ನು ಬಳಸುತ್ತಿದ್ದಾರೆ.

## 1.8 ಗ್ರಾಮ ಪಂಚಾಯತಿಗಳ ಆಂತರಿಕ ನಿಯಂತ್ರಣ ವ್ಯವಸ್ಥೆ

ಹೊಣೆಗಾರಿಕೆ, ಅನ್ವಯವಾಗುವ ಕಾನೂನುಗಳನ್ನು ಅನುಸರಿಸುವುದು, ಆರ್ಥಿಕ, ದಕ್ಷ ಮತ್ತು ಪರಿಣಾಮಕಾರಿ ಕಾರ್ಯಾಚರಣೆಗಳನ್ನು ಖಾತರಿಪಡಿಸುವುದು ಮತ್ತು ನಷ್ಟದ ವಿರುದ್ಧ ಸಂಪನ್ಮೂಲಗಳನ್ನು

ರಕ್ಷಿಸುವಂತಹ ಸಾಮಾನ್ಯ ಉದ್ದೇಶಗಳ ಬಗ್ಗೆ ಸಮಂಜಸವಾದ ಭರವಸೆ ನೀಡಲು ಆಂತರಿಕ ನಿಯಂತ್ರಣವನ್ನು ವಿನ್ಯಾಸಗೊಳಿಸಲಾಗಿದೆ. ಆಂತರಿಕ ನಿಯಂತ್ರಣಗಳನ್ನು ಅನುಸರಿಸಲು ವಿಫಲವಾದಲ್ಲಿ ಅದಕ್ಷತೆ, ನಿಷ್ಪರಿಣಾಮ, ಹಣದ ದುರುಪಯೋಗ/ನಷ್ಟ ಅಥವಾ ದಾಸ್ತಾನುಗಳ ಸೋರುವಿಕೆ ಮುಂತಾದ ಅಪಾಯಗಳ ಸಾಧ್ಯತೆಯಿದೆ.

ಬ್ಯಾಂಕ್ ಶಿಲ್ಕಿನೊಂದಿಗೆ ನಗದು ಪುಸ್ತಕದ ನಿಯತಕಾಲಿಕ ಹೊಂದಾಣಿಕೆ, ಸ್ಥಿರ ಸ್ವತ್ತುಗಳು, ಉಗ್ರಾಣ ಮತ್ತು ದಾಸ್ತಾನುಗಳ ವಾರ್ಷಿಕ ಭೌತಿಕ ಪರಿಶೀಲನೆ, ಆಯ–ವ್ಯಯ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದು ಮತ್ತು ಅನುಮೋದಿಸುವುದು ಇತ್ಯಾದಿಗಳು ಪಂಚಾಯತ್ ರಾಜ್ ಸಂಸ್ಥೆಗಳು ಕಾರ್ಯಗತಗೊಳಿಸಬೇಕಾದ ಕೆಲವು ಪ್ರಮುಖ ಆಂತರಿಕ ನಿಯಂತ್ರಣ ಕಾರ್ಯವಿಧಾನಗಳಾಗಿವೆ. ವಾರ್ಷಿಕ ಭೌತಿಕ ಪರಿಶೀಲನೆಯು ಉಗ್ರಾಣದ ಮತ್ತು ದಾಸ್ತಾನಿನ/ಸ್ಥಿರ ಸ್ವತ್ತುಗಳ ಖಾತೆಯ ಪುಸ್ತಕಗಳಲ್ಲಿ ನಮೂದಿಸಲಾದ ಸಂಖ್ಯೆಗಳ ನಿಜವಾದ ಉಪಸ್ಥಿತಿಯನ್ನು ಖಚಿತಪಡಿಸುತ್ತದೆ. ಅಂತೆಯೇ, ಬ್ಯಾಂಕ್ ಪುಸ್ತಕದೊಂದಿಗೆ ನಗದು ಪುಸ್ತಕದ ನಿಯತಕಾಲಿಕ ಹೊಂದಾಣಿಕೆ ನಡೆಸಬೇಕು ಮತ್ತು ಬ್ಯಾಂಕ್ ದಾಖಲೆಗಳ ಪ್ರಕಾರ ಹೊಂದಾಣಿಕೆಯಾಗದ ಶಿಲ್ಕು ಮತ್ತು ನಗದು ಪುಸ್ತಕ ಯಾವುದಾದರೂ ಇದ್ದರೆ, ತನಿಖೆ ನಡೆಸಿ ಲೆಕ್ಕಗಳನ್ನು ತಾಳೆ ಮಾಡಿಕೊಳ್ಳಬೇಕಾಗುತ್ತದೆ.

ಆದರೆ, 2018–19 ಮತ್ತು 2019–20ರ ಅವಧಿಯಲ್ಲಿ 2016–18 ರ ಅವಧಿಗಾಗಿ ನಡೆಸಿದ 42 ಮತ್ತು 80 ಗ್ರಾಮ ಪಂಚಾಯತಿಗಳ ಪರೀಕ್ಷಾ ಪರಿಶೀಲನೆ ಈ ಕೆಳಕಂಡ ಅಂಶಗಳನ್ನು ಬಹಿರಂಗಗೊಳಿಸಿದೆ.

- 2017–18 ಮತ್ತು 2018–19ರ ಅವಧಿಯಲ್ಲಿ ಕ್ರಮವಾಗಿ 10 ಗ್ರಾಮ ಪಂಚಾಯತಿಗಳಲ್ಲಿ (ಶೇಕಡಾ 24) ಹಾಗೂ 61 ಗ್ರಾಮ ಪಂಚಾಯತಿಗಳಲ್ಲಿ (ಶೇಕಡಾ 76) ಉಗ್ರಾಣಗಳ ಮತ್ತು ದಾಸ್ತಾನುಗಳ ವಾರ್ಷಿಕ ಭೌತಿಕ ಪರಿಶೀಲನೆ ಮಾಡಲಾಗಿಲ್ಲ. ಗ್ರಾಮ ಪಂಚಾಯತಿಗಳು ಭೌತಿಕ ಪರಿಶೀಲನೆಯನ್ನು ನಡೆಸದೇ ಇರಲು ಯಾವುದೇ ನಿಖರವಾದ ಕಾರಣವನ್ನು ನೀಡಲಿಲ್ಲ. ಆದಾಗ್ಯೂ ಭವಿಷ್ಯದಲ್ಲಿ ವಾರ್ಷಿಕ ಭೌತಿಕ ಪರಿಶೀಲನೆಯನ್ನು ಪ್ರತಿ ವರ್ಷ ನಡೆಸಲಾಗುವುದು ಎಂದು ತಿಳಿಸಿದವು.
- 2017–18 ಮತ್ತು 2018–19ರ ಅವಧಿಯಲ್ಲಿ ಕ್ರಮವಾಗಿ 14 ಗ್ರಾಮ ಪಂಚಾಯತಿಗಳಲ್ಲಿ (ಶೇಕಡಾ 33) ಹಾಗೂ 22 ಗ್ರಾಮ ಪಂಚಾಯತಿಗಳಲ್ಲಿ (ಶೇಕಡಾ 28) ನಗದು ಪುಸ್ತಕ ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳ ಹೊಂದಾಣಿಕೆ ನಡೆಸಲಾಗಿಲ್ಲ.
- 2019–20ರ ಅವಧಿಯಲ್ಲಿ ಒಂದು ಗ್ರಾಮ ಪಂಚಾಯತಿಯಲ್ಲಿ (ದಿಡ್ಡಿಗೆ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗರೆ ಜಿಲ್ಲೆ), ದಾಸ್ತಾನು ಪ್ರಮಾಣಪತ್ರವನ್ನು ದಾಖಲಿಸದೆ ಸಿಮೆಂಟ್ ಖರೀದಿಗೆ ₹6.64 ಲಕ್ಷ ಪಾವತಿಸಲಾಗಿದೆ. ದಾಸ್ತಾನು ವಹಿಯನ್ನು ಸಹ ನಿರ್ವಹಿಸಲಾಗಿಲ್ಲ.

## 1.9 ಗ್ರಾಮ ಪಂಚಾಯತಿಗಳ ಹಣಕಾಸು / ಲೆಕ್ಕಗಳ ವಿಭಾಗದ ಕಾರ್ಯವೈಖರಿ

ಕೆಪಿಆರ್ ಅಧಿನಿಯಮ 1993 ರ ಪರಿಚ್ಛೇದ 111 ರ ಪ್ರಕಾರ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪೂರ್ಣಕಾಲದ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ), ಕಾರ್ಯದರ್ಶಿ ಮತ್ತು ಸರ್ಕಾರದಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ಇರಬೇಕು. ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಸಹಾಯ ಮಾಡುತ್ತಾರೆ.

ಕೆಪಿಆರ್ (ಗ್ರಾಮ ಪಂಚಾಯತಿಗಳ. ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006ರ ಪ್ರಕಾರ ಆಯವ್ಯಯ ಅಂದಾಜುಗಳು, ಮಾಸಿಕ ಲೆಕ್ಕಗಳು, ಅರ್ಧವಾರ್ಷಿಕ ಲೆಕ್ಕಗಳು, ಟ್ರಯಲ್ ಬ್ಯಾಲೆನ್ಸ್‌ಗಳ ತಯಾರಿ ಮಾಡುವುದು, ಹಣ ಸೆಳೆಯುವುದು ಮತ್ತು ವೆಚ್ಚಗಳಿಗೆ ಸಂಬಂಧಿಸಿದ ವಿಷಯಗಳು,

ಲೆಕ್ಕಪತ್ರಗಳನ್ನು ನಿರ್ವಹಿಸುವುದಲ್ಲದೇ ಎಲ್ಲಾ ಲೆಕ್ಕಪತ್ರಗಳನ್ನು ಸಕ್ಷಮ ಅಧಿಕಾರಿಗೆ ಸಲ್ಲಿಸಲು ಕಾರ್ಯದರ್ಶಿಗಳು ಜವಾಬ್ದಾರರಾಗಿರುತ್ತಾರೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯತಿ, ಸರ್ಕಾರ ಅಥವಾ ಲೆಕ್ಕಪರಿಶೋಧಕರಿಂದ ಕೇಳಲಾಗುವ ಮಾಸಿಕ ಲೆಕ್ಕಗಳು, ರಿಟರ್ನ್ಸ್(ಮಾಹಿತಿ ಪತ್ರಗಳು/ಪ್ರತ್ಯರ್ಪಣೆ), ಲೆಕ್ಕಪತ್ರಗಳ ಪಟ್ಟಿಗಳು ಮತ್ತು ಅಂತಹ ಇತರ ಮಾಹಿತಿಯನ್ನು ಸಲ್ಲಿಸಬೇಕು.

## 1.10 ಓಂಬುಡ್ಸ್ಮನ್

ಹದಿಮೂರನೆಯ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಮತ್ತು ಅಧಿಕಾರಿ/ಸಿಬ್ಬಂದಿಯ ವಿರುದ್ಧ ಭ್ರಷ್ಟಾಚಾರ ಮತ್ತು ದುರುಪಯೋಗದ ದೂರುಗಳನ್ನು ತನಿಖೆ ಮಾಡಲು ರಾಜ್ಯ ಸರ್ಕಾರವು ಸ್ವತಂತ್ರ ಸ್ಥಳೀಯ ಸಂಸ್ಥೆ ಓಂಬುಡ್ಸ್ಮನ್ ವ್ಯವಸ್ಥೆಯನ್ನು ಜಾರಿಗೆ ತರುವ ಅಗತ್ಯವಿದೆ. ಓಂಬುಡ್ಸ್ಮನ್ ಅಂತಹ ತನಿಖೆಗಳ ವರದಿಗಳನ್ನು ಲೋಕಾಯುಕ್ತರಿಗೆ ಸಲ್ಲಿಸುತ್ತಾರೆ, ಲೋಕಾಯುಕ್ತರು ತಮ್ಮ ಶಿಫಾರಸುಗಳೊಂದಿಗೆ ವರದಿಯನ್ನು ರಾಜ್ಯಪಾಲರಿಗೆ ಕಳುಹಿಸುತ್ತಾರೆ. ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳ ವಿರುದ್ಧ ಭ್ರಷ್ಟಾಚಾರ ಮತ್ತು ದುರುಪಯೋಗದ ದೂರುಗಳ ತನಿಖೆಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಂತಹ ಯಾವುದೇ ಓಂಬುಡ್ಸ್ಮನ್‌ನನ್ನು ನೇಮಿಸಿಲ್ಲ. ಆದರೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂಜಿಎನ್‌ಆರ್‌ಇಜಿಎಸ್) ಅಡಿಯಲ್ಲಿ ಓಂಬುಡ್ಸ್ಮನ್ ನೇಮಕ ಮಾಡುವ ವ್ಯವಸ್ಥೆಯು 2010–11 ರಿಂದ ಜಾರಿಯಲ್ಲಿದೆ ಎಂದು ಇಲಾಖೆಯು ಹೇಳಿದೆ (ಡಿಸೆಂಬರ್ 2020). ರಾಜ್ಯದ 30 ಜಿಲ್ಲೆಗಳಿಗೆ 27 ಓಂಬುಡ್ಸ್‌ಮನ್‌ಗಳನ್ನು ನೇಮಿಸುವ ಅವಕಾಶವಿತ್ತು. ಬೆಂಗಳೂರು ನಗರ/ಗ್ರಾಮಾಂತರ ಜಿಲ್ಲೆಗಳಿಗೆ ಒಬ್ಬರು, ಹಾಸನ/ಕೊಡಗು ಜಿಲ್ಲೆಗಳಿಗೆ ಒಬ್ಬರು ಮತ್ತು ಉಡುಪಿ /ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಒಬ್ಬರಂತೆ ಸಾಮಾನ್ಯ ಒಂಬುಡ್ಸ್‌ಮನ್‌ಗಳನ್ನು ನೇಮಿಸಬೇಕಿತ್ತು. ನವೆಂಬರ್ 2020 ರಲ್ಲಿದ್ದಂತೆ 25 ಜಿಲ್ಲೆಗಳಿಗೆ 23 ಓಂಬುಡ್ಸ್ಮನ್‌ಗಳು ನೇಮಕಗೊಂಡಿದ್ದು, ಉಳಿದ ಐದು[1] ಜಿಲ್ಲೆಗಳಲ್ಲಿ ಈ ಹುದ್ದೆ ಖಾಲಿಯಾಗಿತ್ತು. ವಸೂಲಾತಿಗಾಗಿ ಆದೇಶಿಸಲಾದ ₹24.12 ಕೋಟಿಗಳಲ್ಲಿ ಕೇವಲ ₹2.47 ಕೋಟಿ ವಸೂಲಿ ಮಾಡಲಾಗಿದೆ ಮತ್ತು ₹.21.65 ಕೋಟಿ ವಸೂಲಾತಿ ಬಾಕಿ ಉಳಿದಿದೆ. ಉತ್ತರವು ಆಕ್ಷೇಪಿತ ವಿಷಯಕ್ಕೆ ಅನ್ವಯಿಸುವುದಿಲ್ಲ ಮತ್ತು ಸ್ವತಂತ್ರ ಓಂಬುಡ್ಸ್ಮನ್ ನೇಮಕಕ್ಕೆ ಸಂಬಂಧಿಸಿದಂತೆ ಹದಿಮೂರನೆಯ ಹಣಕಾಸು ಆಯೋಗದ ಶಿಫಾರಸನ್ನು ಇಲಾಖೆಯು ಜಾರಿಗೆ ತಂದಿಲ್ಲವೆಂಬ ಅಂಶವು ಉಳಿಯುತ್ತದೆ.

## B.: ಹಣಕಾಸು ವ್ಯವಸ್ಥೆ

## 1.11 ಆರ್ಥಿಕ ಅವಲೋಕನ

### *1.11.1 ನಿಧಿಗಳ ಆಕರ*

ಅನುದಾನ ನಿರ್ವಹಣೆ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಗ್ರಾಮ ಪಂಚಾಯತಿಗಳ ಸಂಪನ್ಮೂಲವು ಸ್ವಂತ ಆದಾಯ[2], ರಾಜ್ಯ ಹಣಕಾಸು ಆಯೋಗದ, ಕೇಂದ್ರ ಹಣಕಾಸು ಆಯೋಗದ ಅನುದಾನ, ರಾಜ್ಯ

[1] ಬೆಂಗಳೂರು (ಗ್ರಾಮ), ಬೆಂಗಳೂರು (ನಗರ), ಹಾವೇರಿ, ಕಲಬುರಗಿ ಮತ್ತು ಕೋಲಾರ.

[2] ಕೆಪಿಆರ್ ಕಾಯ್ದೆಯ ಶೆಡ್ಯೂಲು IV ರ ಪ್ರಕಾರ, ಗ್ರಾಮ ಪಂಚಾಯತಿಗಳ ತೆರಿಗೆ ಆಧಾಯದ ಪ್ರಮುಖ ಮೂಲಗಳು ಭೂಮಿ ಮತ್ತು ಕಟ್ಟಡಗಳ ಮೇಲಿನ ತೆರಿಗೆಗಳು, ಜಾಹೀರಾತು ಮತ್ತು ಹೋರ್ಡಿಂಗ್ಸ್, ಮೊಬೈಲ್ ಟವರ್‌ಗಳು, ವಿಂಡ್‌ಮಿಲ್, ಸೋಲಾರ್ ಪಾರ್ಕುಗಳ ಮೇಲಿನ ತೆರಿಗೆಗಳಾಗಿವೆ ಮತ್ತು ತೆರಿಗೆಯೇತರ ಮೂಲಗಳೆಂದರೆ ನೀರಿನ ಶುಲ್ಕಗಳು, ಮನರಂಜನೆಯ ಮೇಲಿನ ಶುಲ್ಕಗಳು, ವಾಹನ ನಿಲುಗಡೆ ಶುಲ್ಕಗಳು, ಮಾರುಕಟ್ಟೆ ಶುಲ್ಕಗಳು, ಜಾನುವಾರುಗಳ ನೋಂದಣಿಗೆ ಶುಲ್ಕ, ಆಪ್ಟಿಕಲ್ ಫೈಬರ್ ಕೇಬಲ್ ಹಾಕಲು ರಸ್ತೆ ಅಗೆತ ಶುಲ್ಕಗಳು.

ಸರ್ಕಾರದ ಅನುದಾನ ಮತ್ತು ಭಾರತ ಸರ್ಕಾರದ ಅನುದಾನವನ್ನು ಒಳಗೊಂಡಿದೆ. 2015–19ರ ಅವಧಿಯಲ್ಲಿ ಗ್ರಾಮ ಪಂಚಾಯತಿಗಳ ಸೀಕೃತಿಗಳ ವಿವರಗಳನ್ನು **ಕೋಷ್ಟಕ 1.4** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.4: 2015–2019ರ ಅವಧಿಯಲ್ಲಿ ಗ್ರಾಮ ಪಂಚಾಯತಿಗಳ ಸ್ವೀಕೃತಿಗಳು**

(₹ ಕೋಟಿಗಳಲ್ಲಿ)

| ಅವಧಿ/ವರ್ಷ | ಕೇಂದ್ರ | ರಾಜ್ಯ | ಇತರೆ ಸೀಕೃತಿಗಳು | ಒಟ್ಟು |
|---|---|---|---|---|
| 2015–16 | 4,096.19 | 692.69 | 479.07* | 5,267.95 |
| 2016–17 | 5,180.35 | 1,054.14 | 394.63 | 6,629.12 |
| 2017–18 | 4,823.52 | 1,156.39 | 405.04 | 6,384.95 |
| 2018–19 | 4,971.17 | 1,405.96 | 511.64* | 6,888.77 |

ಆಧಾರ: ಐಎಫ್‌ಎ ವಿಭಾಗ, ಆರ್‌ಡಿಪಿಆರ್

* 2015–16ನೇ ಸಾಲಿನ ₹.0.32 ಲಕ್ಷ ಮತ್ತು 2018–19ನೇ ಸಾಲಿನ ₹.0.49 ಲಕ್ಷ ಬಡ್ಡಿ ಮೊತ್ತವನ್ನು ಒಳಗೊಂಡಿದೆ

2015–19ರ ಅವಧಿಗೆ ತೆರಿಗೆ ಮತ್ತು ತೆರಿಗೆಯೇತರ ಆದಾಯವನ್ನು ಒಳಗೊಂಡಿರುವ ಸ್ವಂತ ಆದಾಯದ ಮೂಲಗಳ ವಿವರಗಳನ್ನು **ಕೋಷ್ಟಕ 1.5** ರಲ್ಲಿ ನೀಡಲಾಗಿದೆ:

**ಕೋಷ್ಟಕ 1.5 : 2015–19ರ ಅವಧಿಗೆ ಗ್ರಾಮ ಪಂಚಾಯತಿಗಳ ಸ್ವಂತ ರಾಜಸ್ವಗಳ ವಿವರಗಳು**

(₹ ಕೋಟಿಗಳಲ್ಲಿ)

| ಅವಧಿ | ತೆರಿಗೆ ರಾಜಸ್ವಗಳು | ತೆರಿಗೆಯೇತರ ರಾಜಸ್ವಗಳು | ಒಟ್ಟು |
|---|---|---|---|
| 2015–16 | 304.46 | 174.29 | **478.75** |
| 2016–17 | 257.72 | 136.36 | **394.08** |
| 2017–18 | 293.08 | 111.96 | **405.04** |
| 2018–19 | 379.68 | 131.47 | **511.15** |

ಆಧಾರ: ಐಎಫ್‌ಎ ವಿಭಾಗ, ಆರ್‌ಡಿಪಿಆರ್

### *1.11.2 ನಿಧಿಗಳ ಬಳಕೆ*

2015–19ರ ಅವಧಿಯಲ್ಲಿ ಗ್ರಾಮ ಪಂಚಾಯತಿಗಳ ವೆಚ್ಚದ ವಿವರಗಳನ್ನು **ಕೋಷ್ಟಕ 1.6** ರಲ್ಲಿ ನೀಡಲಾಗಿದೆ:

**ಕೋಷ್ಟಕ 1.6 : 2015–2019ರ ಅವಧಿಯಲ್ಲಿ ಗ್ರಾಮ ಪಂಚಾಯತಿಗಳ ವೆಚ್ಚ**

**(₹ ಕೋಟಿಗಳಲ್ಲಿ)**

| ವರ್ಷ | ರಾಜಸ್ವ ವೆಚ್ಚ | ಬಂಡವಾಳ ವೆಚ್ಚ |
|---|---|---|
| 2015-16 | 5,335.16 | 118.89 |
| 2016-17 | 5,908.66 | 188.73 |
| 2017-18 | 6,002.66 | 207.61 |
| 2018-19 | 6,100.52 | 224.75 |

ಆಧಾರ: ಐಎಫ್‌ಎ ವಿಭಾಗ, ಆರ್‌ಡಿಪಿಆರ್

ಮೇಲ್ಕಂಡ ಅಂಕಿಅಂಶಗಳಿಂದ ಕಂಡುಬರುವುದೇನೆಂದರೆ, ಗ್ರಾಮ ಪಂಚಾಯತಿಯ ಒಟ್ಟು ಆದಾಯಗಳಿಗೆ **(ಕೋಷ್ಟಕ 1.4)** ಹೋಲಿಸಿದರೆ ಸ್ವಂತ ಆದಾಯದ **(ಕೋಷ್ಟಕ 1.5)** ಶೇಕಡಾವಾರು ಪ್ರಮಾಣವು ಶೇಕಡ 5.94 (2016–17) ರಿಂದ ಶೇಕಡ 9.1 (2015–16) ವ್ಯಾಪ್ತಿಯಲ್ಲಿತ್ತು ಮತ್ತು ರಾಜಸ್ವ ವೆಚ್ಚಕ್ಕೆ **(ಕೋಷ್ಟಕ 1.6)** ಹೋಲಿಸಿದರೆ ಸ್ವಂತ ಆದಾಯದ **(ಕೋಷ್ಟಕ 1.5)** ಕೊಡುಗೆ ಶೇಕಡ ಹತ್ತಕ್ಕಿಂತ ಕಡಿಮೆಯಿತ್ತು.

ಇದು ಗ್ರಾಮ ಪಂಚಾಯತಿಗಳು ಸ್ವಾವಲಂಬಿಗಳಲ್ಲ ಮತ್ತು ಅವು ತಮ್ಮ ದಿನನಿತ್ಯದ ಖರ್ಚುಗಳಿಗೂ (ರಾಜಸ್ವ ಖರ್ಚು) ಸಹ ಅನುದಾನವನ್ನು ಅವಲಂಬಿಸಿವೆ ಎಂಬುದನ್ನು ಸೂಚಿಸುತ್ತದೆ.

## 1.12 ಹಣಕಾಸು ಆಯೋಗದ ಶಿಫಾರಸುಗಳ ಅನುಷ್ಠಾನದ ಸ್ಥಿತಿಗತಿ

### *1.12.1 ರಾಜ್ಯ ಹಣಕಾಸು ಆಯೋಗ*

ಮೂರನೇ ರಾಜ್ಯ ಹಣಕಾಸು ಆಯೋಗವನ್ನು (ರಾ ಹ ಆ) ಆಗಸ್ಟ್ 2006 ರಲ್ಲಿ ರಚಿಸಲಾಯಿತು ಮತ್ತು ಡಿಸೆಂಬರ್ 2008 ರಲ್ಲಿ ಆಯೋಗವು ತನ್ನ ವರದಿಯನ್ನು ಸಲ್ಲಿಸಿತು. ಮೂರನೇ ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳನ್ನು ಕರ್ನಾಟಕ ಸರ್ಕಾರವು ಅಕ್ಟೋಬರ್ 2011ರ ಮಾರ್ಪಾಡುಗಳೊಂದಿಗೆ ಆರ್ಥಿಕ ವರ್ಷ 2011–12 ರಿಂದ 2017–18 ರವರೆಗೆ ಅನ್ವಯಗೊಳಿಸಿ ಅಂಗೀಕರಿಸಿತು. ಪ್ರತಿ ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳಿಗೆ ಹಣ ಹಂಚಿಕೆಯ ಸೂಚಕಗಳು ಆಯಾ ಗ್ರಾಮೀಣ ಜನಸಂಖ್ಯೆ, ಭೌಗೋಳಿಕ ಪ್ರದೇಶ, ಅನಕ್ಷರತೆ ಮುಂತಾದ ಮಾನದಂಡಗಳನ್ನು ಆಧರಿಸಿವೆ.

ಡಿಸೆಂಬರ್ 2015ರಲ್ಲಿ ರಚಿಸಲಾದ ನಾಲ್ಕನೇ ರಾಜ್ಯ ಹಣಕಾಸು ಆಯೋಗವು ಮೇ 2018 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. 2018–19 ರಿಂದ 2022–23ರ ಅವಧಿಗೆ ಅನ್ವಯವಾಗುವಂತೆ ಕರ್ನಾಟಕ ಸರ್ಕಾರವು ಡಿಸೆಂಬರ್ 2018ರಲ್ಲಿ ನಾಲ್ಕನೇ ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿತು. ಶಿಫಾರಸುಗಳ ಪ್ರಕಾರ, ಋಣೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳಲ್ಲಿ (ಎನ್ ಎಲ್ ಎನ್ ಓ ಆರ್ ಆರ್)[3] ಪಂಚಾಯತ್ ರಾಜ್ ಸಂಸ್ಥೆಗಳ ಪಾಲಿನ ಶೇ.7.76ರಷ್ಟನ್ನು ಗ್ರಾಮ ಪಂಚಾಯತಿಗಳಿಗಾಗಿ ಮೀಸಲಿಡಬೇಕಾಗಿತ್ತು. ರಾಜ್ಯ ಹಣಕಾಸು ಆಯೋಗದ ಪ್ರಮುಖ ಶಿಫಾರಸುಗಳು ಮತ್ತು ಅವುಗಳ ಮಾರ್ಪಾಡುಗಳನ್ನು **ಅನುಬಂಧ 1.3** ರಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯ ಹಣಕಾಸು ಆಯೋಗವು ನಿಗದಿಪಡಿಸಿದ ಮತ್ತು 2015–19ರ ಅವಧಿಯಲ್ಲಿ ರಾಜ್ಯ ಸರ್ಕಾರವು ಗ್ರಾಮ ಪಂಚಾಯತಿಗಳಿಗೆ ವರ್ಗಾಯಿಸಿದ ಶಾಸನಬದ್ಧ ಅನುದಾನದ ವಿವರಗಳನ್ನು **ಕೋಷ್ಟಕ 1.7** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.7: ಬಿಡುಗಡೆಯಾದ ಅನುದಾನದ ಸ್ಥಿತಿ**

(₹ ಕೋಟಿಗಳಲ್ಲಿ)

| ಸಾಮಾನ್ಯ ಅನುದಾನ | | | | |
|---|---|---|---|---|
| **ರಾ.ಹ.ಆ.** | ವರ್ಷ | ಹಂಚಿಕೆ | ಬಿಡುಗಡೆ | ಶಿಲ್ಕು |
| 3ನೇ | 2015–16 | 616.62 | 616.62 | 0 |
| 3ನೇ | 2016–17 | 638.04 | 638.04 | 0 |
| 3ನೇ | 2017–18 | 623.42 | 623.42 | 0 |
| 4ನೇ | 2018–19 | 902.99 | 902.99 | 0 |

ಆಧಾರ: ಪಿಆರ್–1 ವಿಭಾಗ, ಆರ್ ಡಿ ಪಿ ಆರ್

[3] ಸಂಗ್ರಹ ಶುಲ್ಕಗಳ ವೆಚ್ಚವನ್ನು ಕಡಿತಗೊಳಿಸಿದ ನಂತರ ತೆರಿಗೆ ಮತ್ತು ತೆರಿಗೆಯೇತರ ಆಕರಗಳನ್ನು ಒಳಗೊಂಡ ರಾಜ್ಯದ ಸ್ವಂತ ಆದಾಯವನ್ನು 'ಎನ್ ಎಲ್ ಎನ್ ಓ ಆರ್ ಆರ್' ಒಳಗೊಂಡಿದೆ.

2015–16ರಲ್ಲಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾದ ಶಾಸನಬದ್ಧ ಅನುದಾನವು ₹616.62 ಕೋಟಿಯಿದ್ದು 2018–19ರಲ್ಲಿ ₹902.99 ಕೋಟಿಗೆ ಹೆಚ್ಚಾಗಿದೆ.

### *1.12.2 ಕೇಂದ್ರ ಹಣಕಾಸು ಆಯೋಗ*

ಹದಿನಾಲ್ಕನೆಯ ಹಣಕಾಸು ಆಯೋಗವು 2015–16 ರಿಂದ 2019–20ರ ಅವಧಿಯಲ್ಲಿ ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಮೂಲ ಅನುದಾನದ ಬಾಬ್ತು ₹8,359.79 ಕೋಟಿಯನ್ನೂ, 2016–17 ರಿಂದ 2019–20ರ ಅವಧಿಯಲ್ಲಿ ಕಾರ್ಯಕ್ಷಮತೆ ಅನುದಾನಕ್ಕೆ ₹928.87 ಕೋಟಿ ಅನುದಾನವನ್ನೂ ನಿಗದಿಪಡಿಸಿದೆ. ಪ್ರತಿ ಹಣಕಾಸು ವರ್ಷದಲ್ಲಿ ಎರಡು ಕಂತುಗಳಲ್ಲಿ (ಜೂನ್ ಮತ್ತು ಅಕ್ಟೋಬರ್) ಅನುದಾನವನ್ನು ಭಾರತ ಸರಕಾರವು ಬಿಡುಗಡೆ ಮಾಡಬೇಕಿತ್ತು. ಎರಡನೇ ಕಂತಿನ ಬಿಡುಗಡೆಯು ಮೊದಲ ಕಂತಿನ ಬಳಕೆಯ ಪ್ರಮಾಣಪತ್ರದ ಸ್ವೀಕೃತಿಗೆ ಒಳಪಟ್ಟಿತ್ತು. ಭಾರತ ಸರ್ಕಾರದಿಂದ ಹದಿನಾಲ್ಕನೆಯ ಹಣಕಾಸು ಆಯೋಗದ ಕಡೆಗೆ ಪಡೆದ ಮತ್ತು 2015–19ರ ಅವಧಿಯಲ್ಲಿ ರಾಜ್ಯ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಿದ ನಿಧಿಯ ವಿವರಗಳನ್ನು **ಕೋಷ್ಟಕ 1.8** ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.8: ಬಿಡುಗಡೆಯಾದ ಅನುದಾನದ ಸ್ಥಿತಿ**

(₹ ಕೋಟಿಗಳಲ್ಲಿ)

| ವರ್ಷ | ಮೂಲ ಅನುದಾನ | | | ಕಾರ್ಯಕ್ಷಮತೆ ಅನುದಾನ | | |
|---|---|---|---|---|---|---|
| | ಹಂಚಿಕೆ | ಬಿಡುಗಡೆ | ಕೊರತೆ | ಹಂಚಿಕೆ | ಬಿಡುಗಡೆ | ಕೊರತೆ |
| 2015–16 | 1,002.85 | 972.36 | 30.49 | 0 | 0 | 0 |
| 2016–17 | 1,388.62 | 1,368.21 | 20.41 | 182.15 | 179.45 | 2.70 |
| 2017–18 | 1,604.42 | 1,580.18 | 24.24 | 206.13 | 204.08* | 2.05 |
| 2018–19 | 1,856.02 | 1,841.54 | 14.48 | 234.08 | 0 | 234.08 |

ಆಧಾರ: ಹಣಕಾಸು ಲೆಕ್ಕಗಳು * ಜೂನ್ 2018 ರಲ್ಲಿ ಬಿಡುಗಡೆಯಾಯಿತು

2018–19ನೇ ಸಾಲಿನ ನಿಗದಿತ ಕಾರ್ಯಕ್ಷಮತೆ ಅನುದಾನವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ 2019ರ ಮಾರ್ಚ್ ಅಂತ್ಯದವರೆಗೆ ಭಾರತ ಸರ್ಕಾರವು ಬಿಡುಗಡೆ ಮಾಡಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು (ಸೆಪ್ಟೆಂಬರ್ 2019 ರಲ್ಲಿ) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದ 2018–19 ನೇ ಸಾಲಿನ ಕಾರ್ಯಕ್ಷಮತೆ ಅನುದಾನದ ಬೇಡಿಕೆಯನ್ನು ಭಾರತ ಸರ್ಕಾರಕ್ಕೆ ರವಾನಿಸಲಾಗಿದೆ ಎಂದು ಹೇಳಿದೆ. ಆದರೆ ಅನುದಾನವನ್ನು ಬಿಡುಗಡೆ ಮಾಡಲಾಗಿಲ್ಲ. ಈ ಕುರಿತು ಒಂದು ಜ್ಞಾಪನೆಯನ್ನು ಮಾನ್ಯ ಮುಖ್ಯಮಂತ್ರಿಗಳು 18 ಸೆಪ್ಟೆಂಬರ್ 2020 ರಂದು ಮಾನ್ಯ ಹಣಕಾಸು ಸಚಿವರು, ಭಾರತ ಸರಕಾರ ಇವರಿಗೆ ಕಳುಹಿಸಿದ್ದಾರೆ.

## C: ಗ್ರಾಮ ಪಂಚಾಯತಿಗಳಲ್ಲಿ ಸಾರ್ವಜನಿಕ ಉತ್ತರದಾಯಿತ್ವದ ವ್ಯವಸ್ಥೆ

## 1.13 ಹಣಕಾಸುಗಳ ಬಗೆಗಿನ ವರದಿ ಮಾಡಲು ವಿಧಿಸಿರುವ ಚೌಕಟ್ಟು

ಕೆಪಿಆರ್ (ಗ್ರಾಮ ಪಂಚಾಯತಿಗಳ ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006ರನುಸಾರ ಹಣಕಾಸಿನ ವರ್ಷದ ವಾರ್ಷಿಕ ಹಣಕಾಸು ಲೆಕ್ಕಪತ್ರಗಳು ಗ್ರಾಮ ಪಂಚಾಯತಿಗಳ ಮತ್ತು ಲೆಕ್ಕಗಳ ಮೇಲಿನ

ಟಿಪ್ಪಣಿಯೊಂದಿಗೆ ಮುಂದಿನ ವರ್ಷದ ಜೂನ್ 30ರ ಒಳಗಾಗಿ ಗ್ರಾಮ ಪಂಚಾಯತಿಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಬೇಕು.

## 1.14 ಲೆಕ್ಕಪರಿಶೋಧನಾ ವ್ಯವಸ್ಥೆ

### *1.14.1 ಗ್ರಾಮ ಪಂಚಾಯತಿಗಳ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆ*

ಸಂಬಂಧಿತ ಕಾಯಿದೆಗಳಲ್ಲಿ ಮತ್ತು ಹಣಕಾಸು / ಲೆಕ್ಕಪತ್ರನಿರ್ವಹಣೆಯ ನಿಯಮಗಳಲ್ಲಿ ವಹಿಸಲಾಗಿರುವ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯ ಮಟ್ಟವನ್ನು ಪರೀಕ್ಷಿಸಲು ಮತ್ತು ಮೌಲ್ಯಮಾಪನ ಮಾಡಲು ಆಂತರಿಕ ಲೆಕ್ಕಪರಿಶೋಧನೆಯು ಒಂದು ಪ್ರಮುಖ ಸಾಧನವಾಗಿದೆ ಮತ್ತು ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಹಾನಿ ಸಂಭವನೀಯ ನಿರ್ವಹಣೆ ಮತ್ತು ಆಂತರಿಕ ನಿಯಂತ್ರಣ ಚೌಕಟ್ಟಿನ ಪರ್ಯಾಪ್ತತೆಯ ಬಗ್ಗೆ ಆಡಳಿತಗಾರರಿಗೆ ಭರವಸೆ ನೀಡುತ್ತದೆ.

ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಗೆ ರಾಜ್ಯ ಸರ್ಕಾರವು ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಹೊಂದಿರಲಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗದ ಸಂಸ್ಥಾಪನೆಗೆ ಹಣಕಾಸು ಇಲಾಖೆಯು (ಆಗಸ್ಟ್ 2019ರಲ್ಲಿ) ಸಮ್ಮತಿ ನೀಡಿದಾಗ್ಯೂ, ನವೆಂಬರ್ 2020ರ ವೇಳೆಗೂ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ರಚಿಸಲಾಗಿಲ್ಲ.

### *1.14.2 ಬಾಹ್ಯ ಲೆಕ್ಕಪರಿಶೋಧನೆ*

#### 1.14.2.1 ಪ್ರಾಥಮಿಕ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ

ಕೆಪಿಆರ್ ಅಧಿನಿಯಮ 1993 ರ ಪರಿಚ್ಛೇದ 246(1) ರ ಪ್ರಕಾರ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು (ಕೆಎಸ್ಎಎಡಿ) ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಬಾಹ್ಯ ಲೆಕ್ಕಪರಿಶೋಧನಾ ಸಂಸ್ಥೆಯಾಗಿದೆ. ಇದರ ಕರ್ತವ್ಯವು, ಇನ್ನಿತರ ಕರ್ತವ್ಯಗಳೊಂದಿಗೆ, ಲೆಕ್ಕಪತ್ರಗಳ ನಿಖರತೆಯನ್ನು ಪ್ರಮಾಣೀಕರಿಸುವುದು, ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ನಿರ್ಧರಣೆ ಮಾಡುವುದು ಮತ್ತು ನಷ್ಟ, ಕಳ್ಳತನ ಮತ್ತು ವಂಚನೆಯ ಪ್ರಕರಣಗಳನ್ನು ಲೆಕ್ಕಪರಿಶೋಧನೆಗೆ ಒಳಪಟ್ಟ ಘಟಕಗಳಿಗೆ ಮತ್ತು ರಾಜ್ಯ ಸರ್ಕಾರಕ್ಕೆ ವರದಿ ಮಾಡುವುದನ್ನು ಒಳಗೊಂಡಿರುತ್ತದೆ.

ಕೆಪಿಆರ್ ಅಧಿನಿಯಮ 1993 ಪರಿಚ್ಛೇದ 246(12) ರ ಪ್ರಕಾರ, ನಿಯಂತ್ರಕರು, ಕೆಎಸ್ಎಎಡಿ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಕ್ರೋಢೀಕೃತ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಮತ್ತು ರಾಜ್ಯ ಸರ್ಕಾರವು ಅಂತಹ ವರದಿಯನ್ನು ರಾಜ್ಯ ವಿಧಾನಸಭೆಯ ಉಭಯ ಸದನಗಳ ಮುಂದೆ ಮಂಡಿಸಬೇಕು. 2015–16ರ ವರೆಗಿನ ಗ್ರಾಮ ಪಂಚಾಯತಿಗಳ ಕ್ರೋಢೀಕೃತ ವಾರ್ಷಿಕ ವರದಿಯನ್ನು ರಾಜ್ಯ ವಿಧಾನಸಭೆಯ ಮುಂದೆ ಮಂಡಿಸಲಾಗಿದೆ.

#### 1.14.2.2 ಹಣಕಾಸು ಲೆಕ್ಕಪತ್ರಗಳ ಪ್ರಮಾಣೀಕರಣ

ಕೆಪಿಆರ್ ಅಧಿನಿಯಮ 1993 ರ ಪರಿಚ್ಛೇದ 246 ರ ಪ್ರಕಾರ ಪ್ರತಿಯೊಂದು ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ನಿಯಂತ್ರಕರು, ಕೆಎಸ್ಎಎಡಿ, ಇವರಿಂದ ಅಧಿಕಾರ ಪಡೆದಂತಹ ಅಧಿಕಾರಿಯು ಪ್ರತಿವರ್ಷ ಲೆಕ್ಕಪರಿಶೋಧನೆ ಮಾಡತಕ್ಕದ್ದು. ಕೆಪಿಆರ್ (ಗ್ರಾಮ ಪಂಚಾಯತಿಗಳ ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006 ಲೆಕ್ಕ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು ಸೂಚಿಸುತ್ತದೆ. ನಿಗದಿತ ಕಾರ್ಯವಿಧಾನದ ಪ್ರಕಾರ, ಲೆಕ್ಕಪರಿಶೋಧನೆಯನ್ನು ನಡೆಸಲು ಅನುವಾಗುವಂತೆ ಅನುಮೋದಿತವಾದ ಲೆಕ್ಕಪತ್ರಗಳನ್ನು ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತಿ ಮತ್ತು ಸಂಬಂಧಪಟ್ಟ

ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವೃತ್ತ ಇವರಿಗೆ ಕಳುಹಿಸತಕ್ಕದ್ದು. ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವೃತ್ತ, ಇವರು, ಲೆಕ್ಕಪರಿಶೋಧನೆ ಪೂರ್ಣಗೊಂಡ ಒಂದು ತಿಂಗಳೊಳಗೆ, ನಿಯಂತ್ರಕರು, ಕೆಎಸ್ಎಎಡಿ ಇವರ ಪರವಾಗಿ ಲೆಕ್ಕಪರಿಶೋಧನಾ ವರದಿಯನ್ನು ಜಾರಿಮಾಡಬೇಕಿದ್ದು, ಗ್ರಾಮಪಂಚಾಯತಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗೆ ಲೆಕ್ಕಪರಿಶೋಧನಾ ವರದಿಯನ್ನು ನೀಡಬೇಕು ಮತ್ತು ವಾರ್ಷಿಕ ರಶೀದಿ ಮತ್ತು ಪಾವತಿ ಲೆಕ್ಕಗಳು, ಆದಾಯ ಮತ್ತು ಖರ್ಚು ಲೆಕ್ಕ ಮತ್ತು ಗ್ರಾಮ ಪಂಚಾಯತಿಯ ಆಸ್ತಿ ಮತ್ತು ಜವಾಬ್ದಾರಿಯ ಪ್ರಮಾಣೀಕೃತ ಪಟ್ಟಿಯನ್ನು ಒಳಗೊಂಡಿದೆ ಎಂದು ಖಚಿತಪಡಿಸಿಕೊಳ್ಳಬೇಕು. ನಿಗದಿತ ಅವಧಿಯೊಳಗೆ ಲೆಕ್ಕಪರಿಶೋಧನಾ ಪ್ರಾಧಿಕಾರಕ್ಕೆ ಲೆಕ್ಕಪತ್ರಗಳನ್ನು ಒದಗಿಸಲು ವಿಫಲವಾದ ಗ್ರಾಮ ಪಂಚಾಯತಿಗಳಿಗೆ ಹಣವನ್ನು ಬಿಡುಗಡೆ ಮಾಡುವುದನ್ನು ರಾಜ್ಯ ಸರ್ಕಾರವು ತಡೆಹಿಡಿಯಬಹುದಾದ್ದರಿಂದ ಲೆಕ್ಕಪರಿಶೋಧನೆಯು ಮುಖ್ಯವಾಗಿದೆ. ಕೆಎಸ್ಎಎಡಿಯು ಪ್ರಮಾಣೀಕರಿಸಿರುವ ಗ್ರಾಮ ಪಂಚಾಯತಿಗಳ ಲೆಕ್ಕಪತ್ರ ವಿವರಗಳನ್ನು **ಕೋಷ್ಟಕ 1.9** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.9: ಜನವರಿ 2021 ರಲ್ಲಿದ್ದಂತೆ ಕೆಎಸ್ಎಎಡಿಯು ಕೈಗೊಂಡ ಲೆಕ್ಕಪತ್ರಗಳ ಪ್ರಮಾಣೀಕರಿಸಿರುವ ವಿವರ**

| ವರ್ಷ | ಗ್ರಾಪಂಗಳ ಸಂಖ್ಯೆ | ಕೆಸ್ಎಎಡಿಯಿಂದ ಲೆಕ್ಕಪತ್ರಗಳ ಪ್ರಮಾಣೀಕರಿಸಿರುವ ಗ್ರಾಪಂಗಳ ಸಂಖ್ಯೆ |
|---|---|---|
| **2014–15** | 5,629 | 3,637 |
| **2015–16** | 6,022 | 3,754 |
| **2016–17** | 6,022 | 3,757 |
| **2017–18** | 6,022 | 3,692 |
| **2018–19** | 6,022 | 3,936 |

ಆಧಾರ: ಕೆಎಸ್ಎಎಡಿ ಒದಗಿಸಿದ ಮಾಹಿತಿ

### 1.14.2.3 ಅನುಪಾಲನಾ ಲೆಕ್ಕಪರಿಶೋಧನೆ

ಕೆಎಸ್ಎಎಡಿಯು ಜನವರಿ 2021 ರವರೆಗೆ ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ನಡೆಸಿದ ಲೆಕ್ಕಪರಿಶೋಧನೆಯ ವಿವರಗಳನ್ನು **ಕೋಷ್ಟಕ 1.10** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.10: ಜನವರಿ 2021 ರಂತೆ ಕೆಎಸ್ಎಎಡಿಯಿಂದ ನಡೆಸಲಾದ ಗ್ರಾಮ. ಪಂ.ಗಳ ಲೆಕ್ಕಪರಿಶೋಧನೆಯ ವಿವರ**

| ವರ್ಷ | ಗ್ರಾಮ ಪಂಚಾಯತಿಗಳ ಸಂಖ್ಯೆ | ಲೆಕ್ಕ ಪರಿಶೋಧನೆಗೆ ಒಳಪಟ್ಟ ಗ್ರಾಪಂಗಳು |
|---|---|---|
| **2014–15** | 5,629 | 4,981 |
| **2015–16** | 6,022 | 5,401 |
| **2016–17** | 6,022 | 5,450 |
| **2017–18** | 6,022 | 5,309 |
| **2018–19** | 6,022 | 5,442 |

ಆಧಾರ: ಕೆಎಸ್ಎಎಡಿ ಒದಗಿಸಿದ ಮಾಹಿತಿ

#### 1.14.2.4 ಸಿಎಜಿ ಅವರಿಂದ ಟಿಜಿಸ್ ರಡಿಯಲ್ಲಿ ಲೆಕ್ಕಪರಿಶೋಧನೆ.

ಸಿಎಜಿ ರವರು ಕೈಗೊಂಡ ಲೆಕ್ಕಪರಿಶೋಧನೆಯ ವಿವರಗಳನ್ನು ಅಧ್ಯಾಯ 3 ರಲ್ಲಿ ಚರ್ಚಿಸಲಾಗಿದೆ.

#### 1.14.2.5 ಸಾಮಾಜಿಕ ಲೆಕ್ಕಪರಿಶೋಧನೆ

ಸಾಮಾಜಿಕ ಲೆಕ್ಕಪರಿಶೋಧನೆಯು, ಸರ್ಕಾರ ಮತ್ತು ಜನರು ಜಂಟಿಯಾಗಿ, ವಿಶೇಷವಾಗಿ ಯೋಜನೆಗಳಿಂದ ಬಾಧಿತರಾಗುವವರು ಅಥವಾ ಅಂತಹ ಯೋಜನೆಗಳ ಉದ್ದೇಶಿತ ಫಲಾನುಭವಿಗಳು ಯೋಜನೆಯ ಗುರಿಯ/ಅನುಷ್ಠಾನದ ಬಗ್ಗೆ ನಡೆಸುವ ಲೆಕ್ಕಪರಿಶೋಧನೆಯಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005, (ಎಂಜಿಎನ್‌ಆರ್‌ಇಜಿಎ)[4] ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯೊಳಗೆ ಕೈಗೆತ್ತಿಕೊಂಡ ಯೋಜನೆಯಡಿಯ ಎಲ್ಲಾ ಕಾರ್ಯಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಗ್ರಾಮಸಭೆಯಿಂದ ಕಡ್ಡಾಯಗೊಳಿಸಿದ ಮೊದಲ ಕಾಯಿದೆಯಾಗಿದೆ. ಸಾಮಾಜಿಕ ಲೆಕ್ಕಪರಿಶೋಧನೆಗೆ ಅನುಕೂಲವಾಗುವಂತೆ, ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸಿಎಜಿಯವರೊಂದಿಗೆ ಸಮಾಲೋಚಿಸಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಲೆಕ್ಕಪರಿಶೋಧನಾ ನಿಯಮಗಳನ್ನು ಅಧಿಸೂಚಿಸಿತು (2011). ತತ್ಪರಿಣಾಮವಾಗಿ, ಕರ್ನಾಟಕ ಸರ್ಕಾರವು ಕರ್ನಾಟಕದಲ್ಲಿ ಯೋಜನಾ ಅನುಷ್ಠಾನದಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ನಿಯಮಗಳು 2011 ರನ್ನು (ಜನವರಿ 2012ರಲ್ಲಿ) ಜಾರಿಗೊಳಿಸಿತು. ಈ ನಿಯಮಗಳಿಗೆ ಅನುಸಾರವಾಗಿ, ನಿರ್ದೇಶಕರ ನೇತೃತ್ವದ ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯವನ್ನು (ಇನ್ನು ಮುಂದೆ ಸಾಮಾಜಿಕ ಲೆಕ್ಕಪರಿಶೋಧನಾ ಘಟಕ ಎಂದು ಕರೆಯಲಾಗುತ್ತದೆ) ಸಂಘಗಳ ನೋಂದಣಿ ಕಾಯ್ದೆ 1960ರ ಅಡಿಯಲ್ಲಿ ರಚಿಸಿ ನೋಂದಾಯಿಸಲಾಗಿದೆ (ಮೇ 2012).

ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕಾದ ಕಾರ್ಯಕ್ರಮಗಳು/ಯೋಜನೆಗಳ ವಿವರಗಳು ಮತ್ತು 2018-19ರ ಅವಧಿಯಲ್ಲಿ ಅನುಷ್ಠಾನದ ಸ್ಥಿತಿಯನ್ನು **ಕೋಷ್ಟಕ 1.11** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.11: 2018-19ರ ಅವಧಿಯಲ್ಲಿ ನಡೆಸಿದ ಸಾಮಾಜಿಕ ಲೆಕ್ಕಪರಿಶೋಧನೆಯ ವಿವರಗಳು**

| ಕ್ರ.ಸಂ. | ಯೋಜನೆಯ ಹೆಸರು | ಅಧ್ಯಾದೇಶ | ಆವರ್ತಕತೆ | ಲೆಕ್ಕಪರಿಶೋದನೆಗಳ ಸಂಖ್ಯೆ |
|---|---|---|---|---|
| 1 | ಎಂಜಿಎನ್‌ಆರ್‌ಇಜಿ ಯೋಜನೆ | ಎಂಜಿಎನ್‌ಆರ್‌ಇಜಿ ಕಾಯ್ದೆ, 2005 | ಪ್ರತಿ ಗ್ರಾಮಪಂಚಾಯತಿಯಲ್ಲಿ ವರ್ಷಕ್ಕೆ ಎರಡುಬಾರಿ (6,022) | 11,942 |
| 2 | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ (ಎನ್‌ಆರ್‌ಡಿಡಬ್ಲ್ಯೂಪಿ) | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ ಮಾರ್ಗಸೂಚಿ. | ಪ್ರತಿ ಗ್ರಾಮಪಂಚಾಯತಿಯಲ್ಲಿ ವರ್ಷಕ್ಕೆ ಎರಡುಬಾರಿ | ಲೆಕ್ಕಪರಿಶೋದನೆ ನಡೆಸಿಲ್ಲ |
| 3 | ಸ್ವಚ್ಛ ಭಾರತ ಅಭಿಯಾನ (ಎಸ್‌ಬಿಎಂ) | ಎಸ್‌ಬಿಎಂ ಮಾರ್ಗಸೂಚಿ | ಪ್ರತಿ ಗ್ರಾಮಪಂಚಾಯತಿಯಲ್ಲಿ ವರ್ಷಕ್ಕೆ ಎರಡುಬಾರಿ | |
| 4 | ಮಧ್ಯಾಹ್ನದ ಊಟದ ಯೋಜನೆ (ಎಂಡಿಎಂ) | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸೂಚನೆಗಳು | ಲಭ್ಯವಿಲ್ಲ | |
| 5 | ಸಾರ್ವಜನಿಕ ಪಡಿತರ ವ್ಯವಸ್ಥೆ (ಪಿಡಿಎಸ್) | ರಾಷ್ಟ್ರೀಯ ಆಹಾರ ಸುರಕ್ಷತಾ ಕಾಯ್ದೆ | ಎಲ್ಲಾ ನ್ಯಾಯ ಬೆಲೆ ಅಂಗಡಿಗಳು 'ನಿಯತಕಾಲಿಕವಾಗಿ' | |

ಆಧಾರ: ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯವು ಒದಗಿಸಿದ ಮಾಹಿತಿ

ಮೇಲಿನ ಕೋಷ್ಟಕವು ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಎಂಜಿಎನ್‌ಆರ್‌ಇಜಿಎಸ್‌ಗಾಗಿ ಮಾತ್ರ ನಿಯಮಿತವಾಗಿ ನಡೆಸಲಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ.

[4] ಕಾಯ್ದೆಯ ಪರಿಚ್ಛೇದ 17, ಉಪವಿಭಾಗ 1, 2 ಮತ್ತು 3 ರ ಅಡಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯ ಮುಖ್ಯ ಜವಾಬ್ದಾರಿಯನ್ನು ಗ್ರಾಮಸಭೆಗೆ ಒದಗಿಸಲಾಯಿತು.

ಮಾಸ್ಟರ್ ಸುತ್ತೋಲೆಯ[5] ಪ್ರಕಾರ, ರಾಜ್ಯ ಸರ್ಕಾರವು ಸಾಮಾಜಿಕ ಲೆಕ್ಕಪರಿಶೋಧನಾ ಘಟಕಗಳನ್ನು ಸ್ಥಾಪಿಸಬೇಕಾಗಿದೆ ಮತ್ತು ಪ್ರತಿ ಘಟಕದ ನೇತೃತ್ವವನ್ನು ಆಡಳಿತ ಮಂಡಳಿಯು ವಹಿಸುತ್ತದೆ. ಇದು ನಿಯತಕಾಲಿಕವಾಗಿ ಘಟಕದ ಕಾರ್ಯಕ್ಷಮತೆಯನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತದೆ ಮತ್ತು ಅಗತ್ಯವಿದ್ದಾಗ ಘಟಕಕ್ಕೆ ಸಲಹೆ ಮತ್ತು ನಿರ್ದೇಶನವನ್ನು ನೀಡುತ್ತದೆ.

ಮಾಸ್ಟರ್ ಸುತ್ತೋಲೆಯು ಈ ಕೆಳಗಿನಂತೆ ಷರತ್ತುಗಳನ್ನು ವಿಧಿಸುತ್ತದೆ.

- ಸಾಮಾಜಿಕ ಲೆಕ್ಕಪರಿಶೋಧನಾ ವರದಿಗಳನ್ನು (ಎಸ್ಎಆರ್) ಸ್ಥಳೀಯ ಭಾಷೆಯಲ್ಲಿ ತಯಾರಿಸಬೇಕು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆ ಪೂರ್ಣಗೊಂಡ 48 ಗಂಟೆಗಳ ಒಳಗೆ ಗ್ರಾಮಪಂಚಾಯತಿಯ ಸೂಚನಾ ಫಲಕದಲ್ಲಿ ಮತ್ತು ಸಾರ್ವಜನಿಕ ಡೊಮೇನ್‌ನಲ್ಲಿ ಪ್ರದರ್ಶಿಸಬೇಕು. ಗ್ರಾಮ ಸಭೆಯ ಜರುಗಿದ ಎರಡು ದಿನಗಳಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ವರದಿಗಳನ್ನು ವ್ಯವಸ್ಥಾಪನಾ ಮಾಹಿತಿ ವಿಧಾನದಲ್ಲಿ ಅಪ್‌ಲೋಡ್ ಮಾಡಲಾಗಿದೆಯೆಂದು ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ಖಚಿತಪಡಿಸಿಕೊಳ್ಳಬೇಕು.. ಒಮ್ಮೆ ಗ್ರಾಮ ಸಭೆ/ವಾರ್ಡ್ ಸಭೆಯು ಅನುಮೋದಿಸಿದ ಎಸ್ಎಆರ್‌ಗಳನ್ನು ಸಾಮಾಜಿಕ ಲೆಕ್ಕಪರಿಶೋಧನೆ ಪೂರ್ಣಗೊಂಡ 24 ಗಂಟೆಗಳ ಒಳಗೆ ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಮತ್ತು ರಾಜ್ಯ ಸಾಮಾಜಿಕ ಲೆಕ್ಕಪರಿಶೋಧನಾ ಘಟಕಕ್ಕೆ ಸಲ್ಲಿಸಬೇಕಾಗುತ್ತದೆ.
- ಸಾಮಾಜಿಕ ಲೆಕ್ಕಪರಿಶೋಧನೆಯ ಸಮಯದಲ್ಲಿ ಕಂಡುಬರುವ ಹಣಕಾಸಿನ ಅಕ್ರಮಗಳ ಪ್ರತಿಯೊಂದು ನಿದರ್ಶನಕ್ಕೂ, ಎಫ್ಐಆರ್ ನೋಂದಣಿಗಾಗಿ ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ಲಿಖಿತ ದೂರನ್ನು ಜಿಲ್ಲಾ ಕಾರ್ಯಕ್ರಮ ಸಂಯೋಜಕರಿಗೆ ಸಲ್ಲಿಸಬೇಕು.
- ಪರಿಶೋಧನಾ ಆಕ್ಷೇಪಣೆಗಳ/ಶೋಧಗಳ ಬಗ್ಗೆ ಸಮಯ ಬದ್ಧ ಅನುಸರಣಾ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿಯನ್ನು ಅನುಷ್ಠಾನಗೊಳಿಸುವ ಸಂಸ್ಥೆ ಹೊಂದಿದೆ.
- ಗ್ರಾಮ ಸಭೆ/ವಾರ್ಡ್ ಸಭೆಯು ಜರುಗಿದ ಒಂದು ತಿಂಗಳೊಳಗೆ ಕಾರ್ಯಕ್ರಮ ಅಧಿಕಾರಿಯು ಸಾಮಾಜಿಕ ಲೆಕ್ಕಪರಿಶೋಧನಾ ಘಟಕಕ್ಕೆ ಆಕ್ಷನ್ ಟೇಕನ್ ರಿಪೋರ್ಟ್ (ಎಟಿಆರ್) ಗಳನ್ನು ಸಲ್ಲಿಸಬೇಕು. ಸಾಮಾಜಿಕ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಕ್ರಮಗಳಿಗೆ ಸಂಬಂಧಿಸಿದಂತೆ ಮತ್ತು ಅನುಷ್ಠಾನಗೊಳಿಸುವ ಏಜೆನ್ಸಿಗಳು ಕೈಗೊಂಡ ಕ್ರಮಗಳ ಕುರಿತು ವರದಿ ಮತ್ತು ಪ್ರಗತಿಯ ಸ್ಥಿತಿಗತಿಗಳ ಬಗ್ಗೆ ಮಾಸಿಕ ಪರಿಶೀಲನೆಯನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನಡೆಸಬೇಕು. ರಾಜ್ಯ ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ನಿಗದಿತ ಸ್ವರೂಪದಲ್ಲಿ ತ್ರೈಮಾಸಿಕ ವರದಿಯನ್ನು ರಾಜ್ಯದ ಪ್ರಧಾನ ಮಹಾಲೇಖಾಪಾಲರಿಗೆ ಸಲ್ಲಿಸಬೇಕು.

2017–18 ರಿಂದ 2018–19ರ ಅವಧಿಯಲ್ಲಿ ಈ ಕಚೇರಿಯು 'ಸಾಮಾಜಿಕ ಲೆಕ್ಕಪರಿಶೋಧನೆಯ ಪರಿಣಾಮಕಾರಿತ್ವ'ದ ಬಗ್ಗೆ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಕಂಡುಬಂದ ಕೆಲವು ಆಸಕ್ತಿದಾಯಕ ಅಂಶಗಳನ್ನು ಕೆಳಗೆ ನೀಡಲಾಗಿದೆ.

- ವಿವಿಧ ಯೋಜನೆಗಳ ನಿಬಂಧನೆಗಳು ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕಡ್ಡಾಯಗೊಳಿಸಿದರೂ, ರಾಜ್ಯದಲ್ಲಿ ಜಾರಿಗೆ ತರಲಾದ ಯೋಜನೆಗಳ ಸಾಮಾಜಿಕ ಲೆಕ್ಕಪರಿಶೋಧನೆಯ ನಡೆಸುವಿಕೆಯನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಸಾಮಾಜಿಕ ಪ್ರಾಧಿಕಾರವಿರಲಿಲ್ಲ. ಎಂಎನ್‌ಆರ್‌ಇಜಿಎಸ್‌ಗಾಗಿ ಪ್ರತ್ಯೇಕವಾಗಿ ಸ್ಥಾಪಿಸಲಾದ ರಾಜ್ಯದ ಸಾಮಾಜಿಕ ಲೆಕ್ಕಪರಿಶೋಧನಾ ಘಟಕಕ್ಕೆ ಎನ್‌ಆರ್‌ಡಿಡಬ್ಲ್ಯೂಪಿ, ಎಸ್‌ಬಿಎಂ, ಎಂಡಿಎಂ ಮತ್ತು

[5] 2018–19ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಕಾರ್ಯಕ್ರಮದ ಅನುಷ್ಠಾನಕ್ಕೆ ಮಾರ್ಗದರ್ಶಿ.

ಪಿಡಿಎಸ್‌ನಂತಹ ಇತರ ಯೋಜನೆಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನೂ ಸಹ ವಹಿಸಲಾಯಿತು. ಆದಾಗ್ಯೂ, ಎಂಜಿಎನ್‌ಆರ್‌ಇಜಿಎಸ್‌ನಂತೆ ಈ ಯೋಜನೆಗಳ ಸಾಮಾಜಿಕ ಲೆಕ್ಕಪರಿಶೋಧನೆಯು ನಿರಂತರ ಪ್ರಕ್ರಿಯೆಯಾಗಿರಲಿಲ್ಲ.

- ಸಾಮಾಜಿಕ ಲೆಕ್ಕಪರಿಶೋಧನೆಯ ಬಗ್ಗೆ ಜಾಗೃತಿ ಮೂಡಿಸುವ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು ನಿಷ್ಪರಿಣಾಮಕಾರಿ ಮತ್ತು ಅಸಮರ್ಪಕವಾಗಿತ್ತು. ಏಕೆಂದರೆ ಶೇಕಡಾ 99 ರಷ್ಟು ಸಾಮಾಜಿಕ ಲೆಕ್ಕಪರಿಶೋಧನಾ ಗ್ರಾಮ ಸಭೆಗಳಲ್ಲಿ ಜನಸಂಖ್ಯೆಯ ಶೇಕಡಾ ಎರಡಕ್ಕಿಂತ ಕಡಿಮೆ ಜನರು ಭಾಗವಹಿಸಿದ್ದರು.
- ಸಾಮಾಜಿಕ ಲೆಕ್ಕಪರಿಶೋಧನೆಯ ಆಕ್ಷೇಪಣೆಗಳ/ಶೋಧಗಳ ಅನುಸರಣಾ ಕ್ರಮವು ತುಂಬಾ ದುರ್ಬಲವಾಗಿತ್ತು.
- ಎಸ್‌ಎಆರ್‌ಗಳಲ್ಲಿನ ಆಕ್ಷೇಪಿತ ಮೊತ್ತದ ವಸೂಲಿಯು ಶೇಕಡಾ ಒಂದಕ್ಕಿಂತ ಕಡಿಮೆಯಿತ್ತು.
- ಎಸ್‌ಎಆರ್‌ಗಳ ಮಾಸಿಕ ಪರಿಶೀಲನೆಗಳನ್ನು ರಾಜ್ಯದಲ್ಲಿ ನಡೆಸಲಾಗಿರಲಿಲ್ಲ.
- 2018–19ರ ಅವಧಿಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ತ್ರೈಮಾಸಿಕ ವರದಿಗಳನ್ನು ಪ್ರಧಾನ ಮಹಾಲೇಖಾಪಾಲರಿಗೆ ಸಲ್ಲಿಸಿರಲಿಲ್ಲ.

'ಸಾಮಾಜಿಕ ಲೆಕ್ಕಪರಿಶೋಧನೆಯ ಪರಿಣಾಮಕಾರಿತ್ವ' ಕುರಿತ ಲೆಕ್ಕಪರಿಶೋಧನೆಯ ವಿವರಗಳಿಗಾಗಿ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸಾಮಾನ್ಯ ಮತ್ತು ಸಾಮಾಜಿಕ ವಲಯ ಮಾರ್ಚ್ 2019 ಕ್ಕೆ ಕೊನೆಗೊಂಡ ವರ್ಷದ ವರದಿಯನ್ನು ಉಲ್ಲೇಖಿಸಬಹುದು (ಕಂಡಿಕೆ 3.2/ 2020ನೇ ವರ್ಷದ ವರದಿ ಸಂಖ್ಯೆ–3).

ಇತರ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ ಲೆಕ್ಕಪರಿಶೋಧನೆಯ ವ್ಯವಸ್ಥೆಯನ್ನು ಹೋಲಿಕೆ ಮಾಡುವ ದೃಷ್ಟಿಯಿಂದ, ತೆಲಂಗಾಣ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ 2016–17 ರಿಂದ 2018–19ರ ಅವಧಿಯ "ಸೊಸೈಟಿ ಫಾರ್ ಸೋಷಿಯಲ್ ಆಡಿಟ್, ಅಕೌಂಟೆಬಿಲಿಟಿ ಮತ್ತು ಟ್ರಾನ್ಸ್‌ಪರೆನ್ಸಿ" ಯ (ಎಸ್‌ಎಸ್‌ಎಎಟಿ) ವಾರ್ಷಿಕ ವರದಿಯನ್ನು ಉಲ್ಲೇಖಿಸಲಾಯಿತು. ಎಸ್‌ಎಸ್‌ಎಎಟಿ ತೆಲಂಗಾಣವು ಎಂಜಿಎನ್‌ಆರ್‌ಇಜಿಎಸ್ ಜೊತೆಗೆ ಕೆಲವು ಯೋಜನೆಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುತ್ತದೆ ಎಂದು ಅದು ಹೇಳಿದೆ. ವರದಿಯ ಪ್ರತಿಯನ್ನು ಜಿಲ್ಲಾ ವಿಜಿಲೆನ್ಸ್ ವಿಭಾಗದ ಜಿಲ್ಲಾ ವಿಜಿಲೆನ್ಸ್ ಅಧಿಕಾರಿಗೆ ಕಡತಗಳನ್ನು ಪ್ರಕ್ರಿಯೆಗೊಳಿಸಿ ತಪ್ಪಿತಸ್ಥ ಸಿಬ್ಬಂದಿಗಳ ವಿರುದ್ಧ ಸೂಕ್ತಕ್ರಮ ಕೈಗೊಳ್ಳಲು ಹಸ್ತಾಂತರಿಸಲಾಗುತ್ತದೆ. ದುರುಪಯೋಗಪಡಿಸಿಕೊಂಡ ಮೊತ್ತದ ವಸೂಲಾತಿಯು ಸರಿಸುಮಾರು ಶೇಕಡಾ 30 ರಷ್ಟಿತ್ತು,

ಮೇಲಿನ ಅಂಶಗಳು ತೆಲಂಗಾಣ ರಾಜ್ಯವು ತಮ್ಮ ರಾಜ್ಯದಲ್ಲಿ ಹೆಚ್ಚು ದೃಢವಾದ ಸಾಮಾಜಿಕ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಹೊಂದಿದೆ ಎಂಬುದನ್ನು ಸೂಚಿಸುತ್ತದೆ. ವಿವಿಧ ಇಲಾಖೆಗಳು ಜಾರಿಗೆ ತಂದಿರುವ ಯೋಜನೆಗಳು ಅಥವಾ ಕಾರ್ಯಕ್ರಮಗಳ ಪರಿಣಾಮಕಾರಿ ಸಾಮಾಜಿಕ ಲೆಕ್ಕಪರಿಶೋಧನೆಗೆ ತೆಲಂಗಾಣವು ಕೈಗೊಂಡ ಕ್ರಮಗಳನ್ನು ಹಂತ ಹಂತವಾಗಿ ಅಳವಡಿಸಿಕೊಳ್ಳಲು ಕರ್ನಾಟಕವು ಪರಿಗಣಿಸಬಹುದು ಎಂದು ಶಿಫಾರಸು ಮಾಡಲಾಗಿದೆ.

## 1.15 ಬಳಕೆಯ ಪ್ರಮಾಣಪತ್ರಗಳ ಸಲ್ಲಿಕೆ

2018–19ರ ಅವಧಿಯಲ್ಲಿ ಹದಿನಾಲ್ಕನೆಯ ಹಣಕಾಸು ಆಯೋಗದ ಅನುದಾನಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾದ ಬಳಕೆಯ ಪ್ರಮಾಣಪತ್ರಗಳ (ಯುಸಿ) ವಿವರಗಳನ್ನು **ಕೋಷ್ಟಕ 1.12** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.12: 2018–19ರ ಅವಧಿಯಲ್ಲಿ ಹದಿನಾಲ್ಕನೆಯ ಹಣಕಾಸು ಆಯೋಗದಿಂದ ಬಿಡುಗಡೆಯಾದ ಅನುದಾನ ಮತ್ತು ಸಲ್ಲಿಸಲಾದ ಬಳಕೆಯ ಪ್ರಮಾಣಪತ್ರಗಳ ವಿವರಗಳು:**

**(₹ ಕೋಟಿಗಳಲ್ಲಿ)**

| ಕ್ರ ಸಂ | ವಿವರಗಳು | ಬಿಡುಗಡೆಯಾದ ಮೊತ್ತ | ಬಳಕೆಯ ಪ್ರಮಾಣಪತ್ರ ಮತ್ತು ದಿನಾಂಕ | ಬಳಕೆಯಾದ ಮೊತ್ತ |
|---|---|---|---|---|
| 1 | ಹದಿನಾಲ್ಕನೆಯ ಹಣಕಾಸು ಆಯೋಗದ ಕಾರ್ಯಕ್ಷಮತೆ ಅನುದಾನ (2017–18) | 204.08 | ಎಫ್ಡಿ/14/ ಎಫ್ಸಿಸಿ/2017, 14/08/2018 | 204.08 |
| 2 | ಹದಿನಾಲ್ಕನೆಯ ಹಣಕಾಸು ಆಯೋಗದ ಮೂಲ ಅನುದಾನ 1 ನೇ ಕಂತು (2018–19) | 920.77 | ಎಫ್‌ಡಿ/25/ಎಫ್‌ಸಿಸಿ/ 2015, 22/11/2018 | 920.77 |
| 3 | ಹದಿನಾಲ್ಕನೆಯ ಹಣಕಾಸು ಆಯೋಗದ ಮೂಲ ಅನುದಾನ 2 ನೇ ಕಂತು (2018–19) | 920.77 | ಎಫ್‌ಡಿ/27/ಎಫ್‌ಸಿಸಿ/ 2015, 26/02/2019 | 920.77 |

ಆಧಾರ: ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರವು ಒದಗಿಸಿರುವ ಮಾಹಿತಿ

ನಿಯಮಗಳಿಗೆ ಅನುಗುಣವಾಗಿ ಸ್ಥಾಪಿತವಾದ ಪಂಚಾಯತ್‌ಗಳಿಗೆ[6] ಅನುದಾನದ ಬಿಡುಗಡೆಯನ್ನು ಹದಿನಾಲ್ಕನೆಯ ಹಣಕಾಸು ಆಯೋಗದ ಮಾರ್ಗಸೂಚಿಗಳು ವಿಧಿಸಿವೆ. ರಾಜ್ಯ ಸರ್ಕಾರವು ಭಾರತ ಸರ್ಕಾರಕ್ಕೆ ಸಲ್ಲಿಸಿದ ಬಳಕೆಯ ಪ್ರಮಾಣಪತ್ರಗಳಿಂದ 2017–18ರಲ್ಲಿ 6,024 ಗ್ರಾಮಪಂಚಾಯತಿಗಳಲ್ಲಿ 5,977 ಗ್ರಾಮಪಂಚಾಯತಿಗಳಿಗೆ, 2018–19ರ ಅವಧಿಯಲ್ಲಿ 6,022 ಗ್ರಾಮಪಂಚಾಯತಿಗಳಲ್ಲಿ 6,011 ಗ್ರಾಮಪಂಚಾಯತಿಗಳಿಗೆ ಚುನಾಯಿತ ಸಂಸ್ಥೆಗಳಿದ್ದವು ಎಂದು ಗಮನಿಸಲಾಗಿದೆ. ಆದಾಗ್ಯೂ, ಮೂಲಭೂತ ಅನುದಾನವನ್ನು ಸಮರ್ಪಕವಾಗಿ ರಚಿಸಲಾದ ಪಂಚಾಯತಿಗಳಿಗೂ ಮತ್ತು ಚುನಾವಣೆ ನಡೆಯದ ಪಂಚಾಯತಿಗಳಿಗೂ ಬಿಡುಗಡೆ ಮಾಡಲಾಯಿತಾದ್ದರಿಂದ ಹದಿನಾಲ್ಕನೆಯ ಹಣಕಾಸು ಆಯೋಗದ ಮಾರ್ಗಸೂಚಿಗಳ ಷರತ್ತುಗಳ ಉಲ್ಲಂಘನೆಯಾಗಿದೆ.

## 1.16 ಲೆಕ್ಕಪರಿಶೋಧನೆಗಳಿಗೆ ಸ್ಪಂದಿಸುವಿಕೆ

ಪ್ರಧಾನ ಮಹಾಲೇಖಾಪಾಲರು, ಕರ್ನಾಟಕ, ಇವರು ತಪಾಸಣಾ ವರದಿಗಳನ್ನು (ಐಆರ್) ಲೆಕ್ಕಪರಿಶೋಧಿತ ಗ್ರಾಮಪಂಚಾಯತಿಗಳಿಗೆ ನೀಡುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಐಆರ್ ಗಳಲ್ಲಿರುವ ಅವಲೋಕನಗಳಿಗೆ, ವರದಿಯ ವಿತರಣೆಯ ದಿನಾಂಕದಿಂದ ಒಂದು ತಿಂಗಳೊಳಗೆ ಅನುಸರಣೆಯನ್ನು /ಅನುಪಾಲನೆ ನೀಡಬೇಕಾಗುತ್ತದೆ. ಸೆಪ್ಟೆಂಬರ್ 2020 ರ ಅಂತ್ಯದ ವೇಳೆಗೆ, **ಕೋಷ್ಟಕ 1.13** ರಲ್ಲಿ ವಿವರಿಸಿರುವಂತೆ 2,881 ಕಂಡಿಕೆಗಳನ್ನು ಒಳಗೊಂಡಿರುವ 253 ಐಆರ್ ಗಳು ವಿವಿಧ ಗ್ರಾಮಪಂಚಾಯತಿಗಳಲ್ಲಿ ಬಾಕಿ ಉಳಿದಿವೆ.

[6] ಭಾರತದ ಸಂವಿಧಾನದ ಭಾಗ IX ಮತ್ತು IX ಏ ರಲ್ಲಿ ವಿಧಿಸಿರುವಂತೆ ಸಮರ್ಪಕವಾಗಿ ರಚಿತವಾದ ಪಂಚಾಯತ್ ಎಂದರೆ ಚುನಾವಣೆಯನ್ನು ನಡೆಸಲಾಗಿ ಮತ್ತು ಚುನಾಯಿತ ಸಂಸ್ಥೆಯು ಉಪಸ್ಥಿತಿಯೆಂದರ್ಥ.

**ಕೋಷ್ಟಕ 1.13: ಬಾಕಿ ಇರುವ ಐಆರ್ ಗಳು ಮತ್ತು ಕಂಡಿಕೆಗಳ ವಿವರಗಳನ್ನು ತೋರಿಸುವ ತಃಖ್ತೆ**

| ವರ್ಷ | ಐಆರ್ ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
|---|---|---|
| 2015–16 ರ ವರೆಗೆ | 128 | 1,311 |
| 2016–17 | 03 | 37 |
| 2017–18 | 42 | 586 |
| 2018–19* | 80 | 947 |
| **ಒಟ್ಟು** | **253** | **2,881** |

ಆಧಾರ: ಐಆರ್ ಗಳು

*2018-19ರ ಅವಧಯಲ್ಲಿ ಟಿಜಿಎಸ್ ಅಡಿಯಲ್ಲಿ ಲೆಕ್ಕಪರಿಶೋಧನೆ ನಡೆಸಲಾಯಿತು.

ಬಾಕಿ ಉಳಿದಿರುವ 2,881 ಕಂಡಿಕೆಗಳನ್ನು ಹೊಂದಿರುವ 253 ಐಆರ್‌ಗಳಲ್ಲಿ, 1,311 ಕಂಡಿಕೆಗಳನ್ನು (ಶೇ. 45) ಒಳಗೊಂಡಿರುವ 128 ಐಆರ್‌ಗಳು (ಶೇ. 51) ಮೂರು ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಉಳಿದಿವೆ, ಇದು ಗ್ರಾಮ ಪಂಚಾಯತಿಗಳ ಕಡೆಯಿಂದ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ.

ಕಳೆದ ಐದು ವರ್ಷಗಳಲ್ಲಿ ಆಡಿಟ್ ವರದಿಗಳು / ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ(ಎಟಿಐಆರ್) ಗಳಲ್ಲಿ ಕಂಡುಬಂದಿರುವ ಹಣದ ಮೌಲ್ಯ ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯಲ್ಲಿ ಚರ್ಚೆಗೆ ಬಾಕಿ ಇರುವ ಕಂಡಿಕೆಗಳ ವಿವರಗಳನ್ನು **ಕೋಷ್ಟಕ 1.14** ರಲ್ಲಿ ನೀಡಲಾಗಿದೆ:

**ಕೋಷ್ಟಕ 1.14:** ಚರ್ಚೆಗೆ ಬಾಕಿ ಉಳಿದಿರುವ ಆಡಿಟ್ ವರದಿಗಳು ಮತ್ತು ಹಣದ ಮೌಲ್ಯದೊಂದಿಗೆ ಕಂಡಿಕೆಗಳ ವಿವರಗಳು

**(₹ ಕೋಟಿಗಳಲ್ಲಿ)**

| ಆಡಿಟ್ ವರದಿಗಳು / ಎಟಿಐಆರ್‌ಗಳು | ಪ್ಯಾರಾಗಳ ಸಂಖ್ಯೆ | ಹಣದ ಮೌಲ್ಯ | ಚರ್ಚೆಯ ಸ್ಥಿತಿಗತಿ |
|---|---|---|---|
| 2014–15 | 01 | 22.68 | ಪೂರ್ಣಗೊಂಡಿದೆ |
| 2017–18 | 02 | 01.54 | ಬಾಕಿ ಇದೆ |
| **ಒಟ್ಟು** | **03** | **24.22** | |

ಆಧಾರ: ಸಿಎಜಿ ಆಡಿಟ್ ವರದಿಗಳು ಮತ್ತು ಸಾರ್ವಜನಿಕಾ ಲೆಕ್ಕ ಸಮಿತಿ (ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳು) ಸಭೆ ಕಡತಗಳು.

# ಅಧ್ಯಾಯ - II

# ರಾಜ್ಯದ ಪೌರಾಡಳಿತ ವ್ಯವಸ್ಥೆಯ ಪಕ್ಷಿನೋಟ

# ಅಧ್ಯಾಯ–II

## 1. ರಾಜ್ಯದ ಪೌರಾಡಳಿತ ವ್ಯವಸ್ಥೆಯ ಪಕ್ಷಿನೋಟ

## A: ನಗರ ಸ್ಥಳೀಯ ಸಂಸ್ಥೆಗಳ ಕಾರ್ಯವೈಖರಿ

### 2.1 ಪರಿಚಯ

1992ರಲ್ಲಿ ಅಧಿಸೂಚಿಸಲಾದ ಸಂವಿಧಾನದ 74ನೇ ತಿದ್ದುಪಡಿಯು ನಗರ ಪ್ರದೇಶಗಳಿಗೆ ಸ್ಥಳೀಯ ಸ್ವಾಯತ್ತ ಸರ್ಕಾರಗಳ ರಚನೆಗೆ ಅವಕಾಶ ಕಲ್ಪಿಸಿತು. ತಿದ್ದುಪಡಿಯು, ಸಂವಿಧಾನದ 12ನೇ ಅನುಸೂಚಿಯಲ್ಲಿ ಪಟ್ಟಿ ಮಾಡಿದ 18 ವಿಷಯಗಳಿಗೆ ಸಂಬಂಧಿಸಿದಂತೆ ಆರ್ಥಿಕಾಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕನುಗುಣವಾಗಿ ಸೇವೆಗಳನ್ನು ನೀಡಲು ಸಮರ್ಥವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ನಗರ ಸ್ಥಳೀಯ ಸಂಸ್ಥೆಗಳನ್ನು ಸ್ವಾಯತ್ತ ಸಂಸ್ಥೆಗಳಾಗಿ ಸಶಕ್ತಗೊಳಿಸಲು ಬಯಸಿತು. ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳನ್ನು ಅವುಗಳ ಜನಸಂಖ್ಯೆಗೆ[7] ಅನುಗುಣವಾಗಿ ವರ್ಗೀಕೃತಗೊಳಿಸಲಾಗಿದೆ.

ಮಹಾ ನಗರಪಾಲಿಕೆಗಳ (ಸಿಸಿ) ಆಡಳಿ ತವು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ(ಕೆಎಮಸಿ ಅಧಿನಿಯಮ) ಅಡಿಯಲ್ಲಿ ನಿಯಂತ್ರಿಸಲ್ಪಡುತ್ತದೆ ಮತ್ತು ಇತರೆ ನಗರ ಸ್ಥಳೀಯ ಸಂಸ್ಥೆಗಳ ಆಡಳಿತವು ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ(ಕೆಎಮ್ ಅಧಿನಿಯಮ) ಅಡಿಯಲ್ಲಿ ನಿಯಂತ್ರಿಸಲ್ಪಡುತ್ತದೆ. ಪ್ರತಿಯೊಂದು ಮಹಾನಗರ ಪಾಲಿಕೆ/ಪುರಸಭಾ ಪ್ರದೇಶದ ವಿಸ್ತೀರ್ಣವನ್ನು ಹಲವು ಸಂಖ್ಯೆಯ ವಾರ್ಡಗಳನ್ನಾಗಿ ವಿಂಗಡಿಸಲಾಗಿದ್ದು ಆ ಸಂಖ್ಯೆಯನ್ನು ಸಂಬಂಧಿತ ಪ್ರದೇಶದ ಜನಸಂಖ್ಯೆ, ಭೌಗೋಳಿಕ ಲಕ್ಷಣ, ಆರ್ಥಿಕ ಸ್ಥಿತಿಗತಿ, ಇತ್ಯಾದಿಗಳನ್ನು ಪರಿಗಣಿಸಿ ರಾಜ್ಯ ಸರ್ಕಾರವು ನಿರ್ಧರಿಸುವುದು ಹಾಗೂ ಅಧಿಸೂಚಿತಗೊಳಿಸುವುದು. ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಕೆಲವು ಪ್ರಮುಖ ಮಾಹಿತಿಗಳನ್ನು **ಕೋಷ್ಟಕ–2.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.1: ರಾಜ್ಯಕ್ಕೆ ಸಂಬಂಧಿಸಿದ ಮೂಲ ಮಾಹಿತಿ**

| ಸೂಚಕಗಳು | ಘಟಕ | ರಾಜ್ಯ | ರಾಷ್ಟ್ರ |
|---|---|---|---|
| ಜನಸಂಖ್ಯೆ | ಲಕ್ಷಗಳಲ್ಲಿ | 610.95 | 12105.69 |
| ನಗರ ಜನಸಂಖ್ಯೆ | ಲಕ್ಷಗಳಲ್ಲಿ | 236.26 | 3771.06 |
| ನಗರ ಜನಸಂಖ್ಯೆ | ಶೇಕಡಾವಾರಿನಲ್ಲಿ | 38.7 | 31.2 |
| ಜನಸಾಂದ್ರತೆ | ಜನರು/ಪ್ರತಿ ಚದರ ಕಿ.ಮೀ.ಗೆ | 319 | 382 |
| ನಗರ ಲಿಂಗಾನುಪಾತ | ಪ್ರತಿ ಸಾವಿರಕ್ಕೆ | 963 | 929 |
| ನಗರ ಸಾಕ್ಷರತಾ ದರ | ಶೇಕಡಾವಾರು (2011 ಜನಸಂಖ್ಯೆ) | 85.80 | 84.10 |
| ಮಹಾ ನಗರ ಪಾಲಿಕೆಗಳು | ಸಂಖ್ಯೆ | 11 | |
| ನಗರಸಭೆ | ಸಂಖ್ಯೆ | 59 | |
| ಪುರಸಭೆ | ಸಂಖ್ಯೆ | 114 | |
| ಪಟ್ಟಣ ಪಂಚಾಯತಿ | ಸಂಖ್ಯೆ | 92 | |
| ಅಧಿಸೂಚಿತ ಪ್ರದೇಶ | ಸಂಖ್ಯೆ | 4 | |

ಆಧಾರ: ನಗರಾಭಿವೃದ್ಧಿ ಇಲಾಖೆಯ 2018–19 ವಾರ್ಷಿಕ ಆಡಳಿತ ವರದಿ ಮತ್ತು ಕೆಎಸ್ಎಡಿ ಒದಗಿಸಿದ ಮಾಹಿತಿ.

[7] ಮಹಾನಗರ ಪಾಲಿಕೆ (ಸಿಸಿ)– 3,00,000 ಮತ್ತು ಅದಕ್ಕಿಂತ ಹೆಚ್ಚು, ನಗರಸಭೆ (ಸಿಎಮ್‌ಸಿ)–50,000 ದಿಂದ 3,00,000ದ ಒಳಗೆ, ಪುರಸಭೆ (ಟಿಎಮ್‌ಸಿ)–20,000 ದಿಂದ 50,000ದ ಒಳಗೆ ಮತ್ತು ಪಟ್ಟಣ ಪಂಚಾಯತಿ (ಟಿಪಿ) 10,000 ದಿಂದ 20000ದ ಒಳಗೆ ಹಾಗೂ ಅಧಿಸೂಚಿತ ಪ್ರದೇಶ ಸಮಿತಿಗಳು ಪ್ರತ್ಯೇಕವಾಗಿ ರಚಿತವಾದ ಸಮಿತಿಗಳಿಂದ ಆಡಳಿತ ನಡೆಸಲ್ಪಡುತ್ತವೆ.

ಕರ್ನಾಟಕ ರಾಜ್ಯವು ಶೇಕಡಾ 38.7ರಷ್ಟು ನಗರಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಸಂಖ್ಯೆಯೊಂದಿಗೆ ಹೆಚ್ಚು ನಗರೀಕೃತ ರಾಜ್ಯಗಳ ಪೈಕಿ 7ನೇ ಸ್ಥಾನದಲ್ಲಿದೆ. ರಾಜ್ಯದ ನಗರ ಸಾಕ್ಷರತೆಯು (ಶೇಕಡಾ 85.80) ರಾಷ್ಟ್ರದ ಸಾಕ್ಷರತಾ ದರಕ್ಕಿಂತ (ಶೇಕಡಾ 84.10) ಉತ್ತಮವಾಗಿದೆ

## 2.2 ರಾಜ್ಯದಲ್ಲಿ ಪೌರಾಡಳಿತದ ಸಾಂಸ್ಥಿಕ ರಚನೆ

ಕರ್ನಾಟಕ ರಾಜ್ಯ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ನಗರಾಭಿವೃದ್ಧಿ ಇಲಾಖೆಯು**(**ಯುಡಿಡಿ**)** ನೋಡಲ್ ಇಲಾಖೆಯಾಗಿದೆ. ಡಿಸೆಂಬರ್ 1984ರಲ್ಲಿ ಸ್ಥಾಪನೆಗೊಂಡ ಪೌರಾಡಳಿತ ನಿರ್ದೇಶನಾಲಯವು**(**ಡಿಎಮ್ಎ**)** ನಗರಾಭಿವೃದ್ಧಿ ಇಲಾಖೆಯ ನೇರ ಆಡಳಿತಕ್ಕೊಳಪಟ್ಟಿದ್ದು ಬೃಹತ್ ಬೆಂಗಳೂರು ನಗರಪಾಲಿಕೆ ಸಂಸ್ಥೆಯನ್ನು ಹೊರತುಪಡಿಸಿ ಎಲ್ಲಾ ಸ್ಥಳೀಯ ಸಂಸ್ಥೆಗಳ ಆಡಳಿತ**,** ಅಭಿವೃದ್ಧಿ ಮತ್ತು ಹಣಕಾಸು ಚಟುವಟಿಕೆಗಳ ಜಾರಿಗೆ ಜವಾಬ್ದಾರಿ ಹೊಂದಿದ ನೋಡಲ್ ಸಂಸ್ಥೆಯಾಗಿದೆ**.**

ಅಧಿಸೂಚಿತ ಪ್ರದೇಶ ಸಮಿತಿಗಳನ್ನು ಹೊರತುಪಡಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರ ವ್ಯಾಪ್ತಿ ಪ್ರದೇಶದ ಜನತೆಯಿಂದ ಚುನಾಯಿಸಲ್ಪಟ್ಟ ಕಾರ್ಪೊರೇಟರುಗಳು/ಪರಿಷತ್ ಸದಸ್ಯರನ್ನು ಒಳಗೊಂಡ ನಿಕಾಯವನ್ನು ಹೊಂದಿರುತ್ತದೆ**.** ಕಾರ್ಪೊರೇಟರುಗಳು/ಪರಿಷತ್ ಸದಸ್ಯರುಗಳಿಂದ ಚುನಾಯಿತರಾದ ಮೇಯರ್/ಅಧ್ಯಕ್ಷರು ಪರಿಷತ್‌ನ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವರು**.** ಅಧಿಸೂಚಿತ ಪ್ರದೇಶ ಸಮಿತಿಗಳು**,** ಜಿಲ್ಲಾಧಿಕಾರಿಗಳ ಅಧೀನದಲ್ಲಿರುವ ಸಮಿತಿಯಿಂದ ಪ್ರತ್ಯೇಕವಾಗಿ ಆಡಳಿತ ನಿರ್ವಹಿಸುತ್ತವೆ**.** ಆಯುಕ್ತರು/ ಮುಖ್ಯಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ಮುಖ್ಯಸ್ಥರಾಗಿರುತ್ತಾರೆ*.* **ಅನುಬಂಧ–2.1ರಲ್ಲಿ** ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನಾ ವಿವರವನ್ನು ತೋರಿಸಲಾಗಿದೆ*.*

## 2.3 ಪ್ರಕಾರ್ಯಗಳ ಹಂಚಿಕೆ

ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಧ್ಯಾಯ–V ರ 58 ಮತ್ತು 59ನೆಯ ನಿಯಮಗಳು ಹಾಗೂ ಕರ್ನಾಟಕ ಪುರಸಭಾ ಅಧಿನಿಯಮ, 1964ರ ಅಧ್ಯಾಯ-V ರ 87 ಹಾಗೂ 91ನೆಯ ನಿಯಮಗಳು ಮಹಾನಗರ ಪಾಲಿಕೆಗಳು ಮತ್ತು ಪುರಸಭಾ ಪರಿಷತ್ತುಗಳಿಗೆ ಕಡ್ಡಾಯವಾದ ಹಾಗೂ ವಿವೇಚನಾಧಿಕಾರ ವ್ಯಾಪ್ತಿಯ ಕಾರ್ಯಗಳನ್ನು ಆಚರಣೆಗೆ ತರಲು ಸಾಕಷ್ಟು ಅನುವುಗಳನ್ನು ಮಾಡಿಕೊಳ್ಳಲು ಅಧಿಕಾರ ನೀಡಿದೆ. ಸಂವಿಧಾನದ 74ನೇ ತಿದ್ದುಪಡಿಯು ನಗರಸಭೆಗಳಿಗೆ ಸಂವಿಧಾನದ 12ನೇ ಅನುಸೂಚಿಯಲ್ಲಿ ಪಟ್ಟಿ ಮಾಡಲಾದ 18 ಪ್ರಕಾರ್ಯಗಳನ್ನು ಹಂಚಿಕೆಗೊಳಿಸುವುದನ್ನು ಚಿಂತಿಸಿತ್ತು. **ಅನುಬಂಧ–2.2**ರಲ್ಲಿ 18 ಪ್ರಕಾರ್ಯಗಳ ಪಟ್ಟಿಯನ್ನು ತೋರಿಸಲಾಗಿದೆ. 18 ಪ್ರಕಾರ್ಯಗಳ ಪೈಕಿ ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ಅಗ್ನಿಶಾಮಕ ಸೇವೆಯನ್ನು ಹೊರತುಪಡಿಸಿ 17 ಪ್ರಕಾರ್ಯಗಳನ್ನು ವರ್ಗಾಯಿಸಿತು.

## 2.4 ಸಮಿತಿಗಳ ರಚನೆ

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ ಮತ್ತು ಪುರಸಭಾ ಅಧಿನಿಯಮಗಳ ಅನುವುಗಳಂತೆ ಮಹಾನಗರ ಪಾಲಿಕೆಗಳು ಮತ್ತು ಪುರಸಭೆಗಳು ಸ್ಥಾಯಿ ಸಮಿತಿ, ವಾರ್ಡ್ ಸಮಿತಿ, ಜಿಲ್ಲಾ ಯೋಜನಾ ಸಮಿತಿಯಂತಹ ವಿವಿಧ ಸಮಿತಿಗಳನ್ನು ಸ್ಥಾಪಿಸಬೇಕಿದ್ದಿತು.

### 2.4.1 ನಗರ ಸ್ಥಳೀಯ ಸಂಸ್ಥೆಗಳ ಸ್ಥಾಯಿ ಸಮಿತಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ನಾಲ್ಕು[8] ಸ್ಥಾಯಿ ಸಂಸ್ಥೆಗಳನ್ನು ಹೊಂದಿವೆ. ಆದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 12[9] ಸ್ಥಾಯಿ ಸಂಸ್ಥೆಗಳನ್ನು ಹೊಂದಿದೆ. ಮೇಯರ್/ಉಪ ಮೇಯರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು/ಉಪಾಧ್ಯಕ್ಷರು ಎಲ್ಲಾ ಸ್ಥಾಯಿ ಸಮಿತಿಗಳ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಕೆಲವು ಸಮಿತಿಗಳ ವಿವರಗಳನ್ನು ಕೋಷ್ಟಕ–2.2ರಲ್ಲಿ ನೀಡಲಾಗಿದೆ.

**ಕೋಷ್ಟಕ–2.2: ಸಮಿತಿಗಳ ಪಟ್ಟಿ**

| ಕ್ರಮ ಸಂಖ್ಯೆ | ಸಮಿತಿಯ ಹೆಸರು | ಸದಸ್ಯರು | ಉದ್ದೇಶ/ಅಧಿಕಾರ |
|---|---|---|---|
| 1. | ತೆರಿಗೆ ನಿರ್ಧಾರಣೆ ಸಮಿತಿ | ಬಿಬಿಎಮ್‌ಪಿಯಲ್ಲಿ 11<br>ಇತರೆ ನ.ಸ್ಥ.ಸಗಳು 7 | ಹಣಕಾಸು ಮತ್ತು ತೆರಿಗೆ ನಿರ್ಧಾರಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಮತ್ತು ಬೇರೆ ಯಾವುದೇ ಸ್ಥಾಯಿ ಸಮಿತಿಗೆ ನಿರ್ದಿಷ್ಟವಾಗಿ ನಿಗದಿಯಾಗಿರದ ಎಲ್ಲಾ ವಿಷಯಗಳಲ್ಲಿ ವ್ಯವಹರಿಸುತ್ತದೆ. |
| 2. | ಲೆಕ್ಕಪತ್ರ ಸಮಿತಿ | ಬಿಬಿಎಮ್‌ಪಿಯಲ್ಲಿ 11<br>ಇತರೆ ನ.ಸ್ಥ.ಸಗಳು 7 | ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ವ್ಯವಹರಿಸುತ್ತದೆ. |
| 3 | ನಗರ ಯೋಜನೆ ಮತ್ತು ಸುಧಾರಣಾ ಸಮಿತಿ | ಬಿಬಿಎಮ್‌ಪಿಯಲ್ಲಿ 11<br>ಇತರೆ ನ.ಸ್ಥ.ಸಗಳು 7 | ಲೋಕೋಪಯೋಗಿ ಕಾಮಗಾರಿಗಳು, ನಗರ ಯೋಜನೆ ಮತ್ತು ಸುಧಾರಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ವ್ಯವಹರಿಸುತ್ತದೆ. |
| 4. | ಕಾಮಗಾರಿ ಸಮಿತಿ | 11 (ಬಿಬಿಎಮ್‌ಪಿಯಲ್ಲಿ ಮಾತ್ರ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರ ವ್ಯಾಪ್ತಿಯ ಫ್ಲೈಓವರ್‌ಗಳು, ಅಂಡರ್‌ಪಾಸ್‌ಗಳು, ಸಬ್‌ವೇಗಳು, ರಸ್ತೆ ಅಗಲೀಕರಣ, ವರ್ತುಲ ರಸ್ತೆಗಳು, ಎತ್ತರಿಸಿದ ರಸ್ತೆಗಳು ಮತ್ತು ಇವುಗಳಿಗಾಗಿ ಸಂಭವನೀಯ ಎಲ್ಲಾ ಕಾಮಗಾರಿಗಳು ಭೂಸ್ವಾಧೀನವನ್ನು ಒಳಗೊಂಡಂತೆ ಬೃಹತ್ ಕಾಮಗಾರಿಗಳ ವಿಷಯಗಳಲ್ಲಿ ವ್ಯವಹರಿಸುತ್ತವೆ. |
| 5. | ಸಾರ್ವಜನಿಕ ಆರೋಗ್ಯ ಸಮಿತಿ | ಬಿಬಿಎಮ್‌ಪಿಯಲ್ಲಿ 11<br>ಇತರೆ ನ.ಸ್ಥ.ಸಗಳು 7 | ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿಯು ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಮಾಜದ ಇತರೆ ದುರ್ಬಲ ವರ್ಗ ಮತ್ತು ಮಹಿಳೆಯರಿಗೆ ಸಾಮಾಜಿಕ ನ್ಯಾಯ ಒದಗಿಸುವ ಎಲ್ಲಾ ವಿಷಯಗಳಲ್ಲಿ ವ್ಯವಹರಿಸುತ್ತದೆ. |

ಆಧಾರ: ಕೆಎಮ್‌ಸಿ ಮತ್ತು ಕೆಎಮ್ ಅಧಿನಿಯಮ

### 2.4.2 ವಾರ್ಡ್ ಸಮಿತಿ

ಸಂವಿಧಾನವು ಮೂರು ಲಕ್ಷ ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಎಲ್ಲಾ ಪುರಸಭೆಗಳಲ್ಲಿ ವಾರ್ಡ್ ಸಮಿತಿಯ ರಚನೆಗೆ ಅವಕಾಶ ಒದಗಿಸಿದೆ. ಕೆಎಮ್‌ಸಿ ಅಧಿನಿಯಮ ಪರಿಚ್ಛೇದ 13ಹೆಚ್ ರಂತೆ

[8] ತೆರಿಗೆ ನಿರ್ಧಾರಣೆ, ಹಣಕಾಸು ಮತ್ತು ಮೇಲ್ಮನವಿಗಳು, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ, ನಗರ ಯೋಜನೆ ಮತ್ತು ಸುಧಾರಣೆ ಮತ್ತು ಲೆಕ್ಕಪತ್ರ.

[9] ತೆರಿಗೆ ನಿರ್ಧಾರಣೆ ಮತ್ತು ಹಣಕಾಸು, ಸಾರ್ವಜನಿಕ ಆರೋಗ್ಯ, ನಗರ ಯೋಜನೆ ಮತ್ತು ಸುಧಾರಣೆ, ಬೃಹತ್ ಲೋಕೋಪಯೋಗಿ ಕಾಮಗಾರಿಗಳು, ವಾರ್ಡ್ ಹಂತದ ಸಾರ್ವಜನಿಕ ಕಾಮಗಾರಿ, ಲೆಕ್ಕಪತ್ರ, ಶಿಕ್ಷಣ, ಸಾಮಾಜಿಕ ನ್ಯಾಯ, ಮೇಲ್ಮನವಿಗಳು, ತೋಟಗಾರಿಕೆ, ಮಾರುಕಟ್ಟೆಗಳು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳು.

ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿಯನ್ನು ರಚಿಸಬೇಕಿದ್ದಿತು. ಈ ಸ್ಥಾಯಿ ಸಮಿತಿಗಳ ಅವಧಿಯು ಪರಿಷತ್ತಿನ ಅವಧಿಗೆ ಹೊಂದಿಕೆಯಾಗಿ ಕೊನೆಗೊಳ್ಳುವುದು. ವಾರ್ಡ್ ಸಮಿತಿಗಳು ಪೌರ ಸರ್ಕಾರ ಹಾಗೂ ನಾಗರೀಕರ ನಡುವೆ ಸೇತುವೆಯಂತೆ ವರ್ತಿಸಬೇಕು ಮತ್ತು ನೆರೆಹೊರೆಯ ಆಡಳಿತ ಸಂಸ್ಥೆಗಳಂತೆ ಕಾರ್ಯ ನಿರ್ವಹಿಸಬೇಕು ಹಾಗೂ ಚುನಾಯಿತ ಪ್ರತಿನಿಧಿಗಳು ಮತ್ತು ನಾಗರೀಕರ ನಡುವೆ ನಿಕಟತೆಯನ್ನು ಹೆಚ್ಚಿಸಬೇಕು ಮತ್ತು ಸ್ಥಳೀಯ ಮಟ್ಟದಲ್ಲಿ ಯೋಜನೆ ರೂಪಿಸುವಿಕೆಯಲ್ಲಿ ನಾಗರೀಕರ ಭಾಗವಹಿಸುವಿಕೆಗೆ ಅವಕಾಶವನ್ನು ಮಾಡಿಕೊಡಬೇಕು. ಈ ವಾರ್ಡ್ ಸಮಿತಿಗಳು ಹಣಕಾಸಿನ ಹಂಚಿಕೆಗಾಗಿ ವಾರ್ಡ್ ಅಭಿವೃದ್ಧಿ ಯೋಜನೆಗಳ ತಯಾರಿಸುವಿಕೆ ಮತ್ತು ಅವುಗಳ ಸಲ್ಲಿಕೆಗೆ ಕ್ರಮ ತೆಗೆದುಕೊಳ್ಳುವುದು, ಹಂಚಿಕೆಯಾದ ಹಣಕಾಸಿನ ಸೂಕ್ತ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಾರ್ವಜನಿಕ ಉಪಯೋಗ ಅನುಸಾಧನಗಳ ನಿರ್ವಹಣೆ ಮತ್ತು ಮಹಾನಗರ ಪಾಲಿಕೆಗಳ ಆಸ್ತಿರಕ್ಷಣೆ ಮಾಡಿಕೊಳ್ಳುವುದು ಇವುಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕು.

ವಾರ್ಡ್ ಸಮಿತಿಗಳು ಬಿಬಿಎಮ್‌ಪಿಯನ್ನು ಹೊರತುಪಡಿಸಿ ಇತರೆ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ರಚನೆಯಾಗಿರಲಿಲ್ಲ (ಅಕ್ಟೋಬರ್ 2019).

### *2.4.3 ಜಿಲ್ಲಾ ಯೋಜನೆ ಸಮಿತಿ*

ಭಾರತ ಸಂವಿಧಾನದ 243ಝುಡ್‌ಡಿ ಅನುಚ್ಛೇದವು ಪಂಚಾಯತಿಗಳು ಮತ್ತು ಪುರಸಭೆಗಳು ತಯಾರಿಸಿದ ಯೋಜನೆಗಳ ಕ್ರೋಢೀಕರಣಕ್ಕಾಗಿ ಜಿಲ್ಲಾ ಯೋಜನಾ ಸಮಿತಿಯ ರಚನೆಗೆ ಅನುವು ಮಾಡಿದೆ.

ಜಿಲ್ಲಾ ಯೋಜನಾ ಸಮಿತಿಯು, ಪಂಚಾಯತಿಗಳ ಹಾಗೂ ಪುರಸಭೆಗಳ ನಡುವಿನ ಸಮಾನಾಸಕ್ತ ವಿಷಯಗಳಿಗೆ ಸಂಬಂಧಿಸಿದಂತೆ ಆಯಾ ಪ್ರದೇಶದ ಯೋಜನೆಗಳು, ನೀರು ಮತ್ತು ಇತರೆ ಭೌತಿಕ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲಭೂತ ಸೌಕರ್ಯಗಳು ಮತ್ತು ಪರಿಸರ ಸಂರಕ್ಷಣೆಯ ಸಮಗ್ರ ಅಭಿವೃದ್ಧಿ ಕಾರ್ಯ ಮತ್ತು ಹಣಕಾಸು ಅಥವಾ ಇತರೆ ಮಾದರಿಯ ಲಭ್ಯವಿರುವ ಸಂಪನ್ಮೂಲ ಮತ್ತು ಅದರ ವ್ಯಾಪ್ತಿಯನ್ನು ಪರಿಗಣಿಸಿ ಎಲ್ಲಾ ವಿಷಯಗಳು ಒಳಗೊಂಡಂತೆ ವ್ಯಾಪಕವಾದ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ತಯಾರಿಸಬೇಕಿದ್ದಿತು. ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ವಿಕೇಂದ್ರೀಕೃತ ಯೋಜನಾ ಮತ್ತು ಅಭಿವೃದ್ಧಿ ಸಮಿತಿಯ[10] ಮುಖಾಂತರ ರಾಜ್ಯದ ಯೋಜನೆಯಲ್ಲಿ ಏಕೀಕೃತಗೊಳಿಸಲು ರಾಜ್ಯ ಸರ್ಕಾರಕ್ಕೆ ರವಾನಿಸಬೇಕಿದ್ದಿತು. ಮುಂದುವರೆದು, ರಾಜ್ಯ ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆಯಂತೆ (ಏಪ್ರಿಲ್ 2001) ಜಿಲ್ಲಾ ಯೋಜನಾ ಸಮಿತಿಯು ಕ್ರಮಬದ್ಧವಾಗಿ ಸಭೆಗಳನ್ನು ನಡೆಸಬೇಕಿದ್ದಿತು. ಜಿಲ್ಲಾ ಯೋಜನಾ ಸಮಿತಿಗೆ ಅವಶ್ಯವಿರುವ ನಿಧಿಯನ್ನು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳು ವಾರ್ಷಿಕ ವಂತಿಕೆಯ ಮೂಲಕ ಸಂಗ್ರಹಣೆ ಮಾಡಬೇಕಿದ್ದಿತು.

ಜಿಲ್ಲಾ ಯೋಜನಾ ಸಮಿತಿಯನ್ನು ಬಾಗಲಕೋಟೆ ಜಿಲ್ಲೆಯನ್ನು ಹೊರತುಪಡಿಸಿ ಎಲ್ಲಾ ಜಿಲ್ಲೆಗಳಲ್ಲಿ ರಚಿಸಲಾಗಿದ್ದಿತು. ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ವಿಕೇಂದ್ರೀಕೃತ ಯೋಜನಾ ಮತ್ತು ಅಭಿವೃದ್ಧಿ ಸಮಿತಿಯನ್ನು ದಿನಾಂಕ 3 ಸೆಪ್ಟೆಂಬರ್ 2020ರ ಸರ್ಕಾರಿ ಆದೇಶದಂತೆ ಪುನಃ ರಚಿಸಲಾಯಿತು.

---

[10] ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮದ ಪರಿಚ್ಛೇದ 310ಬಿಯಂತೆ ಡಿಪಿಡಿಸಿಯನ್ನು ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳು ಮತ್ತು ವಾರ್ಷಿಕ ಆರ್ಥಿಕ ಯೋಜನೆಗಳನ್ನು ಪರಿಶೀಲನೆ ಮಾಡಲು ರಚಿಸಬೇಕಿದ್ದಿತು. ಮಾನ್ಯ ಮುಖ್ಯ ಮಂತ್ರಿಗಳು ಸಮಿತಿಯ ಸಭಾಧ್ಯಕ್ಷರಾಗಿರುತ್ತಾರೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ನಗರಾಭಿವೃದ್ಧಿ, ಆರ್ಥಿಕ ಇಲಾಖೆ ಮತ್ತು ಯೋಜನೆ ಇವುಗಳ ಮಂತ್ರಿಗಳು ಸದಸ್ಯರುಗಳಾಗಿರುತ್ತಾರೆ.

## 2.5 ಹಣಕಾಸು ಅಧಿಕಾರದ ನಿಯೋಜನೆ

ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ 1976ರ ಪರಿಚ್ಛೇದ 181 ಮತ್ತು 182ರಲ್ಲಿ ಮತ್ತು ಕೆಎಮ್‌ಸಿ ನಿಯಮಾವಳಿಗಳು 1977ರ ನಿಯಮ 6, 6ಎ ಮತ್ತು ನಿಯಮ 7ರಲ್ಲಿ ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಗೆ ಅನುಗುಣವಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ಅಧಿಕಾರ ನಿಯೋಜನೆಯನ್ನು ನೀಡಲಾಗಿದೆ. ಈ ನಿಯಮಾವಳಿಗಳಲ್ಲಿ ನೀಡಲಾದ ಆರ್ಥಿಕ ಅಧಿಕಾರ ನಿಯೋಜನೆಯ ವಿವರಗಳು ಈ ಕೆಳಗಿನಂತಿವೆ:

### *2.5.1 ಕಾಮಗಾರಿಗಳಿಗೆ ಸಂಬಂಧಿಸಿದ ಅಧಿಕಾರಗಳು*

ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ, ತಾಂತ್ರಿಕ ಮತ್ತು ಟೆಂಡರ್ ಅನುಮೋದನೆಯ ಅಧಿಕಾರವನ್ನು ಪರಿಷ್ಕೃತಗೊಳಿಸಿದೆ (ನವೆಂಬರ್ 2016). ಪರಿಷ್ಕೃತಗೊಳಿಸಿದ ಆದೇಶದಂತೆ ಆಡಳಿತಾತ್ಮಕ ಅನುಮೋದನೆಯ ಅಧಿಕಾರದ ವಿವರಗಳನ್ನು **ಕೋಷ್ಟಕ–2.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.3: ನಗರ ಸ್ಥಳೀಯ ಸಂಸ್ಥೆಗಳ ಆಡಳಿತಾತ್ಮಕ ಅನುಮೋದನೆಯ ಅಧಿಕಾರ ವಿವರಗಳನ್ನು ತೋರಿಸುವ ವಿವರಣಾ ಪಟ್ಟಿ**

(₹ ಲಕ್ಷಗಳಲ್ಲಿ)

| ನಗರ ಸ್ಥಳೀಯ ಸಂಸ್ಥೆಗಳ ವರ್ಗ | ಆಯುಕ್ತರು/ ಮುಖ್ಯಾಧಿಕಾರಿ | ಸ್ಥಾಯಿ ಸಮಿತಿ | ಪರಿಷತ್ | ಜಿಲ್ಲಾಧಿಕಾರಿ | ಪೌರಾಡಳಿತ ನಿರ್ದೇಶಕರು | ಸರ್ಕಾರ |
|---|---|---|---|---|---|---|
| **ಮಹಾನಗರ ಪಾಲಿಕೆ** | ≤50 | >50 ≤ 100 | >100 ≤ 200 | >200 ≤ 500 | >500 ≤ 1,000 | ≥1,000 |
| **ನಗರಸಭೆ** | ≤15 | >15 ≤ 30 | >30 ≤ 100 | >100 ≤ 500 | | |
| **ಪುರಸಭೆ** | ≤5 | >5 ≤ 15 | >15 ≤ 30 | >30 ≤ 500 | | |
| **ಪಟ್ಟಣ ಪಂಚಾಯತಿ** | ≤2 | >2 ≤ 10 | >10 ≤ 15 | >15 ≤ 500 | | |

ಆಧಾರ: ಸರ್ಕಾರದ ಆದೇಶ ಸಂಖ್ಯೆ ಯುಡಿಡಿ/184ಎಮ್ಎನ್ಇ ಬೆಂಗಳೂರು ದಿನಾಂಕ 11.11.2016

ಮುಂದುವರೆದು, ಮೇಲಿನ ಕೋಷ್ಟಕದಲ್ಲಿ ಸೂಚಿಸಿರುವ ಅಧಿಕಾರಿಗಳು ತಮ್ಮ ಆಡಳಿತಾತ್ಮಕ ಅನುಮೋದನಾ ಅಧಿಕಾರಕ್ಕೆ ಅನುಗುಣವಾಗಿ ಶೇಕಡಾ 5ಕ್ಕೆ ಸಮ ಅಥವಾ ಅದಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಮ್ ಹೊದಿರುವ ಟೆಂಡರ್‌ಗಳನ್ನು ಅನುಮೋದಿಸಲು ಅಧಿಕಾರ ಹೊಂದಿರುತ್ತಾರೆ. ಟೆಂಡರ್ ಪ್ರೀಮಿಯಮ್ ಶೇಕಡಾ 5ಕ್ಕಿಂತ ಹೆಚ್ಚು ಆದರೆ ಶೇಕಡಾ 10ಕ್ಕೆ ಸಮ ಅಥವಾ ಅದಕ್ಕಿಂತ ಕಡಿಮೆ ಇರುವ ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ವಹಿಸಲಾಗಿದೆ ಮತ್ತು ₹1000 ಲಕ್ಷ ಮೊತ್ತದ ಮತ್ತು ಟೆಂಡರ್ ಪ್ರೀಮಿಯಂ ಶೇಕಡಾ 10 ಮೀರಿದ ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಸರ್ಕಾರಕ್ಕೆ ವಹಿಸಲಾಗಿದೆ.

ಅಂದಾಜುಗಳಿಗೆ ತಾಂತ್ರಿಕ ಮಂಜೂರಾತಿ ನೀಡುವ ಅಧಿಕಾರಕ್ಕೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆಗಳ ಮತ್ತು ನಗರಸಭೆ ಇಂಜಿನಿಯರ್‌ಗಳು ಕ್ರಮವಾಗಿ ₹500 ಲಕ್ಷ ಮೊತ್ತದ ಮತ್ತು ₹50 ಲಕ್ಷ ಮೊತ್ತದವರೆಗೆ ಅನುಮೋದಿಸುವ ಅಧಿಕಾರವನ್ನು ಹೊಂದಿದ್ದರೆ, ಪುರಸಭೆಗಳ ಮತ್ತು ಪಟ್ಟಣ ಪಂಚಾಯತಿಗಳ ಇಂಜಿನಿಯರ್‌ಗಳು ₹5 ಲಕ್ಷದವರೆಗೆ ಅಧಿಕಾರವನ್ನು ಹೊಂದಿದ್ದಾರೆ.

### *2.5.2 ಇತರೆ ವೆಚ್ಚಗಳಿಗೆ ಸಂಬಂಧಿಸಿದ ಅಧಿಕಾರಗಳು*

ರಾಜ್ಯ ಸರ್ಕಾರವು ಕರ್ನಾಟಕ ಪುರಸಭೆಗಳ (ವೆಚ್ಚಗಳ ಅಧಿಕಾರಗಳು) ನಿಯಮಗಳು, 1986 ಇದನ್ನು ಪರಿಷ್ಕೃತಗೊಳಿಸಿದ್ದು (ಫೆಬ್ರವರಿ 2004) ಇದರಲ್ಲಿ ಪುರಸಭೆ ಮತ್ತು ನಗರಸಭೆಗಳ ವೆಚ್ಚದ ಅಧಿಕಾರವನ್ನು

ನಿರ್ದಿಷ್ಟಪಡಿಸಿದೆ. ಅದರಂತೆ ಹಲವಾರು ಬಾಬುಗಳಿಗೆ ವೆಚ್ಚ ಮಿತಿಯನ್ನು ನಿಗದಿಗೊಳಿಸಿದ್ದು ಅದರಲ್ಲಿನ ಕೆಲವನ್ನು **ಕೋಷ್ಟಕ–2.4**ರಲ್ಲಿ ನೀಡಲಾಗಿದೆ. ಈ ಮಿತಿಗಳನ್ನು 16 ವರ್ಷಗಳಿಗೂ ಹೆಚ್ಚು ಸಮಯದಿಂದ ಪರಿಷ್ಕೃತ ಗೊಳಿಸಿರುವುದಿಲ್ಲ.

**ಕೋಷ್ಟಕ–2.4: ನಗರ ಸ್ಥಳೀಯ ಸಂಸ್ಥೆಗಳ ವೆಚ್ಚಗಳ ಮಿತಿಯನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ವೆಚ್ಚದ ಬಾಗು | ಪುರಸಭೆ | ನಗರಸಭೆ |
|---|---|---|---|
| 1 | ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ ಇತ್ಯಾದಿ ರಾಷ್ಟ್ರೀಯ ಆಚರಣೆ | ₹5,000 ಪ್ರತಿಯೊಂದಕ್ಕೂ | ₹15,000 ಪ್ರತಿಯೊಂದಕ್ಕೂ |
| 2 | ಪರಿಷತ್ ಮತ್ತು ಸಮಿತಿ ಸಭೆಗಳ ಟೀ ಮತ್ತು ಕಾಫೀ ಮತ್ತು ಲಘು ಉಪಹಾರದ ಖರ್ಚು ವೆಚ್ಚ | ₹18,000 ವಾರ್ಷಿಕ | ₹36,000 ವಾರ್ಷಿಕ |
| 3 | ವಾಹನ ಮತ್ತು ಇತರೆ ಯಂತ್ರಗಳ ಪ್ರಮುಖವಾದ ಪೂರ್ಣ ದುರಸ್ತಿ ಮತ್ತು ರಿಪೇರಿ ಕಾರ್ಯ | ₹10,000 ಪ್ರತಿಯೊಂದಕ್ಕೂ | ₹50,000 ಪ್ರತಿಯೊಂದಕ್ಕೂ |
| 4 | ಲೇಖನಸಾಮಗ್ರಿಗಳ ಖರೀದಿ | ₹50,000 ವಾರ್ಷಿಕ | ₹1,00,000 ವಾರ್ಷಿಕ |
| 5 | ಸಾಂಕ್ರಾಮಿಕ ರೋಗಳ ಹರಡುವಿಕೆಯನ್ನು ತಡೆಯುವುದು ಮತ್ತು ಅಡಗಿಸುವುದು | ₹50,000 ವಾರ್ಷಿಕ | ₹1,50,000 ವಾರ್ಷಿಕ |
| 6 | ಆಕಸ್ಮಿಕ ಬೆಂಕಿ ಮತ್ತು ಪ್ರವಾಹಗಳಿಂದ ಉಂಟಾದ ಯಾತನೆ ಸಂಕಷ್ಟಗಳನ್ನು ಕಡಿಮೆಗೊಳಿಸುವುದು | ₹5,000 ಪ್ರತಿಯೊಂದಕ್ಕೂ | ₹20,000 ಪ್ರತಿಯೊಂದಕ್ಕೂ |

ಆಧಾರ: ರಾಜ್ಯಪತ್ರ ಅಧಿಸೂಚನೆ ದಿನಾಂಕ 3 ಫೆಬ್ರವರಿ 2004

## 2.6 ಲೆಕ್ಕಪತ್ರ ತಯಾರಿಕಾ ವಿಧಾನ

ಆರ್ಥಿಕ ವಹಿವಾಟಿನ ವರದಿ ಮಾಡುವಿಕೆಯು ಉತ್ತರದಾಯಿತ್ವದ ಪ್ರಮುಖ ಅಂಶವಾಗಿದೆ. ಹನ್ನೊಂದನೇ ಹಣಕಾಸಿನ ಆಯೋಗದ ಶಿಫಾರಸಿನಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ಲೆಕ್ಕಪತ್ರ ನಮೂನೆಗಳನ್ನು ನಿಗದಿಪಡಿಸುವ ಜವಾಬ್ದಾರಿಯನ್ನು ಭಾರತ ಸರ್ಕಾರವು ಭಾರತದ ಲೆಕ್ಕನಿಯಂತ್ರಯಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಿತು.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಾರ್ಯಪಡೆಯ ಶಿಫಾರಸಿನಂತೆ ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು ರಾಷ್ಟ್ರೀಯ ಪೌರಾಡಳಿತ ಲೆಕ್ಕಪತ್ರಗಳ ಕೈಪಿಡಿಯನ್ನು ಅಭಿವೃದ್ಧಿಗೊಳಿಸಿತು. ರಾಜ್ಯ ಸರ್ಕಾರವು ರಾಷ್ಟ್ರೀಯ ಪೌರಾಡಳಿತ ಲೆಕ್ಕಪತ್ರಗಳ ಕೈಪಿಡಿಯ ಆಧಾರದ ಮೇರೆಗೆ ಕರ್ನಾಟಕ ಪೌರಸಂಸ್ಥೆಗಳ ಲೆಕ್ಕಪತ್ರಗಳು ಮತ್ತು ಆಯವ್ಯಯ ನಿಯಮಗಳು, 2006ನ್ನು 1ನೇ ಏಪ್ರಿಲ್ 2006ರಿಂದ ಜಾರಿಗೆ ತಂದಿತು. ಕರ್ನಾಟಕ ಪೌರಸಂಸ್ಥೆಗಳ ಲೆಕ್ಕಪತ್ರ ಮತ್ತು ಆಯವ್ಯಯ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಹಂತಹಂತವಾಗಿ ಜಾರಿಗೊಳಿಸಲಾಯಿತು. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ನಿಧಿ–ಆಧಾರಿತ ಲೆಕ್ಕಪತ್ರಗಳ ಪದ್ಧತಿಯನ್ನು ಜೋಡಿ ನಮೂದು ಪದ್ಧತಿಯಲ್ಲಿ ತಯಾರಿಸುತ್ತಿದ್ದವು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿಧಿ ಆಧಾರಿತ ಲೆಕ್ಕಪತ್ರಗಳ ಮಾದರಿಯನ್ನು ಬೆಂಗಳೂರು ಮಹಾನಗರ ಪಾಲಿಕೆ (ಲೆಕ್ಕಪತ್ರಗಳು) ನಿಬಂಧನೆಗಳು, 2001ರ ಆಧಾರದ ಮೇರೆಗೆ ನಿರ್ವಹಿಸುತ್ತಿದ್ದಿತು ಮತ್ತು ಪ್ರಸ್ತುತ ಸಂಯೋಜಿತ ಹಣಕಾಸು ವಹಿವಾಟು ನಿರ್ವಹಣಾ ಮಾದರಿಗೆ ಸಂಪೂರ್ಣವಾಗಿ ಬದಲಾಯಿಸಿಕೊಂಡಿದೆ.

## 2.7 ನಗರ ಸ್ಥಳೀಯ ಸಂಸ್ಥೆಗಳ ಆಂತರಿಕ ನಿಯಂತ್ರಣ

ಆಂತರಿಕ ನಿಯಂತ್ರಣವು ಒಂದು ಸಂಸ್ಥೆಯ ಅವಿಭಾಜ್ಯ ಅಂಗವಾಗಿದ್ದು ಅದರ ಚಟುವಟಿಕೆಗಳು ಪರಿಣಾಮಕಾರಿ ಆಡಳಿತ ನಡೆಸಲು ಮತ್ತು ಅದರ ಧ್ಯೇಯೋದ್ದೇಶ ಸಾಧನೆಗೆ ಸಹಾಯಕವಾಗಿದೆ. ಆಂತರಿಕ ನಿಯಂತ್ರಣವು ಅಧಿನಿಯಮಗಳ ಮತ್ತು ನಿಯಮಾವಳಿಗಳ ಸರಿಯಾದ ಪಾಲನೆಗೆ ಸಮಂಜಸವಾದ ಭರವಸೆಯನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ನಗರ ಸ್ಥಳೀಯ ಸಂಸ್ಥೆಗಳು ಜಾರಿಗೊಳಿಸಬೇಕಿರುವ ಕೆಲವು ಮುಖ್ಯ ಆಂತರಿಕ ನಿಯಂತ್ರಣ ತಂತ್ರಗಳು, ನಗದು ಪುಸ್ತಕವನ್ನು ಬ್ಯಾಂಕ್ ಶಿಲ್ಕಿನೊಂದಿಗೆ ನಿಯತಕಾಲಿಕವಾಗಿ ಸಮನ್ವಯಗೊಳಿಸುವುದು, ಸ್ಥಿರಾಸ್ತಿಗಳ ಮತ್ತು ಸರಕು ಮತ್ತು ದಾಸ್ತಾನುಗಳ ವಾರ್ಷಿಕ ಭೌತಿಕ ಪರಿಶೀಲನೆ, ಆಯವ್ಯಯ ಮತ್ತು ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆ ಮತ್ತು ಅನುಮೋದನೆ ಇತ್ಯಾದಿಗಳನ್ನು ಒಳಗೊಂಡಿದೆ.

ಇಲಾಖೆಯು, ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳ ಸರಿಯಾದ ಕ್ರಮದ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲಾಗಿರುವ ಜಿಲ್ಲಾ ನಗರಾಭಿವೃದ್ಧಿ ಕೋಶದ ಮೇಲ್ವಿಚಾರಣೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಹಣಕಾಸಿನ ವಹಿವಾಟುಗಳ ಮೇಲೆ ನಿಯಂತ್ರಣ ಹೊಂದಲು ಲೆಕ್ಕಪತ್ರದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗುತ್ತಿದೆ. ಪ್ರತಿ ವರ್ಷದ ಮೇ 31ಕ್ಕೆ ಮುನ್ನ ಬ್ಯಾಂಕ್ ಶಿಲ್ಕಿನ ಸಮನ್ವಯಗೊಳಿಸುವಿಕೆಯನ್ನು ಪೂರ್ಣಗೊಳಿಸಲು ಸೂಚನೆಗಳನ್ನು ನೀಡಲಾಗಿದೆ. ನಿಧಿ ಆಧಾರಿತ ಲೆಕ್ಕಪತ್ರಗಳ ಪದ್ಧತಿಯಲ್ಲಿ ನಿಯಂತ್ರಣ ತನಿಖಾ ವಿಧಾನವನ್ನು ಅಳವಡಿಸಲಾಗಿದೆ ಎಂಬುದಾಗಿ ಉತ್ತರಿಸಿತು.

## 2.8 ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು/ಲೆಕ್ಕಪತ್ರ ವಿಭಾಗಗಳ ಕಾರ್ಯವಿಧಾನ

ಕರ್ನಾಟಕ ಪೌರಸಂಸ್ಥೆಗಳ ಲೆಕ್ಕಪತ್ರ ಮತ್ತು ಆಯವ್ಯಯ ನಿಯಮಗಳು, 2006ರಂತೆ ಪ್ರತಿ ಪುರಸಭೆಯೂ ನಿಗದಿತ ಲೆಕ್ಕಪತ್ರ ಮಾದರಿಯನ್ನು ಮತ್ತು ಲೆಕ್ಕಪತ್ರ ಮತ್ತು ಆಯವ್ಯಯ ಪದ್ಧತಿಯನ್ನು ಅನುಸರಿಸಬೇಕು ಮತ್ತು ಪ್ರತಿಯೊಂದು ನಿಧಿಗೆ ಸಂಬಂಧಿಸಿದಂತೆ ಎಲ್ಲಾ ಸ್ವೀಕೃತಿಗಳು, ವೆಚ್ಚಗಳು ಆಸ್ತಿ ಮತ್ತು ಹೊಣೆಗಾರಿಕೆಯನ್ನು ಸೂಕ್ತವಾಗಿ ನಮೂದಿಸಲು ಈ ನಿಯಮಾವಳಿಗಳಲ್ಲಿ ನಿಗದಿಪಡಿಸಿರುವಂತಹ ಲೆಕ್ಕಪತ್ರ ಪುಸ್ತಕಗಳನ್ನು ನಿರ್ವಹಿಸಬೇಕು ಅಥವಾ ನಿರ್ವಹಿಸುವ ಕ್ರಮ ತೆಗೆದುಕೊಳ್ಳಬೇಕು. ಪುರಸಭೆಗಳು ಎಲ್ಲಾ ಆರ್ಥಿಕ ವಹಿವಾಟುಗಳನ್ನು ದಾಖಲುಗೊಳಿಸಲು ನಿಯಮಾವಳಿಗಳಲ್ಲಿ ನಿಗದಿಪಡಿಸಿರುವ ಫಾರಂಗಳು ಹಾಗೂ ದಾಖಲೆ ಪುಸ್ತಕಗಳನ್ನು ನಿರ್ವಹಿಸಬೇಕು ಅಥವಾ ನಿರ್ವಹಿಸಲು ಕ್ರಮ ಕೈಗೊಳ್ಳಬೇಕು.

ಹಣಕಾಸು/ಲೆಕ್ಕಪತ್ರ ಶಾಖೆಯು ಪುರಸಭೆ ಆಯುಕ್ತರು ಅಥವಾ ಮುಖ್ಯಾಧಿಕಾರಿಗೆ ಆಯವ್ಯಯವನ್ನು ತಯಾರಿಸಲು ಸಹಕರಿಸುತ್ತದೆ. ಅದು ಲೆಕ್ಕಪತ್ರಕ್ಕೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುತ್ತದೆ, ಮಾಸಿಕ ಲೆಕ್ಕಪತ್ರವನ್ನು ಮತ್ತು ಕ್ರೋಢೀಕೃತ ಬೇಡಿಕೆ ವಸೂಲಿ ಹಾಗೂ ಬಾಕಿ ಪಟ್ಟಿಯನ್ನು ತಯಾರಿಸುತ್ತದೆ. ಹಣಕಾಸು/ಲೆಕ್ಕಪತ್ರ ಶಾಖೆಯು ವಾರ್ಷಿಕವಾಗಿ ಸ್ವೀಕೃತಿ ಮತ್ತು ಪಾವತಿಗಳ ಲೆಕ್ಕ, ಆದಾಯ ಮತ್ತು ವೆಚ್ಚದ ಲೆಕ್ಕ ಮತ್ತು ಆಸ್ತಿ ಹೊಣೆಗಾರಿಕೆ ಪಟ್ಟಿ ಹಾಗೂ ಲೆಕ್ಕಪತ್ರ ತಯಾರಿಕೆಯಲ್ಲಿ ಅನುಸರಿಸಿದ ಪ್ರಮುಖ ಲೆಕ್ಕಪತ್ರ ಕಾರ್ಯನೀತಿ ಮತ್ತು ಸಾದಿಲ್ವಾರು ಹೊಣೆಗಾರಿಕೆಯನ್ನು ಬಹಿರಂಗಗೊಳಿಸುವ ಲೆಕ್ಕಪತ್ರದ ಮೇಲಿನ ಟಿಪ್ಪಣಿಗಳು, ಹಣಕಾಸು ತ:ಖ್ತೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಉಪಯುಕ್ತವಾಗುವ ಹಾಗೂ ಇತರೆ ಯಾವುದೇ ಮಾಹಿತಿಯನ್ನು ಒಳಗೊಂಡಿರುವಂತೆ ವಾರ್ಷಿಕ ಹಣಕಾಸು ತ:ಖ್ತೆಯನ್ನು ತಯಾರಿಸುತ್ತದೆ.

## 2.9 ಸಾರ್ವಜನಿಕ ತನಿಖಾಧಿಕಾರಿ (ಓಂಬಡ್ಸ್ಮನ್)

ಹದಿಮೂರನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ ರಾಜ್ಯ ಸರ್ಕಾರವು ಸ್ಥಳೀಯ ಸಂಸ್ಥೆಗಳ ಕಾರ್ಯಕರ್ತರಾದ ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳು ಇವರುಗಳಿಬ್ಬರ ವಿರುದ್ಧದ ಭ್ರಷ್ಟಾಚಾರ ಮತ್ತು ದುರಾಡಳಿತದ ದೂರುಗಳನ್ನು ತನಿಖೆ ಮಾಡಲು ಸ್ವತಂತ್ರ ಸ್ಥಳೀಯ ಸಂಸ್ಥೆ ಸಾರ್ವಜನಿಕ ತನಿಖಾಧಿಕಾರಿಯನ್ನು ನೇಮಿಸುವ ವ್ಯವಸ್ಥೆಯನ್ನು ನಿಗದಿಪಡಿಸಬೇಕಿತ್ತು. ಆದಾಗ್ಯೂ ಸ್ವತಂತ್ರ ಓಂಬಡ್ಸ್ಮನ್‌ನ್ನು ನೇಮಿಸಿರಲಿಲ್ಲ.

ರಾಜ್ಯ ಸರ್ಕಾರವು, ಕರ್ನಾಟಕದಲ್ಲಿ ಲೋಕಾಯುಕ್ತರು ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಕರ್ತರುಗಳ ಮೇಲಿನ ಭ್ರಷ್ಟಾಚಾರ ಮತ್ತು ದುರಾಡಳಿತಕ್ಕೆ ಸಂಬಂಧಿತ ದೂರುಗಳ ಬಗ್ಗೆ ನಿಗಾ ವಹಿಸುತ್ತಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳಿಗಾಗಿ ಪ್ರತ್ಯೇಕ ಸಾರ್ವಜನಿಕ ತನಿಖಾಧಿಯವರ ಅವಶ್ಯಕತೆ ಇರುವುದಿಲ್ಲ ಎಂಬುದಾಗಿ ಉತ್ತರಿಸಿತು.

ಆದಾಗ್ಯೂ, ಹದಿಮೂರನೇ ಹಣಕಾಸು ಆಯೋಗದ ಶಿಫಾರಸಿನಂತೆ ಸ್ಥಳೀಯ ಸಂಸ್ಥೆಯ ಸ್ವತಂತ್ರ ಸಾರ್ವಜನಿಕ ತನಿಖಾಧಿಕಾರಿ ನೇಮಕದ ಆಶಯವು ಅನುಷ್ಠಾನಗೊಳ್ಳಲಿಲ್ಲ ಎನ್ನುವ ಸಂಗತಿಯು ಹಾಗೆಯೇ ಉಳಿಯಿತು.

## 2.10 ಅಗ್ನಿ ಅಪಾಯ

ಹದಿಮೂರನೇ ಹಣಕಾಸು ಆಯೋಗದ ಮಾರ್ಗದರ್ಶಿ ಸೂಚನೆಗಳಂತೆ ಒಂದು ದಶಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ (2001ರ ಜನಗಣತಿಯಂತೆ) ಎಲ್ಲಾ ಮಹಾನಗರ ಪಾಲಿಕೆಗಳು ಅವುಗಳ ಅಧಿಕಾರವ್ಯಾಪ್ತಿ ಪ್ರದೇಶದಲ್ಲಿ ಬೆಂಕಿ ಅಪಾಯಕ್ಕೆ ಪ್ರತಿಕ್ರಿಯಿಸುವ ಮತ್ತು ಅದನ್ನು ಉಪಶಮನಗೊಳಿಸುವ ಯೋಜನಾ ಕ್ರಮವನ್ನು ಸ್ಥಾಪಿಸಬೇಕಿದ್ದಿತು. ಕರ್ನಾಟಕದಲ್ಲಿ ಒಂದು ದಶಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆಯುಳ್ಳ (2011ರ ಜನಗಣತಿ) ಒಂದೇ ಒಂದು ನಗರ ಸ್ಥಳೀಯ ಸಂಸ್ಥೆ ಇದ್ದು ಅದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿದೆ. ಬೆಂಗಳೂರು ನಗರಕ್ಕೆ ಬೆಂಕಿ ಅವಘಡ ಪ್ರತಿಕ್ರಿಯೆ ಮತ್ತು ಉಪಶಮನಗೊಳಿಸುವ ಯೋಜನೆಯನ್ನು www.municipalities.gov.in ಜಾಲತಾಣಕ್ಕೆ ಆರೋಹಿಸಲಾಗಿದೆ. ಆದಾಗ್ಯೂ ಅದನ್ನು ರಾಜ್ಯಪತ್ರದಲ್ಲಿ ಪ್ರಕಟಪಡಿಸಿರಲಿಲ್ಲ.

# B: ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ

## 2.11 ಹಣಕಾಸು ಪಕ್ಷಿನೋಟ

### *2.11.1 ನಿಧಿಗಳ ಆಕರ*

ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ಆದಾಯವು ಸ್ವಂತ ಆಕರಗಳಿಂದ ಸ್ವೀಕೃತಿಗಳು, ಭಾರತ ಸರ್ಕಾರ/ರಾಜ್ಯ ಸರ್ಕಾರದಿಂದ ಅನುದಾನ/ನೆರವು ಮತ್ತು ರಾಜ್ಯ ಸರ್ಕಾರದ ಅನುಮೋದನೆಯ ಮೇರೆಗೆ ಆರ್ಥಿಕ ಸಂಸ್ಥೆಗಳಿಂದ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ಒಳಗೊಂಡಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಪ್ರಮುಖ ಸ್ವಂತ ಆದಾಯದ ಮೂಲವು ನೆಲ ಮತ್ತು ಕಟ್ಟಡಗಳ ಆಸ್ತಿ ತೆರಿಗೆಯಾಗಿದ್ದು ಮತ್ತು ಮನರಂಜನಾ ತೆರಿಗೆ, ಬೀದಿದೀಪದ ತೆರಿಗೆ ಮುಂತಾದ ಇತರೆ ತೆರಿಗೆಗಳನ್ನು ಒಳಗೊಂಡಿದೆ. ಕೆಲವು ವಸೂಲಾತಿಯ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವಹಿಸಲ್ಪಟ್ಟಿದ್ದರೆ ಇತರೆ ಕೆಲವು ತೆರಿಗೆಗಳ ದರಗಳು ಮತ್ತು ಅದರ ಪರಿಷ್ಕರಣೆ, ವಸೂಲಾತಿಯ ಕಾರ್ಯವಿಧಾನ, ನಿರ್ಧಾರಣೆಯ ವಿಧಾನ, ವಿನಾಯಿತಿ, ರಿಯಾಯಿತಿಗಳು ಇತ್ಯಾದಿಗಳಿಗೆ ಸಂಬಂಧಿತ ಅಧಿಕಾರವನ್ನು ರಾಜ್ಯ ಸರ್ಕಾರವೇ

ವಹಿಸಿಕೊಂಡಿದೆ. ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ತೆರಿಗೆಯೇತರ ಆದಾಯವು ಬಾಡಿಗೆ ಶುಲ್ಕದ ಆದಾಯ, ನೀರಿನ ಕರ ಇತ್ಯಾದಿಗಳನ್ನು ಒಳಗೊಂಡಿದೆ.

ರಾಜ್ಯ ಸರ್ಕಾರ/ಭಾರತ ಸರ್ಕಾರವು ಬಿಡುಗಡೆಗೊಳಿಸಿದ ಅನುದಾನ ಮತ್ತು ನೆರವುಗಳಲ್ಲದೆ ಆರ್ಥಿಕ ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಅಭಿವೃದ್ಧಿ ಚಟುವಟಿಕೆಗಳು ಮತ್ತು ಹಲವಾರು ಯೋಜನೆಗಳ ಜಾರಿಗೆ ಬಳಸಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಹಣಕಾಸುಗಳ ಹರಿವಿನ ನಕ್ಷೆಯನ್ನು **ನಕ್ಷೆ–2.1**ರಲ್ಲಿ ನೀಡಲಾಗಿದೆ.

**ನಕ್ಷೆ–2.1: ನಗರ ಸ್ಥಳೀಯ ಸಂಸ್ಥೆಗಳ ಹಣಕಾಸುಗಳ ಹರಿವಿನ ನಕ್ಷೆ**




### 2.11.1.1 ನಗರ ಸ್ಥಳೀಯ ಸಂಸ್ಥೆಗಳ ಆದಾಯದ ವಿವರಗಳು

ನಗರ ಸ್ಥಳೀಯ ಸಂಸ್ಥೆಗಳ (ಬಿಬಿಎಮ್‌ಪಿಯನ್ನು ಹೊರತುಪಡಿಸಿ) ಮತ್ತು ಬಿಬಿಎಮ್‌ಪಿಯ 2014–15ರಿಂದ 2019–20ರ ಅವಧಿಯ ಆದಾಯ ಸ್ವೀಕೃತಿಗಳ ವಿವರಗಳನ್ನು ಕೆಳಗಿನ **ಕೋಷ್ಟಕ –2.5** ಮತ್ತು **ಕೋಷ್ಟಕ –2.6**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ –2.5: ನಗರ ಸ್ಥಳೀಯ ಸಂಸ್ಥೆಗಳ ಆದಾಯದ ಮೂಲ (ಬಿಬಿಎಮ್‌ಪಿಯನ್ನು ಹೊರತುಪಡಿಸಿ)**

(₹ ಕೋಟಿಗಳಲ್ಲಿ)

| ವರ್ಷ | ಅನುದಾನಗಳು | | ಸ್ವಂತ ರಾಜಸ್ವ | ಒಟ್ಟು ರಾಜಸ್ವ |
|---|---|---|---|---|
| | ಭಾರತ ಸರ್ಕಾರ | ಕರ್ನಾಟಕ ಸರ್ಕಾರ | | |
| 2014–15 | 663 | 1,536 | 1,062 | 3261 |
| 2015–16 | 799 | 2,567 | 1,178 | 4544 |
| 2016–17 | 1,029 | 2,283 | 1,353 | 4665 |
| 2017–18 | 1,422 | 2,634 | 1,515 | 5571 |
| 2018–19 | 1,125 | 2,467 | 1,543 | 5135 |

ಆಧಾರ: ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿ

**ಕೋಷ್ಟಕ–2.6: ಬಿಬಿಎಮ್‌ಪಿಯ ಆದಾಯದ ಮೂಲಗಳು**

(₹ ಕೋಟಿಗಳಲ್ಲಿ)

| ವರ್ಷ | ಅನುದಾನಗಳು | | ಸ್ವಂತ ರಾಜಸ್ವ | ಒಟ್ಟು ರಾಜಸ್ವ |
|---|---|---|---|---|
| | ಭಾರತ ಸರ್ಕಾರ | ಕರ್ನಾಟಕ ಸರ್ಕಾರ | | |
| **2014–15** | 115.48 | 1,445.76 | 2,029.92 | **3,591.16** |
| **2015–16** | 285.44 | 1,751.96 | 2,140.73 | **4,178.13** |
| **2016–17** | 351.63 | 2,877.10 | 2,643.44 | **5,872.17** |
| **2017–18** | 275.3 | 3,754.68 | 2,825.12 | **6,855.10** |
| **2018–19** | 301.72 | 3,417.28 | 2,688.88 | **6,407.88** |

ಆಧಾರ: ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿ

**ಕೋಷ್ಟಕ–2.5**ರಿಂದ ಗಮನಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ (ಬಿಬಿಎಮ್‌ಪಿಯನ್ನು ಹೊರತುಪಡಿಸಿ) 2014–19ರ ಅವಧಿಯಲ್ಲಿ ಒಟ್ಟು ಆದಾಯದಲ್ಲಿ ಸ್ವಂತ ಆದಾಯದ ಪ್ರಮಾಣವು ಶೇಕಡಾ 26ರಿಂದ ಶೇಕಡಾ 33ರ ವ್ಯಾಪ್ತಿಯಲ್ಲಿದ್ದು ಸ್ವಂತ ಆದಾಯ ಉತ್ಪಾದಿಸುವಲ್ಲಿನ ಸಾಮರ್ಥ್ಯವು ಪ್ರೋತ್ಸಾಹದಾಯಕವಾಗಿರಲಿಲ್ಲ. ಆದುದರಿಂದ ನಗರ ಸ್ಥಳೀಯ ಸಂಸ್ಥೆಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳ ಮೇಲೆ ಹೆಚ್ಚು ಅವಲಂಬಿಸಿದ್ದವು.

**ಕೋಷ್ಟಕ–2.6**ರಿಂದ ಗಮನಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2014–15ರ ನಂತರದಲ್ಲಿ ಸ್ವಂತ ಆದಾಯದ ಉತ್ಪಾದನೆಯಲ್ಲಿ 2018–19ರ ಅಲ್ಪ ಇಳಿಮುಖದೊಂದಿಗೆ ಏರುಗತಿಯನ್ನು ತೋರಿಸಿತು. ಆದಾಗ್ಯೂ, ಒಟ್ಟು ಆದಾಯದಲ್ಲಿ ಸ್ವಂತ ಆದಾಯದ ಪ್ರಮಾಣವು ಶೇಕಡಾ 41ರಿಂದ ಶೇಕಡಾ 57ರ ವ್ಯಾಪ್ತಿಯಲ್ಲಿದ್ದಿತು.

### *2.11.2 ನಿಧಿಯ ಬಳಕೆ*

#### 2.11.2.1. ನಗರ ಸ್ಥಳೀಯ ಸಂಸ್ಥೆಗಳ ವೆಚ್ಚಗಳ ವಿವರಗಳು

ನಗರ ಸ್ಥಳೀಯ ಸಂಸ್ಥೆಗಳ (ಬಿಬಿಎಮ್‌ಪಿಯನ್ನು ಹೊರತುಪಡಿಸಿ) ಮತ್ತು ಬಿಬಿಎಮ್‌ಪಿಯ 2014–15ರಿಂದ 2018–19ರ ಅವಧಿಯ ವೆಚ್ಚದ ವಿವರಗಳನ್ನು **ಕೋಷ್ಟಕ–2.7:** ಮತ್ತು **ಕೋಷ್ಟಕ–2.8:** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.7 ನಗರಸ್ಥಳೀಯ ಸಂಸ್ಥೆಗಳ ವೆಚ್ಚದ ವಿವರಗಳು**

(₹ ಕೋಟಿಗಳಲ್ಲಿ)

| ವೆಚ್ಚ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ರಾಜಸ್ವ | 1,991 | 2,457 | 2,787 | 3,661 | 3,441 |
| ಬಂಡವಾಳ | 620 | 1,084 | 1,072 | 1,797 | 1,171 |

ಆಧಾರ: ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿ

**ಕೋಷ್ಟಕ–2.8: ಬಿಬಿಎಮ್‌ಪಿಯ ವೆಚ್ಚದ ವಿವರಗಳು**

(₹ ಕೋಟಿಗಳಲ್ಲಿ)

| ವೆಚ್ಚ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ರಾಜಸ್ವ | 2,389.31 | 1,270.17 | 2,227.53 | 3,354.10 | 2,719.91 |
| ಬಂಡವಾಳ | 1,973.31 | 2,719.03 | 2,834.13 | 4,009.16 | 3,793.66 |

ಆಧಾರ: ಬಿಬಿಎಮ್‌ಪಿಯು ಒದಗಿಸಿದ ಮಾಹಿತಿ

2014–15ರಿಂದ 2018–19ರ ಅವಧಿಯಲ್ಲಿ ರಾಜಸ್ವ ವೆಚ್ಚವು ಶೇಕಡಾ 13.83ರಷ್ಟು ಹೆಚ್ಚಾಗಿದ್ದರೆ ಬಂಡವಾಳ ವೆಚ್ಚವು ದುಪ್ಪಟ್ಟು (ಶೇಕಡಾ 92.94) ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ.

### 2.11.2.2 ಪ್ರಮುಖ ಯೋಜನೆಗಳ ಸ್ವೀಕೃತಿಗಳು ಮತ್ತು ವೆಚ್ಚಗಳ ಸ್ಥಿತಿ

ನಗರ ಸ್ಥಳೀಯ ಸಂಸ್ಥೆಗಳಲ್ಲಿ 2014–15ರಿಂದ 2018–19ರ ಅವಧಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಯೋಜನೆಗಳ ಸ್ವೀಕೃತಿಗಳು ಮತ್ತು ತತ್ಸಂಬಂಧಿತ ವೆಚ್ಚಗಳ ವಿವರಗಳನ್ನು **ಕೋಷ್ಟಕ–2.9**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.9: ಪ್ರಮುಖ ಯೋಜನೆಗಳ ಸ್ವೀಕೃತಿಗಳು ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ಸ್ವೀಕೃತಿಗಳು | | | | ವೆಚ್ಚ | | | |
|---|---|---|---|---|---|---|---|---|
| | ಎಸ್‌ಬಿಎಮ್ | ಅಮೃತ್ | ಯುಐಡಿಎಸ್‌ಎಸ್ ಎಮ್‌ಟಿ | ಪಿಕೆಜಿಬಿವೈ | ಎಸ್‌ಬಿಎಮ್ | ಅಮೃತ್ | ಯುಐಡಿಎಸ್‌ಎಸ್ ಎಮ್‌ಟಿ | ಪಿಕೆಜಿಬಿವೈ |
| 2014–15 | — | — | 52.74 | 10 | — | — | 36.23 | 0 |
| 2015–16 | 106.68 | 175.55 | 178.22 | 50 | 28.3 | 0 | 100.61 | 7.43 |
| 2016–17 | 117.48 | 249.23 | 7.74 | 5 | 62.73 | 125.1 | 296.42 | 39.23 |
| 2017–18 | 131.27 | 408.86 | 326.08 | 42.9 | 86.46 | 814.9 | 198.6 | 57.1 |
| 2018–19 | 399.71 | 856.34 | 145.97 | 42.9 | 37.61 | 1012.2 | 111.13 | 17.12 |

ಆಧಾರ: ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿ

ಎಸ್‌ಬಿಎಮ್: ಸ್ವಚ್ಛ ಭಾರತ್ ಮಿಶನ್

ಅಮೃತ್ = ನಗರ ಪರಿವರ್ತನೆ ಮತ್ತು ಪುನರುಜ್ಜೀವನಕ್ಕಾಗಿ ಅಟಲ್ ಮಿಷನ್ ಯೋಜನೆ

ಯುಐಡಿಎಸ್‌ಎಸ್‌ಎಮ್‌ಟಿ= ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ

ಪಿಕೆಜಿಬಿವೈ = ಪೌರಕಾರ್ಮಿಕ ಗೃಹಭಾಗ್ಯ ಯೋಜನೆ

ಯೋಜನೆಗಳ ಸ್ವೀಕೃತಿಗಳಿಗೆ ಹೋಲಿಸಿದಾಗ ಯೋಜನೆಗಳ ಮೇಲಿನ ವೆಚ್ಚವು ಅಮೃತ್ ಯೋಜನೆಯನ್ನು ಹೊರತುಪಡಿಸಿ ಬಹಳಷ್ಟು ಕಡಿಮೆಯಾಗಿದೆ ಎಂಬುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದಾಗಿದೆ. ಅಮೃತ್ ಯೋಜನೆಯಡಿ 2017–18 ಮತ್ತು 2018–19ರ ಸಾಲಿಗೆ ಯೋಜನೆಯ ವೆಚ್ಚವು ಸ್ವೀಕೃತಿಗಿಂತಲೂ ಹೆಚ್ಚುವರಿಯಾಗಿರುತ್ತದೆ. ಇದಕ್ಕೆ ಕಾರಣವೇನೆಂಬುದು ದಾಖಲೆಗಳಿಂದ ಕಂಡುಬಂದಿರುವುದಿಲ್ಲ.

### *2.11.3 ಆಸ್ತಿ ತೆರಿಗೆ ವಸೂಲಾತಿಯ ಸ್ಥಿತಿಗತಿ*

ರಾಜ್ಯ ಸರ್ಕಾರವು 1 ಏಪ್ರಿಲ್ 2002ರಿಂದ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ಪುರಸಭೆಗಳಿಗೆ ಅನ್ವಯಗೊಳ್ಳುವ ರೀತಿಯಲ್ಲಿ ಆಸ್ತಿ ತೆರಿಗೆ ಪಾವತಿಗಾಗಿ ಸ್ವಯಂ ನಿರ್ಧರಣಾ ಯೋಜನೆಯನ್ನು ಪ್ರಾರಂಭಿಸಿತು. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ (ಬಿಬಿಎಮ್‌ಪಿಯನ್ನು ಹೊರತುಪಡಿಸಿ) ಮಾರ್ಚ್ 2019ರ ಅಂತ್ಯದಲ್ಲಿದ್ದಂತೆ ಆಸ್ತಿ ತೆರಿಗೆಯ ವಸೂಲಾತಿಗೆ ಸೃಷ್ಟಿಸಲಾದ ಬೇಡಿಕೆ, ವಸೂಲಾತಿ ಹಾಗೂ ಬಾಕಿಯ ಸ್ಥಿತಿಗತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿಗದಿಪಡಿಸಿದ್ದ ಗುರಿ ಹಾಗೂ ಅದಕ್ಕೆ ಪ್ರತಿಯಾಗಿ ಮಾಡಲಾಗಿದ್ದ ವಸೂಲಾತಿಯ ವಿವರಗಳನ್ನು ಅನುಕ್ರಮವಾಗಿ **ಕೋಷ್ಟಕ–2.10** ಮತ್ತು **ಕೋಷ್ಟಕ–2.11**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.10: ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆಯ ಬೇಡಿಕೆ, ವಸೂಲಾತಿ ಮತ್ತು ಬಾಕಿಗಳ ಸ್ಥಿತಿಗತಿ**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | ಚಾಲ್ತಿ ವರ್ಷದ ಬೇಡಿಕೆ | ಒಟ್ಟು ಬೇಡಿಕೆ | ಸಂಗ್ರಹಣೆ | ಶಿಲ್ಕು | ಒಟ್ಟಾರೆ ಬೇಡಿಕೆಯ ಶೇಕಡಾವಾರು ವಸೂಲಾತಿ |
|---|---|---|---|---|---|---|
| 2014–15 | 71.26 | 458.01 | 529.27 | 423.53 | 105.74 | 80 |
| 2015–16 | 105.75 | 569.68 | 675.43 | 481.36 | 194.07 | 71 |
| 2016–17 | 194.07 | 680.15 | 874.22 | 555.33 | 318.89 | 64 |
| 2017–18 | 318.88 | 794.43 | 1,113.31 | 744.86 | 368.45 | 67 |
| 2018–19 | 368.45 | 858.75 | 1,227.20 | 724.11 | 503.09 | 59 |

ಆಧಾರ: ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿ

ಮೇಲಿನ ಕೋಷ್ಟಕದಿಂದ 2014–15ರಲ್ಲಿ ಇದ್ದಂತೆ ₹105.74 ಕೋಟಿ ಮೊತ್ತದ ಬಾಕಿಗಳು 2018–19ರಲ್ಲಿ ₹503.09 ಕೋಟಿಗೆ ಹೆಚ್ಚಳಗೊಂಡಿರುವುದನ್ನು ಮತ್ತು 2014–15ರ ಶೇಕಡಾ 80ರ ವಸೂಲಾತಿಯು 2018–19ರಲ್ಲಿ ಶೇಕಡಾ 59ಕ್ಕೆ ಇಳಿದಿರುವುದನ್ನು ಕಾಣಬಹುದಾಗಿದೆ.

**ಕೋಷ್ಟಕ–2.11: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿ ತೆರಿಗೆ ವಸೂಲಿ ಗುರಿ ಮತ್ತು ವಸೂಲಾತಿಯ ಸ್ಥಿತಿಗತಿ**

(₹ ಕೋಟಿಗಳಲ್ಲಿ)

| ವರ್ಷ | ಆಸ್ತಿಗಳ ಸಂಖ್ಯೆ | ಆಯವ್ಯಯ ಅಂದಾಜು | ವಾಸ್ತವಿಕ ಸಂಗ್ರಹಣೆ | ಶೇಕಡಾವಾರು ಸಂಗ್ರಹಣೆ |
|---|---|---|---|---|
| 2014–15 | 16,36,152 | 2,900.00 | 1,810.13 | 62 |
| 2015–16 | 16,98,457 | 2,900.00 | 1,960.19 | 68 |
| 2016–17 | 17,49,811 | 3,000.00 | 1,997.24 | 67 |
| 2017–18 | 18,11,178 | 3,300.00 | 2,133.12 | 65 |
| 2018–19 | 19,30,423 | 3,300.00 | 2,544.56 | 77 |

ಆಧಾರ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒದಗಿಸಿದ ಆಯವ್ಯಯ ಮತ್ತು ವಿವರಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2014–15ರಿಂದ 2018–19ರ ಅವಧಿಯಲ್ಲಿ ಆಸ್ತಿ ತೆರಿಗೆಯ ವಸೂಲಾತಿಯ ನಿಗದಿತ ಗುರಿಯನ್ನು ಸಾಧಿಸಿರಲಿಲ್ಲ. ಆದಾಗ್ಯೂ, ವಸೂಲಾತಿಯು 2014–15ರ ಶೇಕಡಾ 62ರಿಂದ 2018–19ರ ಸಾಲಿಗೆ ಶೇಕಡಾ 77ರಷ್ಟು ಹೆಚ್ಚಳಗೊಂಡಿತು.

### *2.11.4 ಜಮೆಯಾಗದ/ಕಡಿಮೆ ಜಮೆಯಾದ ಉಪಕರ*

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದ ಪರಿಚ್ಛೇದ 108(ಎ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಮಹಾನಗರ ಪಾಲಿಕೆಗಳು ಆಸ್ತಿ ತೆರಿಗೆಯೊಂದಿಗೆ ಅನ್ವಯಿಸುವ ಉಪಕರಗಳಾದ ಆರೋಗ್ಯ, ಗ್ರಂಥಾಲಯ ಮತ್ತು ಭಿಕ್ಷಾಟನಾ ಉಪಕರಗಳನ್ನು ವಿಧಿಸಿ ಸಂಗ್ರಹಿಸುವುದಕ್ಕೆ ಅನುವು ಮಾಡಿದೆ. ಕೋಷ್ಟಕ–2.12ರಲ್ಲಿ ಉಪಕರಗಳನ್ನು ವಿಧಿಸುವ ಪ್ರಾಧಿಕಾರದ ಅಧ್ಯಾದೇಶ, ದರ ಹಾಗೂ ಉಪಕರಗಳನ್ನು ಜಮೆ ಮಾಡಬೇಕಾದ ಲೆಕ್ಕಶೀರ್ಷಿಕೆ/ಸಂಸ್ಥೆಯ ವಿವರಗಳನ್ನು ತೋರಿಸಿದೆ.

**ಕೋಷ್ಟಕ–2.12: ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಯ ಮೇಲೆ ವಿಧಿಸಬೇಕಾದ ಉಪಕರಗಳ ವಿವರಗಳನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ಉಪಕರದ ಮಾದರಿ | ಉಪಕರವನ್ನು ವಿಧಿಸುವ ಪ್ರಾಧಿಕಾರದ ಅಧ್ಯಾದೇಶ | ಜಾರಿ ದಿನಾಂಕ | ದರ | ಉದ್ದೇಶ | ಜಮೆ ಮಾಡಬೇಕಿರುವುದು |
|---|---|---|---|---|---|---|
| 1 | ಆರೋಗ್ಯ ಉಪಕರ | ಕರ್ನಾಟಕ ಆರೋಗ್ಯ ಉಪಕರ ಅಧಿನಿಯಮ, 1962 | ಸೆಪ್ಟಂಬರ್ 1962 | 15% | ಪ್ರಾಥಮಿಕ/ಮೂಲ ಆರೋಗ್ಯ ಪಾಲನೆ ಮೂಲಸೌಕರ್ಯ ಸುಧಾರಣೆ | 0045–00–109–0–01 (ರಾಜ್ಯ ನಿಧಿ) |
| 2 | ಗ್ರಂಥಾಲಯ ಉಪಕರ | ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಅಧಿನಿಯಮ, 1965 | ಏಪ್ರಿಲ್ 1966 | 6% | ಗ್ರಂಥಾಲಯ ಸೇವೆಗಳ ಸುಧಾರಣೆ ಮತ್ತು ಅಭಿವೃದ್ಧಿ | ಜಿಲ್ಲಾ/ಕೇಂದ್ರ/ನಗರ ಗ್ರಂಥಾಲಯ |
| 3 | ಭಿಕ್ಷಾಟನೆ ಉಪಕರ | ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ, 1976 | ಏಪ್ರಿಲ್ 1976 | 3% | ಭಿಕ್ಷುಕರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವುದು | ಕೇಂದ್ರ ಪರಿಹಾರ ನಿಧಿ |

**ಆಧಾರ:ಕೆಎಮ್‌ಸಿ ಅಧಿನಿಯಮ**

ಪೌರಾಡಳಿತ ನಿರ್ದೇಶನಾಲಯ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒದಗಿಸಿದ ಮಾಹಿತಿಯ ಪರಿಶೀಲನೆಯು 2014–15ರಿಂದ 2018–19ರ ಅವಧಿಯಲ್ಲಿ ಸಂಗ್ರಹಣೆ ಮಾಡಿದ ಉಪಕರದಲ್ಲಿ ಅನುಕ್ರಮವಾಗಿ ಕೋಷ್ಟಕ–2.13 ಮತ್ತು ಕೋಷ್ಟಕ–2.14ರಲ್ಲಿ ವಿವರಿಸಿರುವಂತೆ, ಬೃಹತ್ ಮೊತ್ತದ ಶಿಲ್ಕನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲ ಎಂಬುದನ್ನು ತೋರಿಸಿತು.

**ಕೋಷ್ಟಕ–2.13: ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಉಪಕರದ ವಸೂಲಾತಿ, ಪಾವತಿ ಮತ್ತು ಬಾಕಿಯ ವಿವರಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ)**

(₹ ಕೋಟಿಗಳಲ್ಲಿ)

| ವರ್ಷ | ಆರೋಗ್ಯ ಉಪಕರ | | | | ಗ್ರಂಥಾಲಯ ಉಪಕರ | | | | ಭಿಕ್ಷಾಟನಾ ಉಪಕರ | | | |
|---|---|---|---|---|---|---|---|---|---|---|---|---|
| | ಪ್ರಾರಂಭಿಕ ಶಿಲ್ಕು | ಸಂಗ್ರಹಣೆ | ಪಾವತಿ | ಬಾಕಿ | ಪ್ರಾರಂಭಿಕ ಶಿಲ್ಕು | ಸಂಗ್ರಹಣೆ | ಪಾವತಿ | ಬಾಕಿ | ಪ್ರಾರಂಭಿಕ ಶಿಲ್ಕು | ಸಂಗ್ರಹಣೆ | ಪಾವತಿ | ಬಾಕಿ |
| **2014–15** | 195.43 | 47.42 | 20.66 | 222.19 | 35.17 | 19.12 | 13.99 | 40.30 | 9.34 | 9.68 | 6.58 | 12.44 |
| **2015–16** | 222.19 | 52.07 | 15.56 | 258.71 | 40.30 | 21.46 | 16.64 | 45.11 | 12.44 | 10.49 | 7.15 | 15.78 |
| **2016–17** | 258.71 | 59.51 | 26.98 | 291.24 | 45.11 | 24.61 | 19.59 | 50.13 | 15.78 | 13.49 | 9.03 | 20.24 |
| **2017–18** | 291.24 | 68.19 | 29.30 | 330.13 | 50.13 | 26.98 | 20.91 | 56.20 | 20.24 | 14.19 | 12.21 | 22.22 |
| **2018–19** | 330.13 | 67.50 | 19.48 | 378.15 | 56.20 | 26.76 | 22.33 | 60.63 | 22.22 | 14.64 | 12.68 | 24.18 |

ಆಧಾರ: ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಇರುವಂತೆ ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ₹378.15 ಕೋಟಿ ಆರೋಗ್ಯ ಉಪಕರ, ₹60.63 ಕೋಟಿ ಗ್ರಂಥಾಲಯ ಉಪಕರ ಹಾಗೂ ₹24.18 ಕೋಟಿ ಭಿಕ್ಷಾಟನಾ ಉಪಕರವನ್ನು ಸಂಬಂಧಿಸಿದ ಇಲಾಖೆಗಳಿಗೆ/ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಿರಲಿಲ್ಲ ಎಂಬುದನ್ನು ಗಮನಿಸಬಹುದಾಗಿದೆ.

**ಕೋಷ್ಟಕ–2.14: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉಪಕರದ ವಸೂಲಾತಿ, ಪಾವತಿ ಮತ್ತು ಬಾಕಿಯ ವಿವರಗಳು**

**(₹ ಕೋಟಿಗಳಲ್ಲಿ)**

| ವರ್ಷ | ಆರೋಗ್ಯ ಉಪಕರ | | | ಗ್ರಂಥಾಲಯ ಉಪಕರ | | | ಭಿಕ್ಷಾಟನಾ ಉಪಕರ | | |
|---|---|---|---|---|---|---|---|---|---|
| | ಸಂಗ್ರಹಣೆ | ಪಾವತಿ | ಬಾಕಿ | ಸಂಗ್ರಹಣೆ | ಪಾವತಿ | ಬಾಕಿ | ಸಂಗ್ರಹಣೆ | ಪಾವತಿ | ಬಾಕಿ |
| 2014–15 | 176.40 | 0 | 176.40 | 70.56 | 8.00 | 62.56 | 35.28 | 5.00 | 30.28 |
| 2015–16 | 186.74 | 0 | 186.74 | 74.69 | 58.08 | 16.61 | 37.34 | 12.67 | 24.67 |
| 2016–17 | 217.88 | 0 | 217.88 | 87.15 | 50.00 | 37.15 | 43.57 | 20.00 | 23.57 |
| 2017–18 | 232.78 | 0 | 232.78 | 93.11 | 14.00 | 79.11 | 46.56 | 19.22 | 27.34 |
| 2018–19 | 273.48 | 0 | 273.48 | 109.39 | 78.09 | 31.30 | 54.69 | 10.00 | 44.69 |
| **ಒಟ್ಟು** | **1,087.28** | **0** | **1,087.28** | **434.90** | **208.17** | **226.73** | **217.44** | **66.89** | **150.55** |

ಆಧಾರ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒದಗಿಸಿದ ಮಾಹಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಂಗ್ರಹಣೆ ಮಾಡಿದ ₹1,087.28 ಕೋಟಿ ಮೊತ್ತದ ಸಂಪೂರ್ಣ ಆರೋಗ್ಯ ಉಪಕರವನ್ನು ರಾಜ್ಯ ಸರ್ಕಾರಕ್ಕೆ ಪಾವತಿ ಮಾಡಿರಲಿಲ್ಲವಾದರೆ, ಬಾಕಿ ಉಳಿದ ಗ್ರಂಥಾಲಯ ಉಪಕರ ₹226.73 ಕೋಟಿ ಹಾಗೂ ಭಿಕ್ಷಾಟನಾ ಉಪಕರ ₹150.55 ಕೋಟಿ ಮೊತ್ತವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲ.

### *2.11.5 ಸ್ಥಿರಾಸ್ತಿ ವರ್ಗಾವಣೆ ಮೇಲೆ ವಿಧಿಸಿದ ಸುಂಕದ ಬಿಡುಗಡೆ*

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976ರ ಪರಿಚ್ಛೇದ 140ರ ಅನ್ವಯ ದೊಡ್ಡನಗರ ಪ್ರದೇಶದ ಪರಿಮಿತಿಯೊಳಗೆ ಇರುವ ಎಲ್ಲಾ ಸ್ಥಿರಾಸ್ತಿಗಳ ಮಾರಾಟ, ದಾನ, ಅಡಮಾನ, ವಿನಿಮಯ ಅಥವಾ ಶಾಶ್ವತ ಗುತ್ತಿಗೆ ಇವುಗಳ ಲಿಖಿತ ಪತ್ರಗಳ ಮೇಲೆ ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಮೂಲಕ ವಿಧಿಸಲಾದ ಸುಂಕದ ಮೇಲೆ ಶೇಕಡಾ ಎರಡರ ದರದಲ್ಲಿ ಸುಂಕವನ್ನು ಅಧಿಭಾರದ ರೂಪದಲ್ಲಿ ವಿಧಿಸತಕ್ಕದ್ದು. ನಗರ ಪ್ರದೇಶಗಳಲ್ಲಿರುವ ಭೂಮಿಗಳು ಹಾಗೂ ಇತರೆ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಸಂಪೂರ್ಣ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳ ಜನಸಂಖ್ಯೆಗೆ ಅನುಗುಣವಾಗಿ ನೋಂದಣಿಗಳ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರಿಂದ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡಾ 10ರಷ್ಟನ್ನು ಸಂಗ್ರಹಣಾ ವೆಚ್ಚದ ಬಾಬ್ತು ಕಡಿದುಕೊಂಡು ವರ್ಗಾಯಿಸಲಾಗುವುದು.

ನಗರ ಸ್ಥಳೀಯ ಸಂಸ್ಥೆಗಳಿಗೆ 2016–17 ಮತ್ತು 2017–18ರ ವರ್ಷಕ್ಕೆ ಸಂಬಂಧಿಸಿದ ಸ್ಥಿರಾಸ್ತಿಗಳ ಮೇಲಿನ ವರ್ಗಾವಣೆ ಶುಲ್ಕ ₹27.18 ಕೋಟಿಯನ್ನು ಫೆಬ್ರವರಿ 2019ರಲ್ಲಿ ಬಿಡುಗಡೆ ಮಾಡಲಾಗಿತ್ತು ಮತ್ತು 2018–19ರ ಸಾಲಿನ ಸ್ಥಿರಾಸ್ತಿ ವರ್ಗಾವಣೆ ಮೇಲಿನ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಇನ್ನೂ ವರ್ಗಾಯಿಸಿರಲಿಲ್ಲ *(ಜೂನ್ 2021)*. ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಂದ ಸಂಪೂರ್ಣ ಮಾಹಿತಿಯು ಸ್ವೀಕೃತವಾದ ನಂತರ ಸುಂಕವನ್ನು ವರ್ಗಾಯಿಸಲಾಗುವುದು ಎಂದು ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ತಿಳಿಸಿದರು.

## 2.12 ಹಣಕಾಸು ಆಯೋಗದ ಶಿಫಾರಸುಗಳ ಅನುಷ್ಠಾನದ ಸ್ಥಿತಿಗತಿ

### *2.12.1 ರಾಜ್ಯ ಹಣಕಾಸು ಆಯೋಗ*

ರಾಜ್ಯ ಹಣಕಾಸು ಆಯೋಗದ ಅಧ್ಯಾದೇಶವು ಪಂಚಾಯತ್‌ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸುವುದು ಮತ್ತು ಅವುಗಳ ಆರ್ಥಿಕ ಪರಿಸ್ಥಿತಿಯನ್ನು ಬಾಧಿಸುವ ಮತ್ತು ರಾಜ್ಯ ಸರ್ಕಾರದಿಂದ ನಿಧಿಯ ವಿಕೇಂದ್ರೀಕರಣಗೊಳಿಸುವಿಕೆಯ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ಶಿಫಾರಸುಗಳನ್ನು ಮಾಡುವುದನ್ನು ಒಳಗೊಂಡಿದೆ. ಕರ್ನಾಟಕ ಸರ್ಕಾರವು ಈವರೆಗೆ ನಾಲ್ಕು[11] ರಾಜ್ಯ ಹಣಕಾಸು ಆಯೋಗಗಳನ್ನು ರಚಿಸಿದೆ. ನಾಲ್ಕನೇ ಹಣಕಾಸು ಆಯೋಗದ ಶಿಫಾರಸುಗಳು 2018–19ರಿಂದ 2022–23ರ ಅವಧಿಯನ್ನು ವ್ಯಾಪಿಸಿದೆ.

ರಾಜ್ಯ ಸರ್ಕಾರವು ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳನ್ನು ಒಟ್ಟಾರೆಯಾಗಿ ಅಥವಾ ಕೆಲವು ಮಾರ್ಪಾಡುಗಳೊಂದಿಗೆ ಅಂಗೀಕರಿಸಬಹುದಾಗಿದೆ. ರಾಜ್ಯ ಸರ್ಕಾರವು ಶಿಫಾರಸುಗಳಲ್ಲಿ ಕೆಲವನ್ನು ಮಾರ್ಪಾಡುಗಳೊಂದಿಗೆ ಅಂಗೀಕರಿಸಿದೆ. ನಾಲ್ಕನೇ ರಾಜ್ಯ ಹಣಕಾಸು ಆಯೋಗದ ನಿಧಿ ವರ್ಗಾವಣೆಗೆ ಸಂಬಂಧಿಸಿದಂತೆ ಪ್ರಮುಖ ಶಿಫಾರಸುಗಳು ಮತ್ತು ಅವುಗಳ ಮಾರ್ಪಾಟುಗಳನ್ನು **ಕೋಷ್ಟಕ–2.15**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.15: ಅನುಷ್ಠಾನದ ಪ್ರಗತಿಯ ಪಥ**

| ಆರ್ಥಿಕ ಆಯೋಗದ ವರದಿಯ ಉಲ್ಲೇಖ | ಶಿಫಾರಸುಗಳು | ಅಂಗೀಕರಿಸಿದ ಶಿಫಾರಸುಗಳು/ ಮಾರ್ಪಾಡುಗಳು | ಸ್ಥಿತಿಗತಿ/ಷರಾ |
|---|---|---|---|
| ನಾಲ್ಕನೆಯ ವರದಿ | ರಾಜ್ಯದ ಋಣೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ ಶೇಕಡಾ 12ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ (ಬಿಬಿಎಮ್‌ಪಿ ಹೊರತುಪಡಿಸಿ)ಹಂಚಿಕೆ ಮಾಡುವುದು.. | ಋಣೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯ ಶೇಕಡಾ 12ರಷ್ಟನ್ನು ಹಂತಹಂತವಾಗಿ ವರ್ಗಾಯಿಸಲಾಗುವುದು (ಅಂದರೆ, ಐದು ವರ್ಷದ ಅವಧಿಯಲ್ಲಿ ಪ್ರತಿ ವರ್ಷ ಶೇಕಡಾ 0.5ರ ಹೆಚ್ಚಳದೊಂದಿಗೆ ಶೇಕಡಾ 10.5ರಿಂದ ಶೇಕಡಾ 12ರವರೆಗೆ) | ಎರಡನೇ, ಮೂರನೇ ಮತ್ತು ನಾಲ್ಕನೇ ರಾಜ್ಯ ಹಣಕಾಸು ಆಯೋಗಗಳ ವರದಿಯಲ್ಲಿ ಕೇಂದ್ರ ಹಣಕಾಸು ಆಯೋಗದ ಅನುದಾನಗಳು ರಾಜ್ಯದ ಋ.ನಿ.ಸ್ವ.ರಾದ ಭಾಗವಾಗಿರುವುದರಿಂದ ಹಂಚಿಕೆಯ ಭಾಗವಾಗಬಾರದು ಎಂಬುದಾಗಿ ಶಿಫಾರಸು ಮಾಡಲಾಗಿತ್ತು. ಆದರೆ, ರಾಜ್ಯ ಸರ್ಕಾರವು ಈ ಅನುದಾನಗಳನ್ನು ಹಂಚಿಕೆಯ ಭಾಗವಾಗಿ ಪರಿಗಣಿಸುತ್ತಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದ ಅನುದಾನವು ಕಡಿಮೆ ಬಿಡುಗಡೆಯಲ್ಲಿ ಪರಿಣಮಿಸಿದೆ. |

ಆಧಾರ: ರಾಜ್ಯ ಹಣಕಾಸು ಆಯೋಗದ ವರದಿ ಮತ್ತು ಸರ್ಕಾರದ ಆದೇಶ

#### 2.12.1.1 ಕಡಿಮೆ ಬಿಡುಗಡೆಗೊಳಿಸಿದ ರಾಜ್ಯ ಹಣಕಾಸು ಆಯೋಗದ ಅನುದಾನ

ನಗರ ಸ್ಥಳೀಯ ಸಂಸ್ಥೆಗಳಿಗೆ 2014–15ರಿಂದ 2018–19ರವರೆಗೆ ರಾಜ್ಯ ಸರ್ಕಾರದ ಆದೇಶಗಳಂತೆ ಬಿಡುಗಡೆಗೊಳಿಸ ಬೇಕಿದ್ದ ಹಾಗೂ ವಾಸ್ತವವಾಗಿ ಬಿಡುಗಡೆಗೊಳಿಸಲ್ಪಟ್ಟ ಅನುದಾನದ ವಿವರಗಳನ್ನು **ಕೋಷ್ಟಕ–2.16ರಲ್ಲಿ** ತೋರಿಸಲಾಗಿದೆ.

[11]ಮೊದಲ ರಾಜ್ಯ ಹಣಕಾಸು ಆಯೋಗ– 1997–98 ರಿಂದ 2001–02, ಎರಡನೇ ರಾಜ್ಯ ಹಣಕಾಸು ಆಯೋಗ– 2006–07 ರಿಂದ 2010–11, ಮೂರನೇ ರಾಜ್ಯ ಹಣಕಾಸು ಆಯೋಗ–2011–12 ರಿಂದ 2015–16 (2017–18ರವರೆಗೆ ವಿಸ್ತರಿಸಲಾಗಿದೆ).

**ಕೋಷ್ಟಕ–2.16: ರಾಜ್ಯ ಹಣಕಾಸು ಆಯೋಗದ ಅನುದಾನಗಳು**

(₹ ಕೋಟಿಗಳಲ್ಲಿ)

| ವರ್ಷ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| **ಹಂಚಿಕೆ** | 7,487 | 8,090 | 8,875 | 9,361 | 10,878 |
| **ಬಿಡುಗಡೆ** | 6,010 | 6,076 | 5,686 | 6,490 | 5,425 |
| **ಕಡಿಮೆ ಬಿಡುಗಡೆ** | 1,477 | 2,014 | 3,189 | 2,871 | 5,453 |
| **ಕಡಿಮೆ ಬಿಡುಗಡೆಯ ಶೇಕಡಾವಾರು** | 20 | 25 | 36 | 31 | 50 |

ಆಧಾರ: ಹಣಕಾಸು ಲೆಕ್ಕಗಳು

ಮೇಲಿನ ಕೋಷ್ಟಕದಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ 2014–15ರಿಂದ 2018–19ರ ಅವಧಿಯಲ್ಲಿ ಕಡಿಮೆಯಾಗಿ ಬಿಡುಗಡೆಗೊಳಿಸಿದ ಅನುದಾನವು ಶೇಕಡಾ 20ರಿಂದ 50ರವರೆಗೆ ವ್ಯಾಪಿಸಿದ್ದಿತು ಎಂಬುದನ್ನು ಗಮನಿಸಬಹುದು.

### 2.12.2 ಕೇಂದ್ರ ಹಣಕಾಸು ಆಯೋಗ

ರಾಜ್ಯ ಸರ್ಕಾರದಿಂದ 2015–19ರ ಅವಧಿಯಲ್ಲಿ ಭಾರತ ಸರ್ಕಾರದಿಂದ 14ನೇ ಹಣಕಾಸು ಆಯೋಗದ ಬಾಬ್ತು, ಸ್ವೀಕರಿಸಲಾದ ಅನುದಾನ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟ ವಿವರಗಳನ್ನು **ಕೋಷ್ಟಕ–2.17**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.17: ನಗರ ಸ್ಥಳೀಯ ಸಂಸ್ಥೆಗಳಿಗೆ 2015–19ರ ಅವಧಿಯಲ್ಲಿ 14ನೇ ಹಣಕಾಸು ಆಯೋಗದ ಅನುದಾನವನ್ನು ಬಿಡುಗಡೆ ಮಾಡಿದ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಮೂಲ ಅನುದಾನ | | | ಕಾರ್ಯಕ್ಷಮತೆ ಅನುದಾನ | | |
|---|---|---|---|---|---|---|
| | ಹಂಚಿಕೆ | ಬಿಡುಗಡೆ | ಕೊರತೆ | ಹಂಚಿಕೆ | ಬಿಡುಗಡೆ | ಕೊರತೆ |
| 2015–16 | 562.08 | 562.08 | 00 | 00 | 00 | 00 |
| 2016–17 | 778.29 | 778.29 | 0.00 | 229.70 | 229.70 | 00 |
| 2017–18 | 899.25 | 899.25 | 0.00 | 259.94 | 256.16 | 3.78 |
| 2018–19 | 1,040.27 | 1,040.27 | 00 | 295.20 | 0 | 295.20 |

ಆಧಾರ: ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿ

ವರ್ಷ 2017–18ರ ಸಾಲಿನಲ್ಲಿ ₹3.78 ಕೋಟಿಯಷ್ಟು ಕಾರ್ಯಕ್ಷಮತೆ ಅನುದಾನವನ್ನು ಕಡಿಮೆ ಬಿಡುಗಡೆ ಮಾಡಲಾಗಿದ್ದಿತು. ನಗರ ಸ್ಥಳೀಯ ಸಂಸ್ಥೆಗಳಿಗೆ 2018–19ರ ಸಾಲಿನಲ್ಲಿ ಕಾರ್ಯಕ್ಷಮತೆ ಅನುದಾನವನ್ನು ಬಿಡುಗಡೆ ಮಾಡಿರಲಿಲ್ಲ. ಈ ವಿಷಯದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಯವರು ಗೌರವಾನ್ವಿತ ಭಾರತ ಸರ್ಕಾರದ ಆರ್ಥಿಕ ಮಂತ್ರಿಯವರಿಗೆ ನೆನಪೋಲೆಯನ್ನು ಕಳಿಸಿದ್ದರು(18 ಸೆಪ್ಟೆಂಬರ್ 2020).

## 2.13 ಆಸ್ತಿ ತೆರಿಗೆ ಮಂಡಳಿ

ರಾಜ್ಯದ ಎಲ್ಲ ಪುರಸಭೆಗಳಲ್ಲಿ ಮತ್ತು ನಗರಪಾಲಿಕೆಗಳಲ್ಲಿ ಆಸ್ತಿ ತೆರಿಗೆ ಮೌಲ್ಯಮಾಪನ ಮಾಡಲು ಸ್ವತಂತ್ರ ಮತ್ತು ಪಾರದರ್ಶಕ ಕಾರ್ಯವಿಧಾನವನ್ನು ಜಾರಿಗೆ ತರಲು ಸಹಾಯವಾಗುವ ರಾಜ್ಯ ಮಟ್ಟದ ಆಸ್ತಿ ತೆರಿಗೆ ಮಂಡಳಿಯನ್ನು ರಾಜ್ಯ ಸರ್ಕಾರವು ಸ್ಥಾಪಿಸಬೇಕೆಂಬುದಾಗಿ ಹದಿಮೂರನೇ ಹಣಕಾಸು ಆಯೋಗವು ಶಿಫಾರಸು ಮಾಡಿತ್ತು. ಮುಂದುವರೆದು, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮದ ಅಧ್ಯಾಯ IX-A ಅಡಿಯಲ್ಲಿ 102ಎ ಯಿಂದ 102 ವೈ ಪರಿಚ್ಛೇದಗಳು ರಾಜ್ಯ ಸರ್ಕಾರವು ಕರ್ನಾಟಕ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸುವ ಸಲುವಾಗಿ ಅನುವು ಮಾಡಿದೆ.

ರಾಜ್ಯದಲ್ಲಿ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸಿರಲಿಲ್ಲ (ಜುಲೈ 2020).

## C: ರಾಜ್ಯದಲ್ಲಿ ಸಾರ್ವಜನಿಕ ಉತ್ತರದಾಯಿತ್ವದ ವ್ಯವಸ್ಥೆ

### 2.14 ಹಣಕಾಸು ವಹಿವಾಟು ವರದಿ ಮಾಡುವಿಕೆಯ ಚೌಕಟ್ಟು

#### 2.14.1 *ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ತ:ಖ್ತೆಗಳ ಪ್ರಮಾಣೀಕರಣ*

ಕರ್ನಾಟಕ ಪೌರ ಸಂಸ್ಥೆಗಳ ಲೆಕ್ಕಪತ್ರ ಮತ್ತು ಅಯವ್ಯಯ ನಿಯಮಗಳಂತೆ (ನಿಯಮ 125) ನಗರ ಸ್ಥಳೀಯ ಸಂಸ್ಥೆಗಳು ಸ್ವೀಕೃತಿ ಹಾಗೂ ಪಾವತಿಗಳ ಲೆಕ್ಕ, ಆಸ್ತಿ ಮತ್ತು ಹೊಣೆಗಾರಿಕೆ ಹಾಗೂ ಆದಾಯ ಮತ್ತು ವೆಚ್ಚದ ಲೆಕ್ಕವನ್ನು ಒಳಗೊಂಡಿರುವ ಲೆಕ್ಕಪತ್ರದ ಮೇಲಿನ ಟಿಪ್ಪಣಿಗಳೊಂದಿಗೆ ನಿಗದಿಪಡಿಸಿರುವ ನಮೂನೆ ಹಾಗೂ ಮಾದರಿಯಲ್ಲಿ ಹಣಕಾಸಿನ ತ:ಖ್ತೆಗಳನ್ನು ತಯಾರಿಸಬೇಕು ಮತ್ತು ರಾಜ್ಯ ಸರ್ಕಾರವು ನೇಮಕ ಮಾಡಿರುವ ಸನ್ನದು ಲೆಕ್ಕಿಗರಿಗೆ (ಲೆಕ್ಕಪರಿಶೋಧಕರು) ಆರ್ಥಿಕ ವರ್ಷ ಕೊನೆಗೊಂಡ ಎರಡು ತಿಂಗಳೊಳಗೆ ಸಲ್ಲಿಸಬೇಕು.

ಲೆಕ್ಕಪರಿಶೋಧಕರು ಆರ್ಥಿಕ ವರ್ಷ ಕೊನೆಗೊಂಡ (31 ಮಾರ್ಚ್) ನಾಲ್ಕು ತಿಂಗಳೊಳಗೆ (ಜುಲೈ) ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಬೇಕು ಮತ್ತು ಲೆಕ್ಕಪರಿಶೋಧನೆಯು ಪೂರ್ಣಗೊಂಡ ನಂತರ ಒಂದು ವರದಿಯೊಂದಿಗೆ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರವನ್ನು ಪೌರಾಡಳಿತ ಸಮಿತಿ ಹಾಗೂ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು. ಆರ್ಥಿಕ ವರ್ಷ ಕೊನೆಗೊಂಡ ಐದು ತಿಂಗಳೊಳಗೆ ಸಮಿತಿಯು ಲೆಕ್ಕಪರಿಶೋಧನೆಗೊಂಡ ಲೆಕ್ಕಪತ್ರವನ್ನು ಅಳವಡಿಸಿಕೊಳ್ಳಬೇಕು.

2017–18 ಮತ್ತು 2018–19ರ ಸಾಲುಗಳಿಗೆ 276 ನಗರ ಸ್ಥಳೀಯ ಸಂಸ್ಥೆಗಳ ಪೈಕಿ ಕ್ರಮವಾಗಿ 145 ಮತ್ತು 136 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯು ಪೂರ್ಣಗೊಂಡಿತ್ತು (ಜನವರಿ 2021).

#### *2.14.2 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಣಕಾಸು ಲೆಕ್ಕಪತ್ರಗಳ ಪ್ರಮಾಣೀಕರಣ*

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದ ಅನುಸೂಚಿ IX ರ ಭಾಗ IIರ ಅನುವು 9(2)ರ ಅನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರವರು ಪ್ರತಿವರ್ಷವೂ ವಾರ್ಷಿಕ ಲೆಕ್ಕಪತ್ರವನ್ನು ತಯಾರಿಸುವ ಅಗತ್ಯತೆ ಇದ್ದಿತು ಮತ್ತು ಅದನ್ನು ಸಂಬಂಧಪಟ್ಟ ದಾಖಲೆಗಳ ಜೊತೆಯಲ್ಲಿ ಪರಿಶೀಲನೆಗಾಗಿ ಮುಖ್ಯ ಲೆಕ್ಕಪರಿಶೋಧಕರಿಗೆ ಮುಂದಿನ ವರ್ಷದ ಅಕ್ಟೋಬರ್ ತಿಂಗಳ ಮೊದಲ ದಿನವನ್ನು ಮೀರದಂತೆ ಹಾಜರುಪಡಿಸಬೇಕು. ಆದಾಗ್ಯೂ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಸನಬದ್ಧ ಲೆಕ್ಕಪರಿಶೋಧಕರಾಗಿರುವ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018–19ರ ಸಾಲಿನವರೆಗಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿದ್ದರು.

### 2.15 ಲೆಕ್ಕಪರಿಶೋಧನಾ ವ್ಯವಸ್ಥೆಗಳು

#### *2.15.1 ಆಂತರಿಕ ಲೆಕ್ಕಪರಿಶೋಧನೆ*

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಂತರಿಕ ಲೆಕ್ಕಪರಿಶೋಧನೆಯು ಸಂಬಂಧಿಸಿದ ಅಧಿನಿಯಮಗಳು ಮಾತ್ರವಲ್ಲದೆ ಆರ್ಥಿಕ ಲೆಕ್ಕಪತ್ರ ನಿಯಮಾವಳಿಗಳಲ್ಲಿ ಕಲ್ಪಿಸಿರುವ ಪದ್ಧತಿಗಳ ಪಾಲನೆಯ ಮಟ್ಟವನ್ನು ಪರಿಶೀಲಿಸಲು ಮತ್ತು ಮೌಲ್ಯಮಾಪನ ಮಾಡಲು ಸಂಭವಿಸಬಹುದಾದ ಅಪಾಯದ ನಿರ್ವಹಣೆಗೆ ಮತ್ತು ಆಂತರಿಕ ನಿಯಂತ್ರಣಾ ಚೌಕಟ್ಟಿನ ವ್ಯವಸ್ಥೆಯು ಸಾಕಷ್ಟಿರುವುದರ ಬಗ್ಗೆ ಒಂದು ಸ್ವತಂತ್ರವಾದ ಖಾತರಿಯನ್ನು ಒದಗಿಸುವುದಕ್ಕೆ ಸಹಾಯ ಮಾಡುವ ಒಂದು ಮಹತ್ವದ ಸಾಧನವಾಗಿದೆ.

ನಿರ್ದೇಶನಾಲಯದಲ್ಲಿ ಪ್ರತ್ಯೇಕವಾದ ಆಂತರಿಕ ಲೆಕ್ಕಪರಿಶೋಧನಾ ಶಾಖೆಯು ಇರುವುದಿಲ್ಲವೆಂದು ಪೌರಾಡಳಿತ ನಿರ್ದೇಶನಾಲಯವು ತಿಳಿಸಿತು (ಡಿಸೆಂಬರ್ 2020). ಲೆಕ್ಕಪತ್ರ ಶಾಖೆಯಲ್ಲಿ ಎಂಟು ಹೆಚ್ಚುವರಿ ಹುದ್ದೆಗಳನ್ನು ಆಗಸ್ಟ್ 2018ರಲ್ಲಿ ಸರ್ಕಾರವು ಮಂಜೂರು ಮಾಡಿದ್ದು ಅವುಗಳನ್ನು ಆಂತರಿಕ ಲೆಕ್ಕಪರಿಶೋಧನಾ ಕಾರ್ಯಗಳಿಗೆ ಉಪಯೋಗಿಸಲು ಪ್ರಸ್ತಾವಿಸಲಾಗಿದೆ.

### *2.15.2 ಬಾಹ್ಯ ಲೆಕ್ಕಪರಿಶೋಧನೆ*

#### 2.15.2.1 ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧನೆ

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದ ಪರಿಚ್ಛೇದ 150 ಹಾಗೂ ಕರ್ನಾಟಕ ಪುರಸಭಾ ಅಧಿನಿಯಮದ ಪರಿಚ್ಛೇದ 290ರ ಪ್ರಕಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು, ನಗರ ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಲೆಕ್ಕಪರಿಶೋಧಕರಾಗಿರುತ್ತಾರೆ. ಅವರ ಕರ್ತವ್ಯವು ಇನ್ನಿತರವುಗಳನ್ನು ಒಳಗೊಂಡಂತೆ ಲೆಕ್ಕಪತ್ರಗಳ ನಿಖರತೆಯನ್ನು ದೃಢೀಕರಿಸುವುದು, ಆಂತರಿಕ ನಿಯಂತ್ರಣಾ ವ್ಯವಸ್ಥೆಯನ್ನು ವಿಮರ್ಶಿಸುವುದು ಮತ್ತು ನಷ್ಟ, ಕಳ್ಳತನ ಹಾಗೂ ವಂಚನೆ ಪ್ರಕರಣಗಳನ್ನು ಲೆಕ್ಕಪರಿಶೋಧಿಸಿದ ಸಂಸ್ಥೆಗಳಿಗೆ ಮತ್ತು ರಾಜ್ಯ ಸರ್ಕಾರಕ್ಕೆ ವರದಿ ಮಾಡುವುದು ಆಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ 2014–15ರಿಂದ 2018–19ರ ಅವಧಿಯ ಲೆಕ್ಕಪರಿಶೋಧನಾ ಸ್ಥಿತಿಯನ್ನು **ಕೋಷ್ಟಕ–2.18ರಲ್ಲಿ** ತೋರಿಸಲಾಗಿದೆ. ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಬಗೆಗಿನ ವರದಿಯೊಂದನ್ನು ತಯಾರಿಸಿ ಸಂಬಂಧಿತ ಪುರಸಭೆ ಹಾಗೂ ಪೌರಾಡಳಿತ ನಿರ್ದೇಶಕರಿಗೆ ಕಳುಹಿಸಬೇಕು. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು, ನಗರಸಭೆ ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಿಗೆ ಸಂಬಂಧಿಸಿದ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯೊಂದನ್ನು ರಾಜ್ಯ ಶಾಸಕಾಂಗದ ಉಭಯ ಸದನಗಳಲ್ಲಿ ಮಂಡಿಸಲು ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕು. ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಚರ್ಚೆಯ ಬಗ್ಗೆ ಅಧಿನಿಯಮ/ನಿಯಮಗಳು ಮೌನವಾಗಿವೆ.

**ಕೊಷ್ಟಕ–2.18: ಕೆಎಸ್‌ಎಎಡಿ ಯಿಂದ ಡಿಸಂಬರ್ 2020ರವರೆಗೆ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುವ ವಿವರಗಳನ್ನು ತೋರಿಸುವ ತ:ಖ್ತೆ**

| ವರ್ಷ | ಮಹಾನಗರ ಪಾಲಿಕೆ | | ನಗರಸಭೆ | | ಪುರಸಭೆ | | ಪಟ್ಟಣ ಪಂಚಾಯತಿ | |
|---|---|---|---|---|---|---|---|---|
| | ಒಟ್ಟು | ಲೆಕ್ಕಪರಿಶೋಧಿತ | ಒಟ್ಟು | ಲೆಕ್ಕಪರಿಶೋಧಿತ | ಒಟ್ಟು | ಲೆಕ್ಕಪರಿಶೋಧಿತ | ಒಟ್ಟು | ಲೆಕ್ಕಪರಿಶೋಧಿತ |
| 2015–16 | 11 | 11 | 59 | 59 | 113 | 113 | 88 | 88 |
| 2016– 17 | 11 | 11 | 59 | 59 | 114 | 114 | 88 | 88 |
| 2017– 18 | 11 | 11 | 59 | 57 | 114 | 112 | 91 | 88 |
| 2018– 19 | 11 | 6 | 59 | 35 | 114 | 77 | 92 | 58 |

ಆಧಾರ: ಕೆಎಸ್‌ಎಎಡಿಯು ಒದಗಿಸಿದ ಮಾಹಿತಿ

2018–19ರ ಸಾಲಿನಲ್ಲಿ ಕೆಎಸ್‌ಎಎಡಿಯು ಲೆಕ್ಕಪರಿಶೋಧನೆ ಕೈಗೊಂಡಿರುವ ಘಟಕಗಳ ಸಂಖ್ಯೆಯು ಹಿಂದಿನ ವರ್ಷಗಳಿಗೆ ಹೋಲಿಸಿದಾಗ ಕಡಿಮೆಯಾಗಿತ್ತು ಎಂಬುದನ್ನು ಮೇಲಿನ ಕೋಷ್ಟಕದಿಂದ ಕಾಣಬಹುದಾಗಿದೆ.

### 2.15.2.2 ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ

ಕರ್ನಾಟಕ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನಾ ಕಾರ್ಯವನ್ನು 2008–09ರಿಂದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು ಮತ್ತು ಸೇವಾ ಷರತ್ತುಗಳ ನಿಯಮ) 1971 (ಡಿಪಿಸಿ)ಅಧಿನಿಯಮದ ಪರಿಚ್ಛೇದ 14(2)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಿತು. ತದನಂತರದಲ್ಲಿ ಕರ್ನಾಟಕ ಪೌರಾಡಳಿತ ಅಧಿನಿಯಮ, 1964ರ ಪರಿಚ್ಛೇದ 290(1)ನ್ನು, ಒಂದು ವರ್ಷದಲ್ಲಿ ಎಲ್ಲಾ ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳು ಪೂರಕ ಲೆಕ್ಕಪರಿಶೋಧನಾ ವಿಧಾನದಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ತಾಂತ್ರಿಕ ಮಾರ್ಗಸೂಚಿ ಮತ್ತು ಮೇಲ್ವಿಚಾರಣೆ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ಒಳಪಡಲಿವೆ ಮತ್ತು ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯನ್ನು ಸಲ್ಲಿಸಲಿದೆ ಎಂಬುದಾಗಿ ತಿದ್ದುಪಡಿ ಮಾಡಲಾಯಿತು. ಅದೇ ರೀತಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976ರ ಪರಿಚ್ಛೇದ 150ನ್ನು ತಿದ್ದುಪಡಿ ಮಾಡಲಾಯಿತು ಮತ್ತು ಅದರ ಅಡಿಯಲ್ಲಿ ಉಪ ಪರಿಚ್ಛೇದ 2–ಎ ಯನ್ನು ಸೇರಿಸಲಾಯಿತು. ಅದರಂತೆ, ಮಹಾನಗರ ಪಾಲಿಕೆಗಳ ಸ್ವೀಕೃತಿ ಹಾಗೂ ವೆಚ್ಚಗಳಿಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ತಾಂತ್ರಿಕ ಮಾರ್ಗಸೂಚಿ ಮತ್ತು ಮೇಲ್ವಿಚಾರಣೆ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ಒಳಪಡಲಿವೆ. ಕರ್ನಾಟಕ ಸರ್ಕಾರವು 1 ಏಪ್ರಿಲ್ 2011ರಿಂದ ಜಾರಿಗೆ ಬರುವಂತೆ ಡಿಪಿಸಿ ಅಧಿನಿಯಮದ ಪರಿಚ್ಛೇದ 20(1)ರ ಅಡಿಯಲ್ಲಿ ತಾಂತ್ರಿಕ ಮಾರ್ಗಸೂಚಿ ಮತ್ತು ಬೆಂಬಲ ಮಾದರಿಯಲ್ಲಿ ವಹಿಸಿತು. 2018–19ನೆಯ ಸಾಲಿನಲ್ಲಿ ಈ ಕಛೇರಿಯು 114 ನಗರ ಸ್ಥಳೀಯ ಸಂಸ್ಥೆಗಳ(ಬಿಬಿಎಮ್‌ಪಿಯ 40 ಘಟಕಗಳನ್ನು ಸೇರಿದಂತೆ) ಲೆಕ್ಕಪರಿಶೋಧನೆಯನ್ನು ನಡೆಸಿತು ಮತ್ತು 2019–20ರಲ್ಲಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧನೆಗೆ ಒಳಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಪೈಕಿ 14 ನಗರ ಸ್ಥಳೀಯ ಸಂಸ್ಥೆಗಳ ಪರೀಕ್ಷಾ ತನಿಖೆ ಕೈಗೊಂಡಿತು. ಅಧ್ಯಾಯ–3ರಲ್ಲಿ ಇದರ ವಿವರಗಳನ್ನು ನೀಡಲಾಗಿದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಅನುಪಾಲನಾ ಲೆಕ್ಕಪರಿಶೋಧನೆಯನ್ನು ಸಹ ಕೈಗೊಳ್ಳುವರು.

***ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ***

ಈ ಕಛೇರಿಯು 2019–20ರಲ್ಲಿ ಸಂವಿಧಾನದ 74ನೇ ತಿದ್ದುಪಡಿ ಅಧಿನಿಯಮದ ಅನುಷ್ಠಾನದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಡಿಪಿಸಿ ಅಧಿನಿಯಮ, 1971ರ ಪರಿಚ್ಛೇದ 13, 14, 15, 16, 17, 19 ಮತ್ತು 20ರಡಿ ಮತ್ತು ಇವುಗಳ ಜೊತೆ ಓದಲಾದ ಪರಿಚ್ಛೇದ23 ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರ ನಿಬಂಧನೆ 2020ರ 45ರಿಂದ 52ರವರೆಗಿನ ನಿಬಂಧನೆಗಳ ಅನುವುಗಳಂತೆ ನಡೆಸಲಾಯಿತು. ವರದಿಯನ್ನು ಸೆಪ್ಟಂಬರ್ 2020ರಲ್ಲಿ ವಿಧಾನಮಂಡಲದಲ್ಲಿ ಮಂಡಿಸಲಾಯಿತು.

***ಅನುಪಾಲನಾ ಲೆಕ್ಕಪರಿಶೋಧನೆ***

ಈ ಕಛೇರಿಯು 2018–19ರಲ್ಲಿ 114 ನಗರ ಸ್ಥಳೀಯ ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಡಿಪಿಸಿ ಅಧಿನಿಯಮ, 1971ರ ಪರಿಚ್ಛೇದ 14(2)ರಡಿಯಲ್ಲಿ ಕೈಗೊಂಡಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಪ್ರಮುಖ ಆಕ್ಷೇಪಣೆಗಳನ್ನು 31 ಮಾರ್ಚ್ 2019ಕ್ಕೆ ಕೊನೆಗೊಂಡ ಸಾಮಾನ್ಯ ಹಾಗೂ ಸಾಮಾಜಿಕ ವಲಯದ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಗಿದೆ.

## 2.16 ಹಣ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವಿಕೆ

ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಕ್ಕೆ ಸಂಬಂಧಿಸಿದಂತೆ 2018-19ರ ಸಾಲಿನಲ್ಲಿ ಸಲ್ಲಿಸಲಾದ ಹಣ ಬಳಕೆ ಪ್ರಮಾಣ ಪತ್ರದ ವಿವರಗಳನ್ನು **ಕೋಷ್ಟಕ-2.19**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.19: 2018-19ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಹದಿನಾಲ್ಕನೇ ಹಣಕಾಸು ಆಯೋಗದ ಅನುಷ್ಠಾನಕ್ಕೆ ಪ್ರತಿಯಾಗಿ ಸಲ್ಲಿಸಲಾದ ಹಣ ಬಳಕೆ ಪ್ರಮಾಣಪತ್ರದ ವಿವರಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | ಬಿಡುಗಡೆ ಮೊತ್ತ | ಹಣ ಬಳಕೆ ಪ್ರಮಾಣಪತ್ರದ ಸಂಖ್ಯೆ ಮತ್ತು ದಿನಾಂಕ | ಹಣಬಳಕೆ ಮೊತ್ತ |
|---|---|---|---|---|
| 1 | ಹದಿನಾಲ್ಕನೇ ಹಣಕಾಸು ಆಯೋಗದ ಮೂಲ ಅನುದಾನ, ಮೊದಲನೇ ಕಂತು | 520.14 | ಎಫ್ ಡಿ/25/ಎಫ್ ಸಿಸಿ/2015 01/01/2019 | 520.14 |
| 2 | ಹದಿನಾಲ್ಕನೇ ಹಣಕಾಸು ಆಯೋಗದ ಮೂಲ ಅನುದಾನ ಎರಡನೇ ಕಂತು | 520.14 | ಎಫ್ ಡಿ/25/ಎಫ್ ಸಿಸಿ /2015 05/03/2019 | 520.14 |

ಆಧಾರ: ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಒದಗಿಸಿದ ಮಾಹಿತಿ

## 2.17 ಲೆಕ್ಕಪರಿಶೋಧನಾ ವರದಿಗಳ ಅವಲೋಕನ

ಎರಡನೇ ಆಡಳಿತ ಸುಧಾರಣಾ ಆಯೋಗವು ಸ್ಥಳೀಯ ಸಂಸ್ಥೆಗಳ ಮೇಲಿನ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಬೇಕು ಮತ್ತು ಈ ವರದಿಗಳನ್ನು ಸಾರ್ವಜನಿಕ ಲೆಕ್ಕಸಮಿತಿಯ ಮಾದರಿಯಲ್ಲಿ ರಾಜ್ಯ ವಿಧಾನಮಂಡಲದ ಪ್ರತ್ಯೇಕ ಸಮಿತಿಯಿಂದ ಚರ್ಚಿಸಬೇಕು ಎಂಬುದಾಗಿ ಶಿಫಾರಸು ಮಾಡಿದೆ (ಅಕ್ಟೋಬರ್ 2007)

ರಾಜ್ಯ ಸರ್ಕಾರವು 12 ಮಾರ್ಚ್ 2010ರಲ್ಲಿ ಸ್ಥಳೀಯ ಸಂಸ್ಥೆಗಳ ಮೇಲಿನ ಲೆಕ್ಕಪರಿಶೋಧನಾ ವರದಿಗಳನ್ನು ಚರ್ಚಿಸಲು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಯನ್ನು ರಚಿಸಿತು.

ಕಳೆದ ನಾಲ್ಕು/ಐದು ವರ್ಷಗಳ ಲೆಕ್ಕಪರಿಶೋಧನಾ ವರದಿಗಳು/ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಗಳಲ್ಲಿ ಪ್ರಕಟವಾಗಿರುವ ಕಂಡಿಕೆಗಳು, ಅವುಗಳ ಹಣದ ಮೌಲ್ಯ ಮತ್ತು ಚರ್ಚೆಗಾಗಿ ಬಾಕಿ ಉಳಿದಿರುವಿಕೆಯ ಸ್ಥಿತಿಗತಿಯ ವಿವರಗಳನ್ನು **ಕೋಷ್ಟಕ-2.20**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.20: ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟವಾಗಿರುವ ಕಂಡಿಕೆಗಳು, ಅವುಗಳ ಹಣದ ಮೌಲ್ಯ ಮತ್ತು ಚರ್ಚೆಗಾಗಿ ಬಾಕಿ ಇರುವ ವಿವರಗಳನ್ನು ತೋರಿಸುವ ತ:ಖ್ತೆ**

(₹ ಕೋಟಿಗಳಲ್ಲಿ)

| ಲೆಕ್ಕಪರಿಶೋಧನಾ ವರದಿ/ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ | ಕಂಡಿಕೆಗಳ ಸಂಖ್ಯೆ | ಹಣದ ಮೌಲ್ಯ | ಚರ್ಚೆಯ ಸ್ಥಿತಿಗತಿ |
|---|---|---|---|
| 2013-14 | 07 | 58.10 | ಚರ್ಚಿಸಲಾಗಿದೆ |
| 2014-15 | 05 | 85.36 | ಚರ್ಚಿಸಲಾಗಿದೆ |
| 2015-16 | 07 | 8.28 | ಚರ್ಚಿಸಿಲ್ಲ |
| 2016-17 | 06 | 109.66 | ಚರ್ಚಿಸಿಲ್ಲ |
| 2017-18 | 06 | 32.39 | ಚರ್ಚಿಸಿಲ್ಲ |
| **ಒಟ್ಟು** | **31** | **293.79** | |

ಆಧಾರ: ಸಿಎಜಿ ರವರ ಲೆಕ್ಕಪರಿಶೋಧನಾ ವರದಿಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಸಮಿತಿಯ ಸಭೆಯ ಕಡತಗಳು

## 2.18 ಲೆಕ್ಕಪರಿಶೋಧನಾ ವರದಿಗಳಿಗೆ ಪ್ರತಿಕ್ರಿಯೆಗಳು

ಪ್ರಧಾನ ಮಹಾಲೇಖಾಪಾಲರು, ಕರ್ನಾಟಕ ಇವರು ಲೆಕ್ಕಪರಿಶೋಧನೆಯನ್ನು ಕೈಗೊಂಡ ನಗರ ಸ್ಥಳೀಯ ಸಂಸ್ಥೆಗಳಿಗೆ ತಪಾಸಣಾ ವರದಿಗಳನ್ನು ನೀಡುತ್ತಾರೆ. ಅಧಿಕಾರಿಗಳು ತಪಾಸಣಾ ವರದಿಯಲ್ಲಿರುವ ಆಕ್ಷೇಪಣೆಗಳಿಗೆ ಸೂಕ್ತ ಉತ್ತರವನ್ನು ನೀಡುವ ಅವಶ್ಯಕತೆಯಿರುತ್ತದೆ ಮತ್ತು ಅವರ ಅನುಸರಣಾ ವಿವರವನ್ನು ತಪಾಸಣಾ ವರದಿಯನ್ನು ನೀಡಿದ ಒಂದು ತಿಂಗಳೊಳಗೆ ವರದಿ ಮಾಡಬೇಕು. ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾರ್ಚ್ 2019ರ ಅಂತ್ಯಕ್ಕೆ ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು **ಕೋಷ್ಟಕ–2.21**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.21: ಬಾಕಿಯಿರುವ ತಪಾಸಣಾ ವರದಿಗಳು ಮತ್ತು ಕಂಡಿಕೆಗಳ ವಿವರಗಳನ್ನು ತೋರಿಸುವ ತ:ಖ್ತೆ**

| ವರ್ಷ | ತಪಾಸಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
|---|---|---|
| 2014–15ರವರೆಗೆ | 192 | 2,485 |
| 2015–16 | 120 | 2,195 |
| 2016–17 | 131 | 3,126 |
| 2017–18 | 98 | 1,801 |
| 2018–19 | 67 | 1,144 |
| **ಒಟ್ಟು** | **608** | **10,751** |

ಆಧಾರ:ಮಾಸಿಕ ಪ್ರಗತಿ ವರದಿಗಳು

ಬಾಕಿ ಉಳಿದಿರುವ 608 ತಪಾಸಣಾ ವರದಿಗಳಲ್ಲಿ 4,680 ಕಂಡಿಕೆಗಳನ್ನು ಒಳಗೊಂಡಿರುವ (ಶೇಕಡಾ 44) 312 ತಪಾಸಣಾ ವರದಿಗಳು (ಶೇಕಡಾ 52) ನಾಲ್ಕು ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿದ್ದವು. ಇದು ನಗರ ಸ್ಥಳೀಯ ಸಂಸ್ಥೆಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತಿದ್ದವು.

# ಅಧ್ಯಾಯ - III

# ತಾಂತ್ರಿಕ ಮಾರ್ಗದರ್ಶನ ಮತ್ತು ಬೆಂಬಲ ಕಾರ್ಯಾಚರಣೆಗಳ ಅವಲೋಕನ

# ಅಧ್ಯಾಯ–III

## 3. ತಾಂತ್ರಿಕ ಮಾರ್ಗದರ್ಶನ ಮತ್ತು ಬೆಂಬಲದ ಕಾರ್ಯಾಚರಣೆಯ ಅವಲೋಕನ

### 3.1 ಪೀಠಿಕೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಹಾಗು ಸೇವಾ ಷರತ್ತುಗಳ ಅಧಿನಿಯಮ (1971) (ಡಿಪಿಸಿ ಅಧಿನಿಯಮ 1971), ಪರಿಚ್ಛೇದ 20(1)ರ ಅನ್ವಯ, ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ, ತಾಂತ್ರಿಕ ಮಾರ್ಗಸೂಚಿ ಹಾಗು ನೆರವು(ಟಿಜಿಎಸ್) ನೀಡುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರವು ಅಧಿಕೃತವಾಗಿ ಸಿಎಜಿಗೆ ವಹಿಸಿತು(ಮೇ 2011). ಪ್ರಾರಂಭದಲ್ಲಿ ಈ ಅಧ್ಯಾದೇಶವನ್ನು ಐದು ವರ್ಷಗಳ ಕಾಲ, ಅಂದರೆ 2010–11 ರಿಂದ 2014–15 ರವರೆಗೆ ನೀಡಲಾಗಿದ್ದು, ಪ್ರತಿ ಐದು ವರ್ಷಗಳಿಗೆ ಇದರ ಮಾನ್ಯತೆಯನ್ನು ವಿಸ್ತರಿಸಲಾಯಿತು ಹಾಗೂ ಪ್ರಸ್ತುತ ಹಣಕಾಸು ವರ್ಷ 2020–21 ರಿಂದ 2024–25 ರವರೆಗೆ ಮುಂದುವರೆಸಲಾಗಿದೆ. 2011–12 ರಿಂದ ನಗರ ಸ್ಥಳೀಯ ಸಂಸ್ಥೆಗಳಿಗೂ ಸಹ ಟಿಜಿಎಸ್ ನೀಡುವ ಅಧ್ಯಾದೇಶವನ್ನು ವಿಸ್ತರಿಸಲಾಯಿತು.

ಪ್ರಾಮಾಣಿತ ಷರತ್ತುಗಳ ಪ್ರಕಾರ ಗ್ರಾಮ ಪಂಚಾಯತಿ/ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಆರ್ಥಿಕ ನಿರ್ವಹಣೆ ಹಾಗೂ ಹೊಣೆಗಾರಿಕೆಯನ್ನು ಬಲಪಡಿಸಲು, ಸಿಎಜಿಯು, ಗ್ರಾಮ ಪಂಚಾಯತಿ/ನಗರ ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಅಂದರೆ ನಿಯಂತ್ರಕರು, ರಾಜ್ಯ ಲೆಕ್ಕಗಳ ಇಲಾಖೆಗೆ(ಪ್ರಸ್ತುತ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ(ಕೆಎಸ್ಎಎಡಿ) ಎಂದು ಮರುನಾಮಕರಣಗೊಂಡಿದೆ) ಸೂಕ್ತ ಟಿಜಿಎಸ್ ನೀಡಬೇಕು. ಸಿಎಜಿಯ ಡಿಪಿಸಿ ಅಧಿನಿಯಮ 1971ರ ಪರಿಚ್ಛೇದ 23ರಡಿಯಲ್ಲಿ ಜಾರಿಯಾಗಿರುವ ಲೆಕ್ಕಪರಿಶೋಧನಾ ನಿಬಂಧನೆಗಳು 2020ರ ಪರಿಚ್ಛೇದ 120 ರಿಂದ 122 ರಲ್ಲಿ ಟಿಜಿಎಸ್ ಯಾವ ಕ್ಷೇತ್ರಗಳಿಗೆ ವಿಸ್ತರಿಸಬೇಕೆಂಬುದನ್ನು ವಿವರಿಸಲಾಗಿದೆ. ಅಂದರೆ ಇದರಲ್ಲಿ ಯೋಜನೆ, ವಿಧಾನ/ಕಾರ್ಯವಿಧಿ, ಪ್ರಾಥಮಿಕ ಶಾಸನಬದ್ಧ ಲೆಕ್ಕಪರಿಶೋಧಕರು ಅನುಸರಿಸುತ್ತಿರುವ ಅಸ್ತಿತ್ವದಲ್ಲಿರುವ ಪದ್ಧತಿಯನ್ನು ಸುಧಾರಿಸಲು ಸಲಹೆ, ಆಂತರಿಕ ನಿಯಂತ್ರಣದ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲು ಸಲಹೆ ಹಾಗೂ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಪಡಿಸುವಿಕೆ ಇವುಗಳನ್ನು ಒಳಗೊಂಡಿದೆ. ಈ ಪರಿಮಿತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ಕೆಳಗೆ ಚರ್ಚಿಸಿದಂತೆ, ಪ್ರಾಥಮಿಕ ಲೆಕ್ಕಪರಿಶೋಧಕರು ಸಲ್ಲಿಸಬೇಕಾಗಿರುವ ನಿರ್ದಿಷ್ಟ ನಿಯತಕಾಲಿಕ ವಿವರ ಪತ್ರಗಳಿಂದ/ವರದಿಗಳಿಂದ ಪಡೆಯಲಾಗಿದೆ.

### 3.2 ಲೆಕ್ಕಪರಿಶೋಧನೆಯ ಯೋಜನೆ

ಪ್ರಮುಖ ಅಂಶಗಳ ಮೇಲೆ ಗಮನ ಕೇಂದ್ರೀಕರಿಸುವ, ಹಾಗೂ ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಆದ್ಯತೀಕರಿಸುವ ಅಗತ್ಯತೆಯ ದೃಷ್ಟಿಯಿಂದ ಲೆಕ್ಕಪರಿಶೋಧನೆಯ ಯೋಜನೆ ಮಾಡುವುದು ಅತ್ಯಗತ್ಯ. ಈ ಯೋಜನೆಯು, ಪೂರ್ವನಿಗದಿತ ಮಾನದಂಡಗಳ ಆಧಾರದ ಮೇಲೆ, ಲೆಕ್ಕಪರಿಶೋಧನಾ ಘಟಕಗಳ ಹಾನಿಸಂಭವನೀಯ ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ. ಗ್ರಾಮ ಪಂಚಾಯತಿ/ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಮುಂಬರುವ ಆರ್ಥಿಕ ವರ್ಷದಲ್ಲಿ ಕೈಗೊಳ್ಳಲು, ಕೆಎಸ್ಎಎಡಿಯು ಪ್ರತಿವರ್ಷ ಮಾರ್ಚಿನ ಅಂತ್ಯದೊಳಗೆ ಲೆಕ್ಕಪರಿಶೋಧನೆಯ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯದ ಮಹಾಲೇಖಾಪಾಲರ ಕಛೇರಿಗೆ (ಇನ್ನು ಮುಂದೆ ಎಜಿ(ಆಡಿಟ್) ಎಂದು ಉಲ್ಲೇಖಿಸಲಾಗಿದೆ) ಕಳುಹಿಸಬೇಕು.

ಕೆಎಸ್‌ಎಎಡಿಯ ಕೈಪಿಡಿಯ ಅಧ್ಯಾಯ 4ರಲ್ಲಿ ಲೆಕ್ಕಪರಿಶೋಧನೆಯಲ್ಲಿ ಹಾನಿಸಂಭವನೀಯ ವಿಶ್ಲೇಷಣೆ ಮತ್ತು ಮಾದರಿಗಳ ಬಳಕೆಯ ಪ್ರಾಮುಖ್ಯತೆಯನ್ನು ಎತ್ತಿತೋರಿಸುತ್ತದೆ:

- ಶೇಕಡ ನೂರರ ಲೆಕ್ಕ ತಪಾಸಣೆಯು ಅನಗತ್ಯವಾದುದಲ್ಲದೆ ದುಬಾರಿಯೂ ಕೂಡ, ಏಕೆಂದರೆ ಲೆಕ್ಕಪರಿಶೋಧನೆಯ ಉದ್ದೇಶವನ್ನು ಪರೀಕ್ಷಾ-ತನಿಖೆಯಿಂದಲೇ ಸಾಧಿಸಬಹುದು(ಪ್ಯಾರಾ 68)
- ಎಲ್ಲಾ ವ್ಯವಹಾರಗಳನ್ನು, ಘಟನೆಗಳನ್ನು, ದಾಖಲೆಗಳನ್ನು ಪರೀಕ್ಷಿಸಲು ಸಾಧ್ಯವಾಗದ ಕಾರಣ, ಲೆಕ್ಕತಪಾಸಣೆಗಾಗಿ, ಲೆಕ್ಕಪರಿಶೋಧಕರು ಹಾನಿಸಂಭವನೀಯ ವಿಶ್ಲೇಷಣೆಯನ್ನು ಬಳಸಿ ವಹಿವಾಟುಗಳನ್ನು ಕ್ಷೇತ್ರಗಳಾಗಿ ಅಥವಾ ಗುಂಪುಗಳಾಗಿ ವಿಂಗಡಿಸಿ ಸೀಮಿತಗೊಳಿಸುತ್ತಾರೆ. (ಪ್ಯಾರಾ 69)

ಕೈಪಿಡಿಯ ಅಧ್ಯಾಯ ಆರರಲ್ಲಿ, ವಿವಿಧ ರೀತಿಯ ಲೆಕ್ಕಪರಿಶೋಧನೆಯ ಘಟಕಗಳಿಗೆ ಮಾನವ ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ವಿವಿಧ ಸಂಸ್ಥೆಗಳಿಗೆ ನಿಗದಿಪಡಿಸಲಾದ ಮಾನವ ದಿನಗಳ ವಿವರವನ್ನು **ಕೋಷ್ಟಕ 3.1** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 3.1 : ಲೆಕ್ಕಪರಿಶೋಧನೆಗೆ ನಿಗದಿಪಡಿಸಿದ ಮಾನವ ದಿನಗಳು**

| ಕ್ರ ಸ | ಸಂಸ್ಥೆ | ಮಾನವ ದಿನಗಳು |
|---|---|---|
| 1 | ಗ್ರಾಮ ಪಂಚಾಯತಿ | ಗರಿಷ್ಠ ಆರು |
| 2 | ಪಟ್ಟಣ ಪಂಚಾಯತಿ | 25-40 |
| 3 | ಪಟ್ಟಣ ಪುರಸಭೆ | 40-50 |
| 4 | ನಗರ ಪುರಸಭೆ | 150-200 |
| 5 | ಮಹಾನಗರ ಪಾಲಿಕೆ | ಸ್ಥಳೀಯ ಲೆಕ್ಕಪರಿಶೋಧನೆ ವೃತ್ತದ ಜಂಟಿ ನಿರ್ದೇಶಕರು, ಕ್ಷೇತ್ರೀಯ ಕಛೇರಿಯ ಜೊತೆ ಸಮಾಲೋಚಿಸಿ ನಿರ್ಧರಿಸಿದಂತೆ. |

ಆಧಾರ: ಕೆಎಸ್‌ಎಎಡಿ ಕೈಪಿಡಿ

ಕೆಎಸ್‌ಎಎಡಿಯು ಸಿದ್ಧಪಡಿಸಿದ 2017-18 ಮತ್ತು 2018-19ನೆಯ ಸಾಲಿನ ಲೆಕ್ಕಪರಿಶೋಧನೆಯ ಯೋಜನೆಯು, ಯೋಜನೆಯ ತಯಾರಿಕೆಯ ಮುನ್ನ ಹಾನಿಸಂಭವನೀಯ ವಿಶ್ಲೇಷಣೆ ಮಾಡದಿರುವುದನ್ನು ಸೂಚಿಸಿತು. 2017-18 ರಲ್ಲಿ ಕೆಎಸ್‌ಎಎಡಿಯು 31 ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ ಶೇಕಡ 100 ರಷ್ಟು ಗ್ರಾಮ ಪಂಚಾಯತಿಗಳು (6,024 ರಲ್ಲಿ 6,024) ಹಾಗೂ ಶೇಕಡ 100 ರಷ್ಟು ನಗರ ಸ್ಥಳೀಯ ಸಂಸ್ಥೆಗಳನ್ನು (275 ರಲ್ಲಿ 275) ಲೆಕ್ಕಪರಿಶೋಧನೆಗೆ ಒಳಪಡಿಸಲು ಯೋಜಿಸಿತ್ತು. ವಾಸ್ತವವಾಗಿ ಜುಲೈ 2019 ರಲ್ಲಿದ್ದಂತೆ, 5,091 ಗ್ರಾಮ ಪಂಚಾಯತಿಗಳು ಮತ್ತು 201 ನಗರ ಸ್ಥಳೀಯ ಸಂಸ್ಥೆಗಳು ಲೆಕ್ಕಪರಿಶೋಧನೆಗೆ ಒಳಪಟ್ಟವು. ಅದರಂತೆ, ಕೆಎಸ್‌ಎಎಡಿಯು 31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ ಶೇಕಡ 92 ರಷ್ಟು ಗ್ರಾಮ ಪಂಚಾಯತಿಗಳನ್ನು (6,022 ರಲ್ಲಿ 5,881) ಹಾಗೂ ಶೇಕಡಾ 98.6 ರಷ್ಟು ನಗರ ಸ್ಥಳೀಯ ಸಂಸ್ಥೆಗಳನ್ನು (277 ರಲ್ಲಿ 273) ಲೆಕ್ಕಪರಿಶೋಧನೆಗೆ ಒಳಪಡಿಸಲು ಯೋಜಿಸಿತ್ತು. ಆದರೆ ವಾಸ್ತವವಾಗಿ ಜುಲೈ 2019ರ ಕೊನೆಗೆ ಲೆಕ್ಕಪರಿಶೋಧನೆ ನಡೆಸಿದ ಘಟಕಗಳು 5,297 ಗ್ರಾಮ ಪಂಚಾಯತಿಗಳು ಹಾಗು 169 ನಗರ ಸ್ಥಳೀಯ ಸಂಸ್ಥೆಗಳಾಗಿದ್ದವು. ಹೆಚ್ಚಿನ ಸಂಖ್ಯೆಯಲ್ಲಿ ಘಟಕಗಳ ಲೆಕ್ಕಪರಿಶೋಧನೆ ಮಾಡುವ ಯತ್ನದಲ್ಲಿ, ಪ್ರತಿಯೊಂದು ಘಟಕಕ್ಕೆ ನಿಗದಿಪಡಿಸಲಾಗುವ ಸಮಯದಲ್ಲಿ ಕಡಿತ ಉಂಟಾಗುತ್ತದೆ. ಉದಾಹರಣೆಗೆ, ಪ್ರತಿಯೊಂದು ಗ್ರಾಮ ಪಂಚಾಯತಿಯ ಲೆಕ್ಕಪರಿಶೋಧನೆಯನ್ನು ಎರಡರಿಂದ ಮೂರು ದಿನಗಳಲ್ಲಿ ಮಾಡಲಾಗುವುದು. ಆದರೆ ತನಿಖೆ ಮಾಡಬೇಕಾಗಿರುವ ವಹಿವಾಟುಗಳು ಹಾಗೂ ದಾಖಲೆಗಳ ಪರಿಮಾಣವನ್ನು ಗಮನಿಸಿದರೆ, ನಿಗದಿತ ಸಮಯವು ಬಹಳ ಕಡಿಮೆಯಾಗುವುದು.

ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ಮಿತಿಯು ಸಾಮಾನ್ಯವಾಗಿ ಲೆಕ್ಕಪರಿಶೋಧನೆಗೆ ಒಳಪಡುವ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ಕೆಎಸ್‌ಎಎಡಿಯು ಉತ್ತರಿಸಿತು(ಫೆಬ್ರವರಿ 2021). ಮುಂದುವರೆದು, ಗ್ರಾಮ ಪಂಚಾಯತಿಗಳಲ್ಲಿ/ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆಯು ಇಲ್ಲವೆಂದೂ ಮತ್ತು ಬಹುಪಾಲು ಹಣಕಾಸಿನ ವ್ಯವಹಾರಗಳು ಖಜಾನೆಯ ಹೊರಗೆ ನಡೆಯುತ್ತದೆಯೆಂದೂ ಹೇಳಿತು. ಗ್ರಾಮ ಪಂಚಾಯತಿಗಳು ರಾಜಸ್ವ ಸ್ವೀಕೃತಿಗಳನ್ನು ನಗದು ರೂಪದಲ್ಲಿ ಸಂಗ್ರಹಿಸಿ ನಿಯತಕಾಲಿಕವಾಗಿ ಅವುಗಳನ್ನು ಬ್ಯಾಂಕಿಗೆ ಜಮೆ ಮಾಡುವುದರಿಂದ ವಿಶ್ವಸನೀಯತೆಯನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಾ ತನಿಖೆಯ ಬದಲು ಸಮಸ್ತ ವ್ಯವಹಾರಗಳ ಲೆಕ್ಕಪರಿಶೋಧನೆಯ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. 2021–22ರ ಲೆಕ್ಕಪರಿಶೋಧನೆಯ ಸಾಲಿನಿಂದ ಕೆಎಸ್‌ಎಎಡಿಯು ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಗೆ ಮಾನವದಿನಗಳನ್ನು ಆರು ದಿನಗಳಿಂದ ಎಂಟು ದಿನಗಳಿಗೆ ಹೆಚ್ಚಿಸಲಿದೆ.

ಸವಿಸ್ತಾರವಾದ ಹಾನಿಸಂಭವನೀಯ ವಿಶ್ಲೇಷಣೆಯ, ಅಂದರೆ ಜಮೆ ಮತ್ತು ಖರ್ಚುಗಳ ಪ್ರವೃತ್ತಿ, ಹಿಂದಿನ ಲೆಕ್ಕಪರಿಶೋಧನೆಗಳಲ್ಲಿ ಕಂಡುಬಂದ ಅಂಶಗಳು ಅಥವಾ ತನಿಖಾ ವರದಿಗಳು, ಪಂಚ ವಾರ್ಷಿಕ ಯೋಜನೆಗಳು ಮತ್ತು ಕಾರ್ಯ ನಿರ್ವಹಿಸುವ ಗುಂಪುಗಳ ವರದಿ /ವಾರ್ಷಿಕ ಯೋಜನೆಗಳು ಹಾಗೂ ಇತರ ಆಧಾರದ ಮೇಲೆ ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯು(ಐಎ ಮತ್ತು ಎಡಿ) ಎಲ್ಲಾ ಲೆಕ್ಕಪರಿಶೋಧನೆ ಮಾಡುವಂತಹ ಘಟಕಗಳನ್ನು ಅಧಿಕ, ಮಧ್ಯಮ ಹಾಗೂ ಅಲ್ಪ ಹಾನಿಸಂಭವನೀಯ ಘಟಕಗಳೆಂದು ವರ್ಗೀಕರಿಸುತ್ತದೆ. ಅಧಿಕ ಹಾನಿಸಂಭವನೀಯ ಘಟಕಗಳ ಲೆಕ್ಕಪರಿಶೋಧನೆಯನ್ನು ವಾರ್ಷಿಕವಾಗಿ ಮಾಡಲಾಗುವುದು ಹಾಗೂ ಉಳಿದ ಘಟಕಗಳ ಲೆಕ್ಕಪರಿಶೋಧನೆಯನ್ನು ಎರಡರಿಂದ ಐದು ವರ್ಷಗಳ ಅವಧಿಯಲ್ಲಿ ನಡೆಸಲಾಗುವುದು. ಐಎ ಮತ್ತು ಎಡಿಯು ಅನುಸರಿಸುತ್ತಿರುವ ಹಾನಿಸಂಭವನೀಯ ವಿಶ್ಲೇಷಣೆಯ ವಿಧಾನವನ್ನು, ಉಲ್ಲೇಖಿಸಿದಂತೆ ಅಥವಾ ಅಗತ್ಯವಿದ್ದರೆ ಅವಶ್ಯಕ ಮಾರ್ಪಾಡುಗಳೊಂದಿಗೆ ಅಳವಡಿಸಿಕೊಳ್ಳಲು, ರಾಜ್ಯ ಹಣಕಾಸು ಇಲಾಖೆಯ ಮೂಲಕ ಗ್ರಾಮ ಪಂಚಾಯತಿಗಳ/ನಗರ ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಲೆಕ್ಕಪರಿಶೋಧಕರೊಂದಿಗೆ ಹಂಚಿಕೊಳ್ಳಲಾಗಿದೆ(ಜುಲೈ 2020). ಭಾರತದ ಸಿಎಜಿರವರ ಅಧಿಕೃತ ಜಾಲತಾಣದಲ್ಲಿ[12] ವಿಸ್ತಾರವಾದ ಮಾರ್ಗಸೂಚಿಗಳು ಲಭ್ಯವಿದೆ. ಕೆಎಸ್‌ಎಎಡಿಯು ಈ ಪದ್ಧತಿಯನ್ನು ಅನುಸರಿಸುವ ಬಗ್ಗೆ ಪರಿಗಣಿಸಬಹುದು.

2021–22ರ ಲೆಕ್ಕಪರಿಶೋಧನೆಯ ಸಾಲಿನಿಂದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವಲ್ಲಿನ ಆದ್ಯತೆಯನ್ನು ನಿರ್ಧರಿಸಲು ವಿಶ್ವವಿದ್ಯಾಲಯ ಮತ್ತಿತರ ಸಂಸ್ಥೆಗಳ ವರ್ಗೀಕರಣವನ್ನು ಹಾನಿಸಂಭವನೀಯ ವಿಶ್ಲೇಷಣೆಯ ಆಧಾರದ ಮೇಲೆ ಮಾಡಲು ಪರಿಶೀಲಿಸಲಾಗುವುದೆಂದು ಕೆಎಸ್‌ಎಎಡಿಯು ಉತ್ತರಿಸಿತು. ಆದರೆ ಹಾನಿಸಂಭವನೀಯ ವಿಶ್ಲೇಷಣೆಯ ಆಧಾರದ ಮೇಲೆ ಗ್ರಾಮ ಪಂಚಾಯತಿಗಳ / ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವ ಬಗ್ಗೆ ಉತ್ತರವು ಮೌನವಾಗಿತ್ತು.

## 3.3 ಲೆಕ್ಕಪರಿಶೋಧನೆಯ ವಿಧಾನ ಮತ್ತು ಪ್ರಕ್ರಿಯೆ

ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ, ಭಾರತದ ಸಿಎಜಿಯು ನಿಗದಿಪಡಿಸಿದ ಮಾರ್ಗಸೂಚಿಗಳು ಹಾಗೂ ರಾಜ್ಯ ಸರ್ಕಾರ ಜಾರಿಗೊಳಿಸಿದ ವಿವಿಧ ಅಧಿನಿಯಮಗಳು ಮತ್ತು ಶಾಸನಗಳ ಅನುಪಾಲನೆಯನ್ನು ಪರೀಕ್ಷಿಸುವಂತೆ, ಲೆಕ್ಕಪರಿಶೋಧನೆಯ ವಿಧಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ರಚಿಸಲಾಗಿದೆ.

[12] https://cag.gov.in/uploads/guidelines/Compliance-Guidelines-approved-final-preface-05de4efef9159d0-85033036.pdf and https://cag.gov.in/uploads/guidelines PA Guidelines2014-05de4f757ca0964-06548165.pdf

ಕೆಎಸ್‌ಎಎಡಿಯು ಶೇಕಡಾ 100 ರಷ್ಟು ಪಾವತಿಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸುವ ವ್ಯವಸ್ಥೆಯನ್ನು ಅನುಸರಿಸುತ್ತಿದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮ ಪಂಚಾಯತಿ ಹಾಗು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕ ಪರಿಶೋಧನೆಯನ್ನು ಒಂದೇ ವರ್ಷದಲ್ಲಿ ಮಾಡುವುದು ಮತ್ತು ಪ್ರತಿಯೊಂದು ಗ್ರಾಮ ಪಂಚಾಯತಿ/ ನಗರ ಸ್ಥಳೀಯ ಸಂಸ್ಥೆಗಳ ವಹಿವಾಟುಗಳನ್ನು ಶೇಕಡಾ 100 ರಷ್ಟು ಪರೀಕ್ಷಿಸುವುದು ಸಮಯ/ಮಾನವಸಂಪನ್ಮೂಲಗಳ ಕೊರತೆಯಿಂದ ಅಸಂಭವನೀಯ. ಐಎ ಮತ್ತು ಎಡಿ ಯಲ್ಲಿ, ಸಾಧಾರಣವಾಗಿ ವ್ಯವಹಾರಗಳ ಪ್ರಾಮುಖ್ಯತೆ ಹಾಗು ಪ್ರಮಾಣದ ಆಧಾರದ ಮೇಲೆ ಎರಡು ತಿಂಗಳುಗಳನ್ನು ಆಯ್ಕೆ ಮಾಡಿ, ಆ ಅವಧಿಯಲ್ಲಿ ನಡೆದಿರುವ ಎಲ್ಲಾ ವಹಿವಾಟುಗಳನ್ನು ವಿವರವಾಗಿ ಪರೀಕ್ಷಿಸಲಾಗುವುದು. ಆಯ್ಕೆಯಾದ ತಿಂಗಳುಗಳಲ್ಲಿ ಏನಾದರೂ ವ್ಯತ್ಯಾಸಗಳು ಕಂಡುಬಂದಲ್ಲಿ, ವಹಿವಾಟುಗಳ ಪರೀಕ್ಷೆಯನ್ನು ಇತರೆ ತಿಂಗಳುಗಳಿಗೂ ವಿಸ್ತರಿಸಲಾಗುವುದು. ಕೆಎಸ್‌ಎಎಡಿಯು ಈ ಪದ್ಧತಿಯನ್ನು ಅನುಸರಿಸಲು ಪರಿಗಣಿಸಬಹುದು.

ಹಿಂದಿನ ಕಂಡಿಕೆಗಳ ಉತ್ತರದಲ್ಲಿ ನೀಡಲಾಗಿರುವ ಕಾರಣಗಳಿಂದ ಕೆಎಸ್‌ಎಎಡಿಯು ಪ್ರತಿ ಗ್ರಾಮ ಪಂಚಾಯತಿ/ ನಗರ ಸ್ಥಳೀಯ ಸಂಸ್ಥೆಗಳ ವ್ಯವಹಾರಗಳ ಶೇಕಡ 100ರಷ್ಟು ಪರಿಶೀಲನೆಯನ್ನು ಮುಂದುವರೆಸಬೇಕಾಗುತ್ತದೆ ಎಂದು ಇಲಾಖೆಯು ಹೇಳಿತು.

## 3.4 ನಿಯತಕಾಲಿಕ ಸಲ್ಲಿಕೆಗಳು

ಪ್ರಾಥಮಿಕ ಲೆಕ್ಕಪರಿಶೋಧಕರ ಮೌಲ್ಯಮಾಪನವನ್ನು, ಸಿಎಜಿಯು ಸೂಚಿಸಿದ ಅನುಬಂಧ 'ಎ' ರಿಂದ 'ಹೆಚ್' ರಲ್ಲಿ ಮಾಡುವ ಸಲ್ಲಿಕೆಗಳ ಪರಿಶೀಲನೆ, ಸ್ಥಳೀಯ ಲೆಕ್ಕ ಪರಿಶೋಧನೆಯ ವರದಿಗಳು ಹಾಗು ಟಿಜಿಎಸ್ ಮಾಡ್ಯೂಲಿನ ಅಡಿಯಲ್ಲಿ ಆಯ್ಕೆಯಾದ ಗ್ರಾಮ ಪಂಚಾಯತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಮಾಡಲಾಗುವುದು. 2017–18 ಮತ್ತು 2018–19ರ ವರ್ಷಗಳಿಗೆ ಸಂಬಂಧಿಸಿದಂತೆ, ಪ್ರಾಥಮಿಕ ಲೆಕ್ಕಪರಿಶೋಧಕರು ಎಜಿ(ಆಡಿಟ್)ಗೆ ಸಲ್ಲಿಸಿರುವ ಸಲ್ಲಿಕೆಗಳ ವಿವರಗಳನ್ನು ಕೋಷ್ಟಕ 3.2 ರಲ್ಲಿ ನೀಡಲಾಗಿದೆ.

**ಕೋಷ್ಟಕ 3.2 ಪ್ರಾಥಮಿಕ ಲೆಕ್ಕಪರಿಶೋಧಕರು ಎಜಿ(ಆಡಿಟ್)ಗೆ ನೀಡಿರುವ ಸಲ್ಲಿಕೆಗಳು**

| ಸಲ್ಲಿಕೆಯ ಹೆಸರು | | ಕಾಲಾವಧಿ | 2017–18 | | 2018–19 | |
|---|---|---|---|---|---|---|
| | | | ಸಲ್ಲಿಕೆಗೆ ನಿಗದಿಯಾದ ದಿನಾಂಕ | ವಾಸ್ತವವಾಗಿ ಸಲ್ಲಿಸಿದ ದಿನಾಂಕ | ಸಲ್ಲಿಕೆಗೆ ನಿಗದಿಯಾದ ದಿನಾಂಕ | ವಾಸ್ತವವಾಗಿ ಸಲ್ಲಿಸಿದ ದಿನಾಂಕ |
| **ಅನುಬಂಧ 'ಎ'** | ವಾರ್ಷಿಕ ಲೆಕ್ಕಪರಿಶೋಧನೆಯ ಯೋಜನೆ | ವಾರ್ಷಿಕ | ಮಾರ್ಚ್ 2017 | 16-07-2018 | ಮಾರ್ಚ್ 2018 | 16-01-2020 |
| **ಅನುಬಂಧ 'ಬಿ'** | ಲೆಕ್ಕಪರಿಶೋಧನೆಯ ಯೋಜನೆಯ ಅನುಷ್ಠಾನ | ವಾರ್ಷಿಕ | 15-04-2018 | 16-07-2018 | 15-04-2019 | 16-01-2020 |
| **ಅನುಬಂಧ 'ಸಿ'** | ಗಂಭೀರ ಅಕ್ರಮಗಳು | ತ್ರೈಮಾಸಿಕ | 15-07-2017<br>15-10-2017<br>15-01-2018<br>15-04-2018 | 16-07-2018 | 15-07-2018<br>15-10-2018<br>15-01-2019<br>15-04-2019 | 16-01-2020 |
| **ಅನುಬಂಧ 'ಡಿ'** | ತರಬೇತಿ ಕಾರ್ಯಕ್ರಮಗಳು | ಅರ್ಧ ವಾರ್ಷಿಕ | 15th ಏಪ್ರಿಲ್<br>15th ಅಕ್ಟೋಬರ್ | 16-07-2018 | ಆಗಸ್ಟ್-2018<br>ಫೆಬ್ರವರಿ-2019 | 16-01-2020 |
| **ಅನುಬಂಧ 'ಇ'** | ತನಿಖಾ ವರದಿಗಳ ಪ್ರಗತಿ ಪತ್ರ ಮತ್ತು ಕೆಎಸ್‌ಎಎಡಿಯ ಕಂಡಿಕೆಗಳು | ವಾರ್ಷಿಕ | 15-4-2018 | 16-07-2018 | 15-4-2019 | 16-01-2020 |
| **ಅನುಬಂಧ 'ಎಫ್'** | ತನಿಖಾ ವರದಿಗಳ ಪ್ರಗತಿ ಪತ್ರ ಮತ್ತು ಎಜಿಯಿಂದ ಕೆಎಸ್‌ಎಎಡಿಗೆ ಕಳುಹಿಸಿದ, ಪರೀಕ್ಷಾ-ತನಿಖೆ ಮಾಡಿದ, ಘಟಕಗಳ ಕಂಡಿಕೆಗಳು | ವಾರ್ಷಿಕ | 15-4-2018 | 16-07-2018 | 15-4-2019 | 16-01-2020 |
| **ಅನುಬಂಧ 'ಜಿ'** | ಕ್ರೋಢೀಕರಿಸಿದ ಕಾರ್ಯನಿರ್ವಹಣಾ ವರದಿ | ಅರ್ಧ ವಾರ್ಷಿಕ | 15-10-17<br>15-04-18 | 16-07-2018 | 15-10-2018<br>15-04-2019 | 16-01-20 |
| **ಅನುಬಂಧ 'ಹೆಚ್'** | ಲೆಕ್ಕಪತ್ರಗಳ ಪ್ರಮಾಣೀ ಕರಣದ ಸ್ಥಿತಿಗತಿ | ವಾರ್ಷಿಕ | 15-04-18 | ಸಲ್ಲಿಸಿಲ್ಲ | 15-04-2019 | 16-01-20 |

2021–22 ನೆಯ ಸಾಲಿನಿಂದ ಸಲ್ಲಿಕೆಗಳನ್ನು ವೇಳಾಪಟ್ಟಿಯಂತೆ ಸಲ್ಲಿಸಲಾಗುವುದು ಎಂದು ಇಲಾಖೆಯು ಉತ್ತರಿಸಿತು.

## 3.5 ತನಿಖಾ ವರದಿಯ ಪ್ರತಿಗಳು

ವ್ಯವಸ್ಥೆಯನ್ನು ಉತ್ತಮಗೊಳಿಸುವ ಬಗ್ಗೆ ಸಲಹೆಯನ್ನು ಪಡೆಯಲು, ಪ್ರಾಥಮಿಕ ಲೆಕ್ಕಪರಿಶೋಧಕರು, ಆಯ್ಕೆಯಾದ ಸ್ಥಳೀಯ ಸಂಸ್ಥೆಗಳ ತನಿಖಾ ವರದಿಯ ಪ್ರತಿಗಳನ್ನು ಎಜಿ(ಆಡಿಟ್)ಗೆ ಕಳುಹಿಸಬೇಕು ಹಾಗೂ ಎಜಿ(ಆಡಿಟ್) ಪ್ರತಿಗಳ ಪುನರಾವಲೋಕನ ಮಾಡಿ, ಕೆಎಸ್ಎಎಡಿಯು ಹಾಲಿ ಅನುಸರಣೆ ಮಾಡುತ್ತಿರುವ ವ್ಯವಸ್ಥೆಯನ್ನು ಸುಧಾರಿಸುವ ದೃಷ್ಟಿಯಿಂದ ಸಲಹೆಗಳನ್ನು ನೀಡಬೇಕು.

ಕೆಎಸ್ಎಎಡಿಯ ತನಿಖಾ ವರದಿಗಳ ಪುನರಾವಲೋಕನ ಮಾಡುವಾಗ ಕಂಡುಬಂದ ವಿಷಯಗಳನ್ನು ಹಾಗೂ ಎಜಿ(ಆಡಿಟ್) ತಂಡದಿಂದ ಹೆಚ್ಚಿನ ವಿವರವಾದ ವಿಶ್ಲೇಷಣೆಯಲ್ಲಿ ಕಂಡುಬಂದ ಫಲಿತಾಂಶಗಳನ್ನು ಕೆಳಗಿನ **ಕಂಡಿಕೆ 3.6** ರಲ್ಲಿ ಚರ್ಚಿಸಲಾಗಿದೆ.

## 3.6 ಪ್ರಾಥಮಿಕ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆಯಾದ ಘಟಕಗಳ ಪರೀಕ್ಷಾ–ತನಿಖೆ.

ತಾಂತ್ರಿಕ ಸಲಹೆಯನ್ನು ಒದಗಿಸಲು, ಎಜಿ(ಆಡಿಟ್) ಕೆಲವು ಪಂಚಾಯತ್ ರಾಜ್ ಸಂಸ್ಥೆಗಳ ಪರೀಕ್ಷಾ–ತನಿಖೆಯನ್ನು ನಡೆಸುತ್ತದೆ. ಪರೀಕ್ಷಾ–ತನಿಖೆಯ ವರದಿಯ ಸೂಚನೆಗಳ ಮೇಲೆ ಸ್ಥಳೀಯ ಸಂಸ್ಥೆಗಳು ಅನುಪಾಲನಾ ಕ್ರಮಗಳನ್ನು ಕೈಗೊಳ್ಳಲು, ಪರೀಕ್ಷಾ–ತನಿಖೆಯ ವರದಿಯನ್ನು ಪ್ರಾಥಮಿಕ ಲೆಕ್ಕಪರಿಶೋಧಕರಿಗೆ ಕಳುಹಿಸಲಾಗುವುದು. ಎಜಿ(ಆಡಿಟ್) ತನಿಖಾ ವರದಿಗಳಲ್ಲಿರುವ ಕಂಡಿಕೆಗಳ ಅನುಪಾಲನೆಯನ್ನು ಪ್ರಾಥಮಿಕ ಲೆಕ್ಕಪರಿಶೋಧಕರು, ತಮ್ಮದೇ ವರದಿ ಎಂದು ಭಾವಿಸಿ ಅವಶ್ಯಕವಾದ ಅನುಸರಣಾ ಕ್ರಮಗಳನ್ನು ಕೈಗೊಳ್ಳಬೇಕು.

ಪರೀಕ್ಷಾ–ತನಿಖೆ ಮಾಡಲಾದ ಸಂಸ್ಥೆಗಳಿಂದ ಅನುಪಾಲನೆಯನ್ನು ಪಡೆಯಲು ಕ್ರಮ ವಹಿಸಲಾಗುವುದು ಎಂದು ಇಲಾಖೆಯು ಉತ್ತರಿಸಿತು.

2018–19 ರಲ್ಲಿ ಎಜಿ(ಆಡಿಟ್) 42 ಗ್ರಾಮ ಪಂಚಾಯತಿಗಳು ಮತ್ತು 114 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ನಡೆಸಿದ್ದರು. ಅದರಲ್ಲಿ ಗಮನಿಸಿದ ಅಂಶಗಳನ್ನು ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿ ಹಾಗೂ ಮಾರ್ಚ್ 2018 ಕ್ಕೆ ಕೊನೆಗೊಂಡ ವರ್ಷದ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯಲ್ಲಿ ಸೇರಿಸಲಾಗಿದೆ. ಮೇಲೆ ಹೇಳಿದ ವರದಿಗಳಲ್ಲಿ ಸೇರಿಸಲಾದ ಕಂಡಿಕೆಗಳ ಪಟ್ಟಿಯನ್ನು **ಅನುಬಂಧ 3.1** ರಲ್ಲಿ ಉಲ್ಲೇಖಕ್ಕಾಗಿ ನೀಡಲಾಗಿದೆ.

### *3.6.1 ಗ್ರಾಮ ಪಂಚಾಯತಿಗಳ ಪರೀಕ್ಷಾ–ತನಿಖೆ*

2018–19ನೆಯ ವರ್ಷದಲ್ಲಿ, ಡಿಸೆಂಬರ್ 2018ರ ಮಾಹಿತಿಯ ಪ್ರಕಾರ 3,965 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಪ್ರಾಥಮಿಕ ಲೆಕ್ಕಪರಿಶೋಧಕರು ಮಾಡಿದ್ದರು. ಅವುಗಳಲ್ಲಿ, 2015–16 ರಿಂದ 2017–18 ರವರೆಗೆ ಆಗಿರುವ ವೆಚ್ಚಗಳ ಆಧಾರದ ಮೇಲೆ ಹಾಗು ಎಜಿ(ಆಡಿಟ್) ಕಛೇರಿಯಲ್ಲಿ ಲಭ್ಯವಿರುವ ಮಾನವಸಂಪನ್ಮೂಲಗಳ ಆಧಾರದ ಮೇಲೆ ಮತ್ತು ಕೆಎಸ್ಎಎಡಿಯಿಂದ ಪ್ರಾಥಮಿಕ ಲೆಕ್ಕಪರಿಶೋಧನೆ ಪೂರ್ಣಗೊಂಡಿರುವುದನ್ನು ಗಣನೆಗೆ ತೆಗೆದುಕೊಂಡು, ಎಜಿ(ಆಡಿಟ್) 80 ಗ್ರಾಮ ಪಂಚಾಯತಿಗಳನ್ನು(ಶೇಕಡ 2ರಷ್ಟು) ಪರೀಕ್ಷಾ–ತನಿಖೆಗೆ ಆಯ್ಕೆ ಮಾಡಿದರು. ಪರೀಕ್ಷಾ–ತನಿಖೆ ಮಾಡಿದ ಗ್ರಾಮ ಪಂಚಾಯತಿಗಳ ಪಟ್ಟಿಯನ್ನು **ಅನುಬಂಧ 3.2** ರಲ್ಲಿ ನೀಡಲಾಗಿದೆ.

ಕೆಎಸ್‌ಎಎಡಿಯು ಲೆಕ್ಕಪರಿಶೋಧನೆ ಮಾಡಿದ ಘಟಕಗಳ ಪರೀಕ್ಷಾ–ತನಿಖೆ ನಡೆಸುವಾಗ, ಕೆಎಸ್‌ಎಎಡಿ, ದಿಡ್ಡಿಗೆ ಗ್ರಾಮ ಪಂಚಾಯತಿ ಬಗ್ಗೆ ಮಾಡಿದ ಲೆಕ್ಕಪರಿಶೋಧನೆಯ ಅಂಶವನ್ನು ಗಮನಿಸಿ, ಈ ಕೆಳಗಿನ ಚೌಕದಲ್ಲಿ ಕಂಡಂತೆ ಪುನರಾವರ್ತಿಸಲಾಗಿದೆ.

***ಗ್ರಾಮ ವಿಕಾಸ ಯೋಜನೆಯ (ಜಿವಿವೈ) ಅಡಿಯಲ್ಲಿ ಸಿಮೆಂಟ್ ಹಾಗು ಎಲ್‌ಇಡಿ ದೀಪಗಳ ಖರೀದಿಯಲ್ಲಿ, ಕೆಎಸ್‌ಎಎಡಿಯು ಕೆಟಿಟಿಪಿ ಅಧಿನಿಯಮದ ಉಲ್ಲಂಘನೆಯನ್ನು ಗಮನಿಸಿ, ಖರ್ಚಿನ ಪೂರ್ಣ ಮೊತವನು, (₹23.64 ಲಕ್ಷ) ಆಕ್ಷೇಪಣೆಯಲ್ಲಿಟ್ಟಿತು.***

ಅದೇ ವಿಷಯದ ಮೇಲೆ ಎಜಿ(ಆಡಿಟ್) ತಂಡ ಗಮನಿಸಿದ ಅಂಶಗಳನ್ನು ಕೆಳಗೆ ವಿವರಿಸಲಾಗಿದೆ.

***ಸಿಮೆಂಟಿನ ಖರೀದಿಯಲ್ಲಿ ಅಕ್ರಮಗಳು.***

- 2017–18ನೆಯ ವರ್ಷದಲ್ಲಿ ಗ್ರಾಮ ವಿಕಾಸ ಯೋಜನೆಯ ನಿಧಿಯಿಂದ, ದಿಡ್ಡಿಗೆ ಗ್ರಾಮ ಪಂಚಾಯತಿಯು, ಸಿಮೆಂಟಿನ ಮೂಟೆಗಳನ್ನು ಮೆ. ದೀಕ್ಷಾ ಎಂಟರಪ್ರೈಸಸ್, ಇವರಿಂದ ವಿವಿಧ ದರಗಳಲ್ಲಿ ಖರೀದಿಸಿತು.
- ಸಿಮೆಂಟಿನ ಖರೀದಿ, ಜಮೆ ಮತ್ತು ವಿತರಣೆಯ ಮೇಲೆ ನಿಗಾ ಇಡಲು, ಗ್ರಾಮ ಪಂಚಾಯತಿ ಯು ಯಾವುದೇ ದಾಸ್ತಾನು ವಹಿಯನ್ನು ನಿರ್ವಹಿಸಿರಲಿಲ್ಲ.
- ದಿಡ್ಡಿಗೆ ಗ್ರಾಮ ಪಂಚಾಯತಿಯಲ್ಲಿ, ಗ್ರಾಮ ವಿಕಾಸ ಯೋಜನೆಗೆ ಸಂಬಂಧಪಟ್ಟ ಸಿವಿಲ್ ಕಾಮಗಾರಿಗಳನ್ನು ಮೆ.ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ ವಹಿಸಿದ್ದರಿಂದ, ಗ್ರಾಮ ಪಂಚಾಯತಿಯ ವತಿಯಿಂದ ಸಿಮೆಂಟ್ ಮೂಟೆಯ ಖರೀದಿಯ ಅವಶ್ಯಕತೆಯಿರಲಿಲ್ಲ.
- ಗ್ರಾಮ ಪಂಚಾಯತಿಯು ಗ್ರಾಮ ವಿಕಾಸ ಯೊಜನೆಯಡಿ ಯಾವುದೇ ಕಾಮಗಾರಿಯನ್ನು ಕಾರ್ಯಗತಗೊಳಿಸಿರಲಿಲ್ಲ ಹಾಗು ಸಿಮೆಂಟಿನ ಬಳಕೆಯ ಆಧಾರವಾಗಿ ಯಾವುದೇ ದಾಖಲೆಗಳನ್ನು ನಿರ್ವಹಿಸಿರಲಿಲ್ಲ.
- ಮೆ.ದೀಕ್ಷಾ ಎಂಟರ್ಪ್ರೈಸರ್ಸ್ ರವರಿಗೆ ಪಾವತಿಗಳನ್ನು ಮಾಡಿದ ಆಧಾರವಾಗಿ ಪ್ರಸ್ತುತಪಡಿಸಿದ ಬಿಲ್ಲುಗಳಲ್ಲಿ, ಗ್ರಾಮ ಪಂಚಾಯತಿಯು ಪ್ರತಿ ಸಿಮೆಂಟ್ ಮೂಟೆಗೆ ₹675/– ರಂತೆ ಪಾವತಿ ಮಾಡಿದ್ದು, ಈ ದರವು 2017–18ನೆ ವರ್ಷದಲ್ಲಿನ ಹೆಸರಾಂತ ಸಿಮೆಂಟ್ ಬ್ರಾಂಡುಗಳ ಮಾರುಕಟ್ಟೆ ದರಕ್ಕಿಂತ ಎರಡರಷ್ಟಿದ್ದಿತು..
- ಮೆ.ದೀಕ್ಷಾ ಎಂಟರ್ಪ್ರೈಸರ್ಸ್ ರವರಿಗೆ ಪಾವತಿಸಿದ ₹6,64 ಲಕ್ಷದ ಪೂರ್ಣ ಮೊತ್ತವು **(ಅನುಬಂಧ–3.3)** ಪ್ರಶ್ನಾರ್ಹ ಬಿಲ್ಲುಗಳ ಆಧಾರದ ಮೇಲೆ ಮಾಡಿರುವುದು ಸ್ಪಷ್ಟವಾದ್ದರಿಂದ, ಇಲಾಖೆಯಿಂದ ಮರುಪರಿಶೀಲನೆ ಮಾಡುವ ಅಗತ್ಯವಿದೆ.

***ಎಲ್‌ಇಡಿ ದೀಪಗಳ ಖರೀದಿಯಲ್ಲಿ ಅಕ್ರಮಗಳು.***

- 2017–18ನೆಯ ವರ್ಷದಲ್ಲಿ, ದಿಡ್ಡಿಗೆ ಗ್ರಾಮ ಪಂಚಾಯತಿಯು ₹8,22,480/– ಮೌಲ್ಯದ 100 ಎಲ್‌ಇಡಿ ಬೀದಿ ದೀಪಗಳನ್ನು ಮತ್ತು ಇತರೆ ಫಿಟ್ಟಿಂಗ್‌ಗಳನ್ನು ಹುರುಳಿಕಟ್ಟೆ ಗ್ರಾಮಕ್ಕಾಗಿ ಗ್ರಾಮ ವಿಕಾಸ ಯೋಜನಾ ನಿಧಿಗಳಿಂದ ಮೆ. ದೀಕ್ಷಾ ಎಂಟರಪ್ರೈಸಸ್ ರವರಿಂದ ಖರೀದಿ ಮಾಡಿತು.
- ಎಲ್‌ಇಡಿ ಬೀದಿ ದೀಪಗಳ ಖರೀದಿ, ಜಮೆ ಮತ್ತು ವಿತರಣೆಯ ಮೇಲೆ ನಿಗಾ ಇಡಲು, ಗ್ರಾಮ ಪಂಚಾಯತಿಯು ಯಾವುದೇ ದಾಸ್ತಾನು ವಹಿಯನ್ನು ನಿರ್ವಹಿಸಿರಲಿಲ್ಲ.
- ಭೌತಿಕ ತಪಾಸಣೆಯಲ್ಲಿ, ₹74,950/– ಮೌಲ್ಯದ ಕೇವಲ 10 ಎಲ್‌ಇಡಿ ದೀಪಗಳನ್ನು

ಅಳವಡಿಸಿರುವುದು ಕಂಡು ಬಂದಿತು, ಹಾಗು ಬಾಕಿ ಉಳಿದಿರುವ 90 ಎಲ್ಇಡಿ ದೀಪಗಳನ್ನು ಪತ್ತೆ ಮಾಡಲಾಗಲಿಲ್ಲ.

- 90 ಎಲ್ಇಡಿ ದೀಪಗಳಿಗೆ ವ್ಯಯಿಸಿದ ₹7.47 ಲಕ್ಷದ (**ಅನುಬಂಧ–3.4**, ₹8,22,480–₹74,950=₹7,47,530) ವೆಚ್ಚವು ಸಂಶಯಾಸ್ಪದವಾಗಿತ್ತು.

***ಸಲಹೆ: ಕೆಎಸ್ಎಎಡಿಯು ಮೇಲೆ ಕಂಡಂತೆ ವಿಸ್ತೃತವಾದ ವಿಶ್ಲೇಷಣೆ ಮಾಡಿ ಗಂಭೀರವಾದ ಅಕ್ರಮಗಳನ್ನು ಪ್ರಕಟಪಡಿಸಬೇಕೆಂದು ಸೂಚಿಸಲಾಗಿದೆ. ಉದಾಹರಣೆಗೆ, ಸಿಮೆಂಟ್ ಮತ್ತು ಎಲ್ಇಡಿ ದೀಪಗಳ ಸಂಗ್ರಹಣೆಯಲ್ಲಿ ₹14.11 ಲಕ್ಷಗಳ ಸಂಶಯಾಸ್ಪದ ಪಾವತಿಗಳು..***

ಸಲಹೆಗಳನ್ನು ಸ್ಥಳೀಯ ಲೆಕ್ಕಪರಿಶೋಧನಾ ವೃತ್ತಕ್ಕೆ ತಿಳಿಸಲಾಗುವುದು ಎಂದು ಇಲಾಖೆಯು ಉತ್ತರಿಸಿತು.

### *3.6.2 ನಗರ ಸ್ಥಳೀಯ ಸಂಸ್ಥೆಗಳ ಪರೀಕ್ಷಾ–ತನಿಖೆ*

ಅದೇ ರೀತಿಯಲ್ಲಿ, 2018–19ನೆಯ ವರ್ಷದಲ್ಲಿ, ಡಿಸೆಂಬರ್ 2018ರ ಮಾಹಿತಿಯ ಪ್ರಕಾರ ಪ್ರಾಥಮಿಕ ಲೆಕ್ಕಪರಿಶೋಧಕರು 2017–18ನೆಯ ವರ್ಷದವರೆಗೆ 132 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಮಾಡಿದ್ದರು. ಅವುಗಳಲ್ಲಿ ಎಜಿ(ಆಡಿಟ್), 2019–20ನೆಯ ವರ್ಷದಲ್ಲಿ 14 ನಗರ ಸ್ಥಳೀಯ ಸಂಸ್ಥೆಗಳ (ಸುಮಾರು ಶೇಕಡಾ 10ರಷ್ಟು) ಪರೀಕ್ಷಾ–ತನಿಖೆ ನಡೆಸಿತು. ಕೆಎಸ್ಎಎಡಿಯು ತುಮಕೂರು ಮಹಾನಗರ ಪಾಲಿಕೆಯೊಂದನ್ನು ಮಾತ್ರ ಲೆಕ್ಕಪರಿಶೋಧನೆ ಮಾಡಿದ್ದರಿಂದ, ಅದನ್ನೇ ಆಯ್ಕೆ ಮಾಡಲಾಯಿತು. ನಗರ ಪುರಸಭೆ, ಪಟ್ಟಣ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಆಯ್ಕೆಯಲ್ಲಿ, ಆಗಿರುವ ವೆಚ್ಚಗಳನ್ನು ಮಾನದಂಡವಾಗಿಟ್ಟುಕೊಂಡು, ಸರಳ ಯಾದೃಚ್ಛಿಕ ಮಾದರಿಯನ್ನು[13] ಅಳವಡಿಸಲಾಯಿತು. ಪರೀಕ್ಷಾ–ತನಿಖೆಗೆ ಒಳಗಾದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿಯನ್ನು **ಅನುಬಂಧ 3.5**ರಲ್ಲಿ ನೀಡಲಾಗಿದೆ. ವರ್ಗವಾರು ಆಯ್ಕೆಯಾದ ನಗರ ಸ್ಥಳೀಯ ಸಂಸ್ಥೆಗಳು ಕೆಳಗೆ ತಿಳಿಸಿದಂತಿದೆ:

**ಕೋಷ್ಟಕ 3.3: ಟಿಜಿಎಸ್ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ಒಳಗಾದ ವರ್ಗವಾರು ನಗರ ಸ್ಥಳೀಯ ಸಂಸ್ಥೆಗಳು**

| ಕ್ರ.ಸಂ. | ನಗರ ಸ್ಥಳೀಯ ಸಂಸ್ಥೆಯ ವರ್ಗ | ಕೆಎಸ್ಎಎಡಿಯಿಂದ ಲೆಕ್ಕಪರಿಶೋಧನೆಯಾದ ಘಟಕಗಳ ಸಂಖ್ಯೆ. | ಟಿಜಿಎಸ್ ಅಡಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಘಟಕಗಳ ಸಂಖ್ಯೆ |
|---|---|---|---|
| 1 | ಮಹಾನಗರ ಪಾಲಿಕೆಗಳು | 1 | 1 |
| 2 | ನಗರ ಪುರಸಭೆಗಳು | 29 | 4 |
| 3 | ಪಟ್ಟಣ ಪುರಸಭೆಗಳು | 63 | 4 |
| 4 | ಪಟ್ಟಣ ಪಂಚಾಯತಿಗಳು | 39 | 5 |
| | **ಒಟ್ಟು** | **132** | **14** |

ಕೆಎಸ್ಎಎಡಿಯು ಲೆಕ್ಕಪರಿಶೋಧನೆ ಮಾಡಿದ ಘಟಕಗಳ ಪರೀಕ್ಷಾ–ತನಿಖೆ ನಡೆಸುವಾಗ, ಎಜಿ(ಆಡಿಟ್) ತಂಡವು ಈ ಕೆಳಗಿನ ಅಂಶಗಳನ್ನು ಗಮನಿಸಿತು.

[13] ಯಾದೃಚ್ಛಿಕ ಕೋಷ್ಟಕಗಳನ್ನು ಪ್ರತಿ ವರ್ಗದ ಯುಎಲ್‌ಬಿಗಳಿಗೆ ರಚಿಸಲಾಯಿತು ಮತ್ತು ಘಟಕಗಳನ್ನು ಕೋಷ್ಟಕದ ಮೇಲಿನ ಭಾಗದ ಎಡದಿಂದ ಬಲಕ್ಕೆ ಆಯ್ಕೆಮಾಡಲಾಯಿತು.

### ಎ) ತುಮಕೂರು ನಗರ ಸಭೆಯ ತನಿಖಾ ವರದಿ

***ತನಿಖಾ ವರದಿಯ ಮನರ್ಪರಿಶೀಲನೆ: ಕೆಎಸ್‌ಎಎಡಿಯು ಬಾಡಿಗೆ ಸಂಗ್ರಹಣೆ ಮಾಡದಿರುವುದರ ಬಗ್ಗೆ/ಪಡೆಯಬೇಕಾದ ಬಾಡಿಗೆ, ಬಾಕಿ ಉಳಿದಿರುವುದರ ಬಗ್ಗೆ ಟೀಕೆ ಮಾಡಿದೆ.***

ಅದೇ ವಿಷಯದ ಬಗ್ಗೆ ಎಜಿ**(**ಆಡಿಟ್**)** ತಂಡದ ಗಮನಕ್ಕೆ ಬಂದ ಅಂಶಗಳನ್ನು ಕೆಳಗೆ ವಿವರಿಸಲಾಗಿದೆ.

- ಸರ್ಕಾರವು 26.10.2009 ದಿನಾಂಕದ ಸುತ್ತೋಲೆಯ ಮೂಲಕ, ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಸೌಕರ್ಯ ಅಭಿವೃದ್ಧಿ (ಐಡಿಎಸ್‌ಎಮ್‌ಟಿ) ಯೋಜನೆಯ ಅಡಿಯಲ್ಲಿ ಅಥವಾ 10ನೆಯ/11ನೆಯ ಹಣಕಾಸು ಆಯೋಗ ಅಥವ ಬಾಹ್ಯ ನೆರವಿನ ಪ್ರಾಯೋಜನೆಗಳ ಅಡಿಯಲ್ಲಿ ಯಾವುದೇ ವಾಣಿಜ್ಯ ಕಟ್ಟಡವನ್ನು ನಿರ್ಮಿಸಿದರೆ, ಅದನ್ನು ಹರಾಜು ಪ್ರಕ್ರಿಯೆಯ ಮೂಲಕ ಗುತ್ತಿಗೆಗೆ ಕೊಡಬೇಕೆಂದು ನಿರ್ದೇಶಿಸಿದೆ. ಮುಂದುವರೆದು ಸುತ್ತೋಲೆಯು, ಗುತ್ತಿಗೆಯನ್ನು 12 ವರ್ಷಗಳ ಕಾಲ ನೀಡಬಹುದು ಹಾಗೂ ಪ್ರತಿ ಮೂರು ವರ್ಷಗಳ ನಂತರ ಬಾಡಿಗೆಯನ್ನು ಶೇಕಡ 10ರಷ್ಟು ಹೆಚ್ಚಿಸಬೇಕೆಂದು ತಿಳಿಸಿತು.
- ಭೋಗ್ಯದಾರ, ಮುಂಬರುವ ತಿಂಗಳಿನ 10 ನೆಯ ತಾರೀಖಿನ ಒಳಗೆ ಬಾಡಿಗೆಯನ್ನು ಕಟ್ಟದಿದ್ದರೆ, ಪ್ರತಿ ತಿಂಗಳಿನಲ್ಲಿ ಕಟ್ಟುವ ಬಾಡಿಗೆಯ ಮೇಲೆ ಶೇಕಡ 2ರಷ್ಟು ದಂಡ ವಿಧಿಸಬೇಕು.
- ತುಮಕೂರು ಮಹಾನಗರ ಪಾಲಿಕೆ, ಬಾಡಿಗೆ ನಿಗದಿಯಾದ ದಿನದಿಂದ ಅಥವ 26.10.2009ರ ಸುತ್ತೋಲೆ ಜಾರಿಯಾದ ದಿನದಿಂದ ಮೂರು ವರ್ಷಗಳು ಮುಗಿದ ನಂತರವೂ ಬಾಡಿಗೆಯನ್ನು ಶೇಕಡ 10ರಷ್ಟು ಹೆಚ್ಚಿಸುವಲ್ಲಿ ವಿಫಲವಾಗಿದೆ. ಇದರಿಂದ ಕಂದಾಯದ ಸಂಗ್ರಹಣೆಯಲ್ಲಿ ₹38.35 ಲಕ್ಷಗಳಷ್ಟು ಕಡಿತವಾಯಿತು.

***ಸಲಹೆ: ಕೆಎಸ್‌ಎಎಡಿಯು ಅವಶ್ಯಕವಾಗಿರುವ ತನಿಖೆಗಳನ್ನು ಮಾಡಿ, 26.10.2009ರ ಸರ್ಕಾರದ ಸುತ್ತೋಲೆಯಂತೆ ಬಾಡಿಗೆಯನ್ನು ಹೆಚ್ಚಿಸದಿರುವುದರಿಂದ, ಆದಾಯದಲ್ಲಾದ ನಷ್ಟದ ಬಗ್ಗೆ ವಿಮರ್ಶೆ ಮಾಡಿ ಪಾಲಿಕೆಗೆ ಸಲ್ಲಬೇಕಾದ ಕಂದಾಯವನ್ನು ಹೆಚ್ಚಿಸಬಹುದೆಂದು ಸೂಚಿಸಲಾಗಿದೆ.***

### ಬಿ) ನಗರ ಮರಸಭೆ, ಗದಗ–ಬೆಟಗೇರಿ, ಆಲನವರ್ ಮತ್ತು ಹೊಳಲ್ಕೆರೆ, ಪಟ್ಟಣ ಪಂಚಾಯತಿಗಳ ತನಿಖಾವರದಿಗಳು.

***ತನಿಖಾ ವರದಿಗಳ ಮನರ್ಪರಿಶೀಲನೆ: ಕೆಎಸ್‌ಎಎಡಿಯು ಭದ್ರತಾ ಠೇವಣಿ ವಹಿ/ಮುಂಗಡ ಹಣ ಠೇವಣಿ ವಹಿಯನ್ನು ನಿರ್ವಹಿಸದಿರುವ ಬಗ್ಗೆ ಗಮನ ಸೆಳೆದಿದ್ದರು.***

ಎಜಿ(ಆಡಿಟ್) ತಂಡ, ಮೇಲ್ಕಂಡ ವಿಷಯದ ಬಗ್ಗೆ ಗಮನಿಸಿದ ಅಂಶಗಳ ವಿವರವನ್ನು ಕೆಳಗೆ ನೀಡಲಾಗಿದೆ.

- ಕೆಎಮ್‌ಎಬಿಆರ್ 2006ರ ನಿಯಮ 117ರ ಪ್ರಕಾರ, ಠೇವಣಿಗಳನ್ನು, ವಾಪಸಾತಿ ಮಾಡಬೇಕಾದ ದಿನದಿಂದ ಸತತ ಮೂರು ಹಣಕಾಸು ವರ್ಷಗಳು ಕಳೆದರೂ, ಯಾವುದೇ ಕೋರಿಕೆ (ಕ್ಲೇಮು) ಬರದಿದ್ದಲ್ಲಿ, ಅಂತಹ ಠೇವಣಿಗಳನ್ನು ರದ್ದುಪಡಿಸಲಾಗುವುದು. ಸಂಬಂಧಪಟ್ಟ ಇಲಾಖೆಯು ಕೆಎಮ್‌ಎಫ್ 69ರಲ್ಲಿ ಸೂಚನೆಯನ್ನು ತಯಾರುಮಾಡಿ, ಪ್ರಕರಣಕ್ಕೆ ಅನುಗುಣವಾಗಿ ಮರಸಭೆ ಆಯುಕ್ತರು ಅಥವಾ ಮುಖ್ಯ ಅಧಿಕಾರಿಗಳ ಅನುಮೋದನೆ ಪಡೆದ ನಂತರ, ಲೆಕ್ಕಪತ್ರ ಇಲಾಖೆಗೆ ಲೆಕ್ಕ ಮಸ್ತಕಗಳಲ್ಲಿ ಆವಶ್ಯಕ ನಮೂದುಗಳನ್ನು ಜಾರಿ ಮಾಡಲು ಕಳುಹಿಸಬೇಕು,
- ಇಂತಹ ರದ್ದಾದ ಠೇವಣಿಗಳನ್ನು ಮುಟ್ಟುಗೋಲು ಹಾಕಿದ ಅಥವಾ ರದ್ದುಪಡಿಸಿದ ಹಣಕಾಸು ವರ್ಷದಲ್ಲಿ, ನಗರ ಸ್ಥಳೀಯ ಸಂಸ್ಥೆಗಳ ಆದಾಯವೆಂದು ಗುರುತಿಸಬೇಕು. ಪ್ರತಿ ಹಣಕಾಸು ವರ್ಷದ ಅಂತ್ಯದಲ್ಲಿ, ಇಂತಹ ವಿಷಯಗಳನ್ನು ಲೆಕ್ಕಪತ್ರ ಇಲಾಖೆಯು ಸಂಬಂಧಪಟ್ಟ ಇಲಾಖೆಗಳೊಂದಿಗೆ ಪರೀಕ್ಷಿಸಿ, ರದ್ದಾದ ಠೇವಣಿಗಳ ಪಟ್ಟಿಯನ್ನು ಸಿದ್ದಪಡಿಸಬೇಕು.

- ರದ್ದಾಗಬೇಕಾಗಿರುವ ಠೇವಣಿಗಳಿಗೆ ಸಂಬಂಧಿಸಿದಂತೆ, ಪ್ರಕರಣಕ್ಕೆ ಅನುಗುಣವಾಗಿ, ಆಯುಕ್ತರು ಅಥವಾ ಮುಖ್ಯ ಅಧಿಕಾರಿಗಳ ಅನುಮೋದನೆ ಪಡೆದ ನಂತರ, ಲೆಕ್ಕಪತ್ರ ಇಲಾಖೆಯು ಸಂಬಂಧಪಟ್ಟ ಇಲಾಖೆಗಳಿಂದ ಠೇವಣಿ ವಾಪಸಾತಿ/ಹೊಂದಾಣಿಕೆ/ರದ್ದು ಸಲಹೆಗಳನ್ನು ಪಡೆದು, ದಿನಚರಿ ಪುಸ್ತಕದಲ್ಲಿ ಆವಶ್ಯಕ ನಮೂದುಗಳನ್ನು (ಜರ್ನಲ್ ಎಂಟ್ರಿ) ಜಾರಿಗೊಳಿಸಬೇಕು.
- ಮೂರು ವರ್ಷಗಳಿಗಿಂತ ಹಳೆಯದಾದ ಕ್ಲೇಮು ಆಗಿರದ ₹108.95 ಲಕ್ಷ ಮೊತ್ತದ ಠೇವಣಿಗಳನ್ನು, 3 ನಗರ ಸ್ಥಳೀಯ ಸಂಸ್ಥೆಗಳಲ್ಲಿ[14], ಠೇವಣಿ ವಹಿಯಲ್ಲಿ ತೋರಿಸಿದ್ದರೂ ಸಹ, ಆ ಠೇವಣಿಗಳನ್ನ ಪಾಲಿಕೆಯ ಆದಾಯವೆಂದು ಪರಿಗಣಿಸದಿರುವುದನ್ನು ಎಜಿ(ಆಡಿಟ್) ಗಮನಿಸಿತು.

***ಸಲಹೆ: ಕೆಎಸ್ಎಎಡಿಯು ದಾಖಲೆಗಳನ್ನು ಸರಿಯಾದ ರೀತಿಯಲ್ಲಿ ಪರೀಕ್ಷಿಸಿ ಮತ್ತು ರದ್ದಾದ ಠೇವಣಿಗಳ ಮೊತ್ತವನ್ನು ಪ್ರಮಾಣೀಕರಿಸಿ ಆದಾಯವೆಂದು ಪರಿಗಣಿಸುವುದರಿಂದ ಪಾಲಿಕೆಯ ಕಂದಾಯದಲ್ಲಿ ಹೆಚ್ಚಳ ತರಬಹುದೆಂದು ಸೂಚಿಸಲಾಗಿದೆ***

ಸಲಹೆಗಳನ್ನು ಸ್ಥಳೀಯ ಲೆಕ್ಕಪರಿಶೋಧನಾ ವೃತ್ತಕ್ಕೆ ತಿಳಿಸಲಾಗುವುದು ಎಂದು ಇಲಾಖೆಯು ಉತ್ತರಿಸಿತು.

**ಸಿ) *ಪಟ್ಟಣ ಪಂಚಾಯತಿ, ಹೊಳಲ್ಕೆರೆಯ ತನಿಖಾ ವರದಿ.***

***ತನಿಖಾ ವರದಿಯ ಮರುಪರಿಶೀಲನೆ : ಎಜಿ(ಆಡಿಟ್) ಗಮನಿಸಿದಂತೆ, ಆಸ್ತಿ ತೆರಿಗೆಯಿಂದ ವಿನಾಯಿತಿ ಇರುವ ಆಸ್ತಿಗಳ ಮೇಲೆ ಸೇವಾ ಶುಲ್ಕವನ್ನು ವಿಧಿಸಬೇಕಾಗಿರುವ ವಿಷಯವನ್ನು, ಕೆಎಸ್ಎಎಡಿಯು ತನ್ನ ತನಿಖಾ ವರದಿಗಳಲ್ಲಿ ಗಮನಿಸಿರಲಿಲ್ಲ/ಹೊರತಂದಿರಲಿಲ್ಲ.***

**ಮೇಲ್ಕಂಡ ವಿಷಯದ ಬಗ್ಗೆ ಎಜಿ(ಆಡಿಟ್) *ತಂಡ ಗಮನಿಸಿದ ಅಂಶಗಳನ್ನು ಕೆಳಗೆ ವಿವರಿಸಲಾಗಿದೆ.***

- ಕೆಎಮ್‌ಸಿ ಅಧಿನಿಯಮದ, ಪರಿಚ್ಛೇದ 94(1–ಎ) ಅಡಿಯಲ್ಲಿ ವಿನಾಯಿತಿಗಳಿಗೆ ಅನುಮತಿಗಳನ್ನು ನೀಡಿದಾಗ್ಯೂ ಕೂಡ, ಪರಿಚ್ಛೇದ 94(2)ರ ಪ್ರಕಾರ ಪುರಸಭೆಗಳಿಗೆ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಮತ್ತು ಸಾಮಾನ್ಯ ಅಥವಾ ವಿಶೇಷ ಸೇವೆಗಳನ್ನು ನೀಡಲು, ನಿಗದಿತ ದರಗಳಲ್ಲಿ ಸೇವಾ ಶುಲ್ಕವನ್ನು ಸಂಗ್ರಹಿಸಲು ಅವಕಾಶವಿದೆ.
- ಪಟ್ಟಣ ಪಂಚಾಯತಿ ಸೇವಾ ಶುಲ್ಕಗಳನ್ನು ವಿಧಿಸಲು ತೆಗೆದುಕೊಂಡ ನಿರ್ಧಾರ, ಸೇವಾ ಶುಲ್ಕಗಳ ಪ್ರಮಾಣ, ಆಸ್ತಿ ತೆರಿಗೆಯಿಂದ ವಿನಾಯಿತಿ ಇರುವ ಆಸ್ತಿಗಳ ಪಟ್ಟಿ ಹಾಗೂ ಅವುಗಳಿಂದ ಸಂಗ್ರಹಿಸಲಾದ ಸೇವಾ ಶುಲ್ಕಗಳು, ಇದುವರೆಗೆ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳಿಗೆ ತೆರಿಗೆಯಿಂದ ವಿನಾಯಿತಿ ಕೋರಿ ಪ್ರಸ್ತುತಪಡಿಸಿದ ತೆರಿಗೆ ಸಲ್ಲಿಕೆಗಳ ಸಂಖ್ಯೆಯ ವಿವರಗಳಲ್ಲದೆ, ಮುಖ್ಯಾಧಿಕಾರಿಗಳು ವಿನಾಯಿತಿಗೆ ಅನುಮತಿ ನೀಡಿದ ತೆರಿಗೆ ಸಲ್ಲಿಕೆಗಳ ಸಂಖ್ಯೆ, ಮುಖ್ಯಾಧಿಕಾರಿಗಳು ತಿರಸ್ಕರಿಸಿದ ಪ್ರಕರಣಗಳ ಸಂಖ್ಯೆ, ಆಸ್ತಿ ಹಕ್ಕುದಾರರಿಗೆ ತೆರಿಗೆಯ ಮೊತ್ತವನ್ನು ಪಾವತಿಸಲು ಕಳುಹಿಸಿದ ತಿಳುವಳಿಕೆ ಮತ್ತು ಮೇಲಿನ ವಿವರಗಳನ್ನು ಪರಿವೀಕ್ಷಿಸಲು ನಿರ್ವಹಿಸಿದ ವಹಿಯ ಬಗ್ಗೆ ಯಾವುದೇ ಮಾಹಿತಿ ಕಂಡುಬರಲಿಲ್ಲ.

- ಲೆಕ್ಕ ಪರಿಶೋಧನೆಗೆ ಪಟ್ಟಣ ಪಂಚಾಯತಿಯು ಪ್ರಸ್ತುತ ಪಡಿಸಿದ ತ:ಖ್ತೆಯ ಪ್ರಕಾರ, ಪಟ್ಟಣ ಪಂಚಾಯತಿಯ ಪರಿಧಿಯಲ್ಲಿ 58 ಸಾರ್ವಜನಿಕ ಪ್ರಾರ್ಥನಾ ಸ್ಥಳಗಳು, 7 ಸರ್ಕಾರಿ ಶಾಲೆಗಳು, 2 ರಾಜ್ಯ/ಕೇಂದ್ರ ಸರ್ಕಾರದ ಕಛೇರಿಗಳ ಕಟ್ಟಡಗಳು ಮತ್ತು 2 ಸರ್ಕಾರಿ ಆಸ್ಪತ್ರೆಗಳಿದ್ದವು. ಈ ವಿನಾಯಿತಿ

[14] ಸಿಎಮ್‌ಸಿ ಗದಗ– ಬೆಟಗೇರಿ (₹99.21 ಲಕ್ಷ), ಟಿಪಿ ಆಲನವರ್(₹6.42 ಲಕ್ಷ) ಮತ್ತು ಟಿಪಿ ಹೊಳಲಕೆರೆ(₹3.32 ಲಕ್ಷ)

ಇರುವ ಆಸ್ತಿಗಳಿಂದ ಸೇವಾ ಶುಲ್ಕದ ಸಂಗ್ರಹಣೆಯ ಬಗ್ಗೆ ಯಾವುದೇ ಮಾಹಿತಿಯನ್ನು ಹಾಜರು ಪಡಿಸಲಿಲ್ಲ.

ಮುಖ್ಯಾಧಿಕಾರಿಗಳು ತಮ್ಮ ಉತ್ತರದಲ್ಲಿ ಈ ವಿಷಯವನ್ನು ಸಮಿತಿಯ ಸಭೆಯಲ್ಲಿ ಪ್ರಸ್ತಾಪಿಸಿ ವಿನಾಯಿತಿ ಹೊಂದಿರುವ ಆಸ್ತಿಗಳ ಮೇಲೆ ಸೇವಾ ಶುಲ್ಕವನ್ನು ವಿಧಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು, ಎಂದು ತಿಳಿಸಿದ್ದಾರೆ.

***ಸಲಹೆ: ಎಜಿ(ಆಡಿಟ್) ತಂಡ ಸೂಚಿಸಿದಂತೆ, ಕೆಎಸ್‌ಎಎಡಿ ಅಧಿನಿಯಮಗಳು, ನಿಯಮಗಳು ಮತ್ತು ಕೈಪಿಡಿಗಳ ಅನುಪಾಲನೆಯನ್ನು ಸರಿಯಾದ ರೀತಿಯಲ್ಲಿ ಪರೀಕ್ಷಿಸುವುದರಿಂದ, ಪಾಲಿಕೆಯ ಆದಾಯದಲ್ಲಿ ಹೆಚ್ಚಳ ತರಬಹುದು.***

ಸಲಹೆಗಳನ್ನು ಸ್ಥಳೀಯ ಲೆಕ್ಕಪರಿಶೋಧನಾ ವೃತ್ತಕ್ಕೆ ತಿಳಿಸಲಾಗುವುದು ಎಂದು ಇಲಾಖೆಯು ಉತ್ತರಿಸಿತು.

## 3.7 ಪ್ರಾಥಮಿಕ ಲೆಕ್ಕಪರಿಶೋಧಕರು ಅಭಿವೃದ್ಧಿಗೊಳಿಸಿರುವ ಆಂತರಿಕ ನಿಯಂತ್ರಣದ ವ್ಯವಸ್ಥೆ

ನಿಬಂಧನೆಗಳ ಪ್ರಕಾರ, ಪ್ರಾಥಮಿಕ ಲೆಕ್ಕಪರಿಶೋಧಕರು ಎಜಿ(ಆಡಿಟ್)ರವರೊಂದಿಗೆ ಸಮಾಲೋಚನೆ ನಡೆಸಿ ತಮ್ಮ ಸಂಸ್ಥೆಯಲ್ಲಿ ಆಂತರಿಕ ನಿಯಂತ್ರಣದ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಬೇಕು. ಕೆಎಸ್‌ಎಎಡಿ ಕೈಪಿಡಿಯ ಅಧ್ಯಾಯ II(ಲೆಕ್ಕಪರಿಶೋಧನೆಯ ಪರಿಕಲ್ಪನೆಗಳು) ಆಂತರಿಕ ನಿಯಂತ್ರಣದ ಚೌಕಟ್ಟಿನ ಅಳವಡಿಕೆಯ ಬಗ್ಗೆ ವಿವರಗಳನ್ನು ನೀಡುತ್ತದೆ, ಉದಾಹರಣೆಗೆ, ಕ್ರಮಬದ್ಧತೆ ನೈತಿಕತೆ ಆರ್ಥಿಕವಾಗಿ ದಕ್ಷ ಹಾಗೂ ಪರಿಣಾಮಕಾರಿ ಕಾರ್ಯಾಚರಣೆಗಳನ್ನು ಕಾರ್ಯಗತಗೊಳಿಸುವುದು, ಅನ್ವಯವಾಗುವ ಕಾನೂನುಗಳ ಮತ್ತು ವಿಧಾನಗಳ ಅನುಪಾಲನೆ ಮಾಡುವುದು, ಹೊಣೆಗಾರಿಕೆಯ ಬಾಧ್ಯತೆಗಳನ್ನು ಪೂರೈಸುವುದು, ಸಂಪನ್ಮೂಲಗಳನ್ನು, ನಷ್ಟ, ದುರುಪಯೋಗ ಹಾಗು ಹಾನಿಯಿಂದ ರಕ್ಷಿಸುವುದು. ಕೈಪಿಡಿಯಲ್ಲಿರುವ ಆಚರಣೆಗಳ ಜೊತೆಯಲ್ಲಿ ನಿಯತಕಾಲಿಕ ಸಲ್ಲಿಕೆಗಳ(ಕ್ಯಾಲಂಡರ್ ಆಫ್ ರಿಟರ್ನ್ಸ್) ನಿರ್ವಹಣೆ ಮತ್ತು ವಿವಿಧ ಸ್ಥಳೀಯ ಲೆಕ್ಕ ಪರಿಶೋಧನಾ ವೃತ್ತಗಳ ನಡುವೆ ಸಮಾನಸ್ಥರಿಂದ ಕೆಲಸದ ಪುನರ್ಪರಿಶೀಲನೆ ನಡೆಸುವ ಪದ್ದತಿಗಳ ಅಳವಡಿಕೆಯನ್ನು, ಪರಿಗಣಿಸಬಹುದೆಂದು ಸೂಚಿಸಲಾಗಿದೆ.

## 3.8 ಕೆಎಸೆಎಎಡಿಯ ಕೈಪಿಡಿಯಲ್ಲಿ ಟಿಜಿಎಸ್ ಅಂಶವನ್ನು ಸೇರ್ಪಡೆ ಮಾಡದಿರುವುದು

ಕೆಎಸ್‌ಎಎಡಿಯು ಮೈಸೂರು ಸ್ಥಳೀಯ ನಿಧಿಗಳ ಲೆಕ್ಕಪರಿಶೋಧನೆ ಕೈಪಿಡಿ 1967 ಮತ್ತು ಕಾಲದಿಂದ ಕಾಲಕ್ಕೆ ಜಾರಿಗೊಳಿಸಿದ ಇತರೆ ಕೈಪಿಡಿಗಳು/ನಿರ್ದೇಶನಗಳ ಆಡಳಿತಕ್ಕೆ ಒಳಪಟ್ಟಿತ್ತು. ಗ್ರಾಮ ಪಂಚಾಯತಿಗಳು ಹಾಗು ನಗರ ಸ್ಥಳೀಯ ಸಂಸ್ಥೆಗಳು ಸೇರಿ ಲೆಕ್ಕಪರಿಶೋಧನೆಗೆ ಒಳಗಾದ ಹಲವಾರು ಸಂಸ್ಥೆಗಳ ಲೆಕ್ಕಪತ್ರ ವ್ಯವಸ್ಥೆಯಲ್ಲಾದ ಪ್ರಮುಖ ಬದಲಾವಣೆಗಳಿಂದ ಮತ್ತು ಅನ್ವಯವಾಗುವ ಅಧಿನಿಯಮಗಳು/ಹಾಗೂ ನಿಯಮಗಳಲ್ಲಿ ಆದ ತಿದ್ದುಪಡಿಗಳಿಂದ, ಕೆಎಸ್‌ಎಎಡಿಯ ಕೈಪಿಡಿಯನ್ನು ಪರಿಷ್ಕರಿಸಿ ರಾಜ್ಯ ಸರ್ಕಾರಕ್ಕೆ ನವೆಂಬರ್ 2014ರಲ್ಲಿ ಅನುಮೋದನೆಗಾಗಿ ಪ್ರಸ್ತುತಪಡಿಸಲಾಯಿತು ಹಾಗೂ ಅನುಮೋದಿತ ಕೈಪಿಡಿಯನ್ನು ಆಗಸ್ಟ್ 2016ರಲ್ಲಿ ಹೊರತರಲಾಯಿತು. ಗ್ರಾಮ ಪಂಚಾಯತಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಕ್ರಮವಾಗಿ 2010–11 ಮತ್ತು 2011–12 ರಲ್ಲಿ ಸಿಎಜಿಗೆ ಟಿಜಿಎಸ್ ಅಡಿಯಲ್ಲಿ ವಹಿಸಲಾಯಿತಾದರೂ ಕೂಡ, ಈ ಅಂಶವನ್ನು ಕೈಪಿಡಿಯಲ್ಲಿ ಉಲ್ಲೇಖಿಸಿರಲಿಲ್ಲ. ಕೈಪಿಡಿಯಲ್ಲಿ, ಟಿಜಿಎಸ್ ಮಾಡ್ಯೂಲಿನ ಅಡಿಯಲ್ಲಿ ಸಿಎಜಿಗೆ ಲೆಕ್ಕಪರಿಶೋಧನೆಯನ್ನು ವಹಿಸಿರುವ ಅಂಶವನ್ನು ಮತ್ತು ಅದರ ಸಂಬಂಧಿತ ನಿಯಮಗಳು ಹಾಗೂ ಷರತ್ತುಗಳನ್ನು ಸೇರ್ಪಡೆ ಮಾಡುವುದರಿಂದ ಕೆಎಸ್‌ಎಎಡಿಯ ಸಿಬ್ಬಂದಿವರ್ಗದಲ್ಲಿ ಜಾಗೃತಿ

ಮೂಡುವುದು ಹಾಗೂ ಟಿಜಿಎಸ್ ಪದ್ದತಿಯನ್ನು ಸುವ್ಯವಸ್ಥಿತಗೊಳಿಸಿ ಹೆಚ್ಚು ಫಲಕಾರಿಯಾಗಿ ಮಾಡಬಹುದು.

ಲೆಕ್ಕಪರಿಶೋಧನಾ ಕೈಪಿಡಿಯಲ್ಲಿನ ಅನುವುಗಳನ್ನು ಪರಿಶೀಲಿಸಿದ ನಂತರ ಮೇಲೆ ಹೇಳಿದ ಅಂಶಗಳನ್ನು ಪರಿಗಣಿಸಲಾಗುವುದೆಂದು ಇಲಾಖೆಯು ಉತ್ತರಿಸಿತು.

**ಬೆಂಗಳೂರು** **(ಶಾಂತಿ ಪ್ರಿಯಾ ಎಸ್)**

**ದಿನಾಂಕ** **ಪ್ರಧಾನ ಮಹಾ ಲೇಖಾಪಾಲರು (ಲೆಕ್ಕಪರಿಶೋಧನೆ-I)**

**ಕರ್ನಾಟಕ**

# ಅನುಬಂಧಗಳು

## ಅನುಬಂಧ 1.1
### (ಉಲ್ಲೇಖ: ಕಂಡಿಕೆ 1.2/ಪುಟ 2)
### ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ



**ಅನುಬಂಧ 1.2**

**(ಉಲ್ಲೇಖ: ಕಂಡಿಕೆ 1.4/ಪುಟ 3)**

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿರ್ಧಿಷ್ಟಪಡಿಸಲಾದ ಪ್ರಕಾರ್ಯಗಳು**

| ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ನಿರ್ಧಿಷ್ಟಪಡಿಸಲಾದ ಪ್ರಕಾರ್ಯಗಳು | | | | |
|---|---|---|---|---|
| **ಕ್ರ.ಸಂ.** | **ವಿಷಯ** | **ಗ್ರಾಮ ಪಂಚಾಯತಿ** | **ತಾಲ್ಲೂಕು ಪಂಚಾಯತಿ** | **ಜಿಲ್ಲಾ ಪಂಚಾಯತಿ** |
| 1 | **ಸಾಮಾನ್ಯ ಪ್ರಕಾರ್ಯಗಳು** | 1) ಪಂಚಾಯತಿ ಪ್ರದೇಶದ ಅಭಿವೃದ್ಧಿಗಾಗಿ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದು.<br>2) ವಾರ್ಷಿಕ ಬಜೆಟ್ ಸಿದ್ಧಪಡಿಸುವುದು.<br>3) ಪ್ರಕೃತಿ ವಿಕೋಪಗಳಿಗೆ ಪರಿಹಾರವನ್ನು ಒದಗಿಸುವುದು.<br>4) ಸಾರ್ವಜನಿಕ ಸ್ವತ್ತುಗಳಲ್ಲಿನ ಅತಿಕ್ರಮಣವನ್ನು ತೊಡೆದುಹಾಕುವುದು.<br>5) ಸ್ವಯಂ ಸೇವೆಯನ್ನು ಸಂಘಟಿಸುವುದು ಮತ್ತು ಸಮುದಾಯ ಕಾರ್ಯಗಳಿಗಾಗಿ ವಂತಿಗೆ ನೀಡುವುದು.<br>6) ಗ್ರಾಮಗಳ ಅತ್ಯಾವಶ್ಯಕ ಅಂಕಿ ಅಂಶಗಳನ್ನು ಇಟ್ಟುಕೊಳ್ಳುವುದು. | 1) ಈ ಅಧಿನಿಯಮದ ಮೂಲಕ ತನಗೆ ವಹಿಸಿಕೊಟ್ಟ ಮತ್ತು ಸರ್ಕಾರವು ಅಥವಾ ಜಿಲ್ಲಾ ಪಂಚಾಯತಿಯು ವಹಿಸಿದ ಯೋಜನೆಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಅದನ್ನು ಜಿಲ್ಲಾ ಯೋಜನೆಯೊಂದಿಗೆ ಸೇರಿಸುವುದಕ್ಕಾಗಿ ಗೊತ್ತುಪಡಿಸಿದ ಸಮಯದೊಳಗೆ ಜಿಲ್ಲಾ ಪಂಚಾಯತಿಗೆ ಒಪ್ಪಿಸುವುದು.<br>2) ತಾಲ್ಲೂಕಿನಲ್ಲಿರುವ ಎಲ್ಲ ಗ್ರಾಮ ಪಂಚಾಯತಿಗಳ ವಾರ್ಷಿಕ ಯೋಜನೆಗಳನ್ನು ಪರಿಶೀಲಿಸುವುದು ಮತ್ತು ಕ್ರೋಡೀಕರಿಸುವುದು ಮತ್ತು ಹಾಗೆ ಕ್ರೋಡೀಕರಿಸಿದ ಯೋಜನೆಗಳನ್ನು ಜಿಲ್ಲಾ ಪಂಚಾಯತಿಗೆ ಒಪ್ಪಿಸುವುದು.<br>3) ತಾಲ್ಲೂಕು ಪಂಚಾಯತಿಯ ವಾರ್ಷಿಕ ಬಜೆಟ್‌ಅನ್ನು ಸಿದ್ಧಪಡಿಸುವುದು ಮತ್ತು ಅದನ್ನು ಗೊತ್ತುಪಡಿಸಿದ ಅವಧಿಯೊಳಗೆ ಜಿಲ್ಲಾ ಪಂಚಾಯತಿಗೆ ಒಪ್ಪಿಸುವುದು.<br>4) ಸರ್ಕಾರದಿಂದ ಅಥವಾ ಜಿಲ್ಲಾ ಪಂಚಾಯತಿಯಿಂದ ತನಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಕೆಲಸಗಳನ್ನು ಕಾರ್ಯಗತ ಗೊಳಿಸುವುದು.<br>5) ಪ್ರಕೃತಿ ವಿಕೋಪಗಳಲ್ಲಿ ಪರಿಹಾರವನ್ನು ಒದಗಿಸುವುದು. | ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅಭಿವೃದ್ಧಿ ಸ್ಕೀಮುಗಳನ್ನು ಮೇಲ್ವಿಚಾರಿಸುವುದು, ಸಮನ್ವಯ ಮಾಡುವುದು ಒಟ್ಟುಗೂಡಿಸುವುದು ಹಾಗೂ ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಯನ್ನು ಸಿದ್ಧಪಡಿಸುವುದು. |
| 2 | **ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿ** | 1) ಸಮಗ್ರ ಯೋಜನೆಯನ್ನು ತಯಾರಿಸಿ, ಕೃಷಿ, ತೋಟಗಾರಿಕೆ ಮತ್ತು ತರಕಾರಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಗ್ರಾಮ ಸಭೆಯೊಂದಿಗೆ ಸಮಾಲೋಚಿಸಿ, ಸಮಗ್ರ ಗ್ರಾಮ ಕೃಷಿ, ತೋಟಗಾ | 1) ಕೃಷಿ ಮತ್ತು ತೋಟಗಾರಿಕಾ ಸಮಗ್ರ ಗ್ರಾಮ ಕೃಷಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಸದರಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್ ಮಟ್ಟದಲ್ಲಿ | 1) ಕೃಷಿ ಮತ್ತು ತೋಟಗಾರಿಕೆಯ ಉತ್ಪಾದನೆಯ ಹೆಚ್ಚಳ, ಮಾರುಕಟ್ಟೆ ಹಾಗೂ ಜೈವಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು |

| | | | | |
|---|---|---|---|---|
| | | ರಿಕೆ ಮತ್ತು ರೇಷ್ಮೆ ಕೃಷಿ ಯೋಜನೆಯನ್ನು ಸಿದ್ಧಪಡಿಸುವುದು ಹಾಗೂ ಅವುಗಳ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು;<br>2) ಇತರ ಬಂಜರು ಭೂಮಿಯೂ ಸೇರಿದಂತೆ, ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಮೇವು ಭೂಮಿಯ (grazing) ಗರಿಷ್ಠ ಬಳಕೆಯನ್ನು ಖಚಿತಪಡಿಸಲು ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಮೇವು ಭೂಮಿಯ (grazing) ಗಳ ಬಂಜರು ಭೂಮಿಗಳ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಅಭಿವೃದ್ಧಿಪಡಿಸುವುದು.<br>3) ಗ್ರಾಮ ಪಂಚಾಯತ್ ನಿಧಿಗಳಿಂದ, ನರ್ಸರಿಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.<br>4) ಕೃಷಿ ಯಾಂತ್ರೀಕರಣಕ್ಕೆ ಸಂಬಂಧಿಸಿದಂತೆ ಯೋಜನೆಯನ್ನು ಸಿದ್ಧಪಡಿಸುವುದು, ಶಿಫಾರಸ್ಸು ಮಾಡುವುದು ಹಾಗೂ ಮೇಲ್ವಿಚಾರಣೆ ಮಾಡುವುದು.<br>5) ಸಮೂಹ ಕೃಷಿ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಳ್ಳುವುದಕ್ಕೆ ಅನುಕೂಲ ಕಲ್ಪಿಸುವುದು.<br>6) ಮಣ್ಣು, ನೀರು ಮತ್ತು ಬೀಜ ಸಂರಕ್ಷಣೆಯ ಮೇಲ್ವಿಚಾರಣೆ ಮಾಡುವುದು.<br>7) ಜಲಾನಯನ ಪ್ರದೇಶದ ನಿರ್ವಹಣೆಯನ್ನು ಕುರಿತು ಮೇಲ್ವಿಚಾರಣೆ ಮಾಡುವುದು.<br>8) ಮಾರುಕಟ್ಟೆ ಧಾರಣೆಯನ್ನು ಪ್ರದರ್ಶಿಸುವುದು.<br>9) ಕಕಜಜಕೃಷಿ ವಿಮಾ ಯೋಜನೆಗಳ ಮೇಲ್ವಿಚಾರಣೆ ಮಾಡುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು. | ಸಾಮಾನ್ಯ ಹಾಗೂ ತಾಂತ್ರಿಕ ತರಬೇತಿಯನ್ನು ಆಯೋಜಿಸುವುದು. ಕೃಷಿ ಮತ್ತು ತೋಟಗಾರಿಕೆಯನ್ನು ಉತ್ತೇಜಿಸುವುದು ಮತ್ತು ಅಭಿವೃದ್ಧಿಪಡಿಸುವುದು.<br>2) ಕೃಷಿ ಬಿತ್ತನೆ ಬೀಜ ಕೇಂದ್ರಗಳನ್ನು (ತೋಟಗಾರಿಕಾ ನರ್ಸರಿಯೂ ಸೇರಿದಂತೆ) ನಿರ್ವಹಿಸುವುದು<br>3) ಕೃಷಿ ಮೇಳಗಳನ್ನು ಏರ್ಪಡಿಸುವುದು, ತರಕಾರಿಗಳನ್ನು, ಹಣ್ಣುಗಳು ಮತ್ತು ಹೂಗಳನ್ನು ಮಾರಾಟ ಮಾಡುವುದು.<br>4) ತಾಂತ್ರಿಕ ಸಿಬ್ಬಂದಿಯ ಮೂಲಕ ತರಬೇತಿಯನ್ನು ನಡೆಸಿ ತಾಂತ್ರಿಕ ಬೆಂಬಲವನ್ನು ಕಲ್ಪಿಸುವುದು ಮತ್ತು ರೈತರಿಗೆ ತರಬೇತಿ ನೀಡಿ ಸುಧಾರಿತ ಸಾಗುವಳಿಯ ವಿಧಾನಗಳನ್ನು ಬಳಸಿಕೊಳ್ಳುವಂತೆ ಪ್ರಸಾರ ಮಾಡುವುದು<br>5) ಉಗ್ರಾಣಗಳು ಮತ್ತು ಶೈತ್ಯ ಸಂಗ್ರಹಣಾಗಾರಗಳನ್ನು ಅವುಗಳ ಅಗತ್ಯದ ಆಧಾರದ ಮೇಲೆ ಸ್ಥಾಪಿಸಲು ಶಿಫಾರಸು ಮಾಡುವುದು, ತಾಲ್ಲೂಕು ಮಟ್ಟದ ಸಹಕಾರಿ ಸಂಘಗಳಿಗೆ ಮತ್ತು ಕೃಷಿ ಮಾರುಕಟ್ಟೆಗೆ ಅನುಕೂಲ ಕಲ್ಪಿಸುವುದು ಹಾಗೂ ತಾಲ್ಲೂಕು ಮಟ್ಟದಲ್ಲಿ ಮೂಲ ಸೌಕರ್ಯವನ್ನು ನಿರ್ವಹಿಸುವುದು.<br>6) ಗ್ರಾಮ ಪಂಚಾಯತ್‌ಗಳು ಸಂಗ್ರಹಿಸಿದ ಅಂಕಿಅಂಶವನ್ನು ಕ್ರೋಢೀಕರಿಸುವುದು ಮತ್ತು ಕೃಷಿ ಉತ್ಪಾದನೆಗೆ ಹಾಗೂ ಮಾರುಕಟ್ಟೆಗೆ ತಾಲ್ಲೂಕು ಮಟ್ಟದ ಯೋಜನೆಗಳನ್ನು ಸಿದ್ಧಪಡಿಸುವುದು.<br>7) ಕ್ರಿಮಿನಾಶಕ ಮತ್ತು ಕೀಟನಾಶಕಗಳನ್ನು ಸಂಗ್ರಹಿಸುವುದು ಮತ್ತು ವಿತರಿಸುವುದು. | 2) ಒಂದಕ್ಕಿಂತ ಹೆಚ್ಚು ತಾಲ್ಲೂಕು ಪಂಚಾಯತಿ ಪ್ರದೇಶವನ್ನು ಒಳಗೊಂಡಿರುವ ಜಲಾನಯನ ಪ್ರದೇಶಗಳಿಗೆ ಸಂಯೋಜಿತ ಜಲಾನಯನ ಪ್ರದೇಶವನ್ನು ನಿರ್ವಹಿಸುವುದು<br>3) ಕೃಷಿ ಮತ್ತು ತೋಟಗಾರಿಕೆ ಫಾರ್ಮ್‌ಗಳು ಹಾಗೂ ವಾಣಿಜ್ಯ ಫಾರ್ಮ್‌ಗಳನ್ನು ಆರಂಭಿಸುವುದು ಮತ್ತು ನಿರ್ವಹಿಸುವುದು<br>4) ಹಣಕಾಸು, ನೀರು, ಬೀಜಗಳು ಮತ್ತು ಗೊಬ್ಬರಗಳಂಥ ಕೃಷಿ ಹೂಡುವಳಿಗಳನ್ನು ಒದಗಿಸುವುದು<br>5) ಗೋದಾಮುಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು<br>6) ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಒದಗಿಸುವುದು, ಕೃಷಿ ಮೇಳಗಳು ಮತ್ತು ಪ್ರದರ್ಶನಗಳನ್ನು ನಡೆಸುವುದು.<br>7) ನೂತನ ಕೃಷಿ ಸಂಬಂಧಿತ ಸಂಶೋಧನೆಗಳು ಮತ್ತು ಪ್ರಾಯೋಗಿಕ (Pilot) ಯೋಜನೆಗಳನ್ನು ಜನಪ್ರಿಯಗೊಳಿಸುವುದಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br>8) ಸ್ಥಳೀಯ ಮಟ್ಟಕ್ಕೆ ಸೂಕ್ತವಾದ ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವುದು.<br>9) ಕೃಷಿ ಮತ್ತು ತೋಟಗಾರಿಕಾ ವಿಸ್ತರಣೆ ಹಾಗೂ ತರಬೇತಿ ಕೇಂದ್ರಗಳನ್ನು ನಿರ್ವಹಿಸುವುದು.<br>10) ಸರ್ಕಾರ ವಹಿಸಿರುವ ಭೂ ಸುಧಾರಣೆ ಮತ್ತು ಭೂಸಾರ ಸಂರಕ್ಷಣೆಯ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು<br>11) ಕೃಷಿಕರಿಗೆ ತರಬೇತಿಯನ್ನು ನೀಡುವುದು. |

| | | | | |
|---|---|---|---|---|
| 3 | **ಸಣ್ಣ ನೀರಾವರಿ** | 1) ಗ್ರಾಮ ಪಂಚಾಯತ್ ಪ್ರದೇಶದ ಒಳಗಿರುವ 0 – 10 ಹೆಕ್ಟೇರುಗಳವರೆಗಿನ ಅಚ್ಚುಕಟ್ಟು ಪ್ರದೇಶದಲ್ಲಿರುವ ಎಲ್ಲಾ ಸಣ್ಣ ನೀರಾವರಿ ಯೋಜನೆಗಳನ್ನು ಸಿದ್ಧಪಡಿಸುವುದು, ನಿರ್ಮಿಸುವುದು, ನವೀಕರಿಸುವುದು ಮತ್ತು ನಿರ್ವಹಿಸುವುದು.<br>2) ಗ್ರಾಮ ಪಂಚಾಯತ್ ಮಟ್ಟದಲ್ಲಿ ಇರುವ, 0 – 10 ಹೆಕ್ಟೇರುಗಳವರೆಗಿನ ಅಚ್ಚುಕಟ್ಟು ಪ್ರದೇಶದಲ್ಲಿರುವ ಅಂತಹ ಎಲ್ಲಾ ಸಣ್ಣ/ಕಿರು ನೀರಾವರಿ ಯೋಜನೆಗಳನ್ನು ಸಕಾಲಿಕವಾಗಿ ನಿರ್ವಹಿಸುವುದು ಮತ್ತು ಅನುಷ್ಠಾನಗೊಳಿಸುವುದು ಹಾಗೂ ಲಭ್ಯ ನೀರನ್ನು ಸಮನಾಗಿ ಹಂಚಿಕೆ ಮಾಡುವುದು ಮತ್ತು ಸಂಪೂರ್ಣವಾಗಿ ಬಳಸಿಕೊಳ್ಳುವುದು.<br>3) ಅಂತರ್ಜಲದ ಮರುಪೂರಣ ಮತ್ತು ಮಳೆ ನೀರು ಕೊಯ್ಲಿಗೆ ಸಂಬಂಧಿಸಿದ ಯೋಜನೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು.<br>4) ಗ್ರಾಮಪಂಚಾಯತ್ ಪ್ರದೇಶದಲ್ಲಿ ಇರುವ ಎಲ್ಲಾ ನೀರಾವರಿ ಮೂಲಗಳ ನಕ್ಷೆ ರೂಪಿಸುವುದನ್ನು ಒಳಗೊಂಡಂತೆ ಅವುಗಳ ದಾಖಲೆಗಳನ್ನು ನಿರ್ವಹಿಸುವುದು. | 1) ಸಣ್ಣ ನೀರಾವರಿ ಕಾಮಗಾರಿಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಸರ್ಕಾರಕ್ಕೆ ಮತ್ತು ಜಿಲ್ಲಾ ಪಂಚಾಯತಿಗೆ ನೆರವು ನೀಡುವುದು;<br>2) *ಸಮೂಹ ಮತ್ತು ವೈಯಕ್ತಿಕ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು. | 1) ಅಂತರ್ಜಲ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.<br>2) 40 ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಪ್ರದೇಶಕ್ಕೆ ಸಣ್ಣ ನೀರಾವರಿ ಯೋಜನೆಯನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು. |
| 4 | **ಪಶುಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ ಮತ್ತು ಮೀನುಗಾರಿಕೆ** | 1) ಗ್ರಾಮ ಪಂಚಾಯತ್‌ಗೆ ವಹಿಸಿಕೊಟ್ಟಿರುವ ಹೈನುಗಾರಿಕೆ, ಕೋಳಿಸಾಕಾಣಿಕೆ, ಹಂದಿ ಸಾಕಾಣಿಕೆ ಮತ್ತು ಕುರಿ ಸಾಕಾಣಿಕೆ ಫಾರ್ಮ್‌ಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.<br>2) ಗ್ರಾಮ ಪಂಚಾಯತ್‌ಗೆ ವಹಿಸಿಕೊಟ್ಟಿರುವ ಜಾನುವಾರು–ಅಭಿವೃದ್ಧಿ ಸ್ಕೀಮುಗಳನ್ನು ಅನುಷ್ಠಾನಗೊಳಿಸುವುದು. | 1) ತಾಲ್ಲೂಕು ಮಟ್ಟದಲ್ಲಿ ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರಗಳ, ಪ್ರಥಮ ಚಿಕಿತ್ಸಾ ಕೇಂದ್ರಗಳ ಮತ್ತು ಸಂಚಾರಿ ಪಶುವೈದ್ಯಕೀಯ ಚಿಕಿತ್ಸಾಲಯಗಳ ನಿರ್ವಹಣೆ.<br>2) ಸಾಂಕ್ರಾಮಿಕ ರೋಗಗಳನ್ನು ಹಾಗೂ ಅಂಟು ರೋಗಗಳನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಗ್ರಾಮ ಪಂಚಾಯತ್‌ಗಳಿಗೆ ಚುಚ್ಚುಮದ್ದುಗಳನ್ನು, | 1) ಸಾಂಕ್ರಾಮಿಕ ಮತ್ತು ಸೋಂಕು ರೋಗಗಳನ್ನು ತಡೆಯುವುದು<br>2) ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಪಶುವೈದ್ಯಕೀಯ ಪ್ರಯೋಗಾಲಯಗಳು, ಚಿಕಿತ್ಸಾಲಯಗಳನ್ನು ಹಾಗೂ ಸಂಚಾರಿ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದು.<br>3) ತಾಲ್ಲೂಕು ಮತ್ತು ಗ್ರಾಮ ಪಶುವೈದ್ಯಕೀಯ ಆಸ್ಪತ್ರೆ, ಪ್ರಥಮ ಚಿಕಿತ್ಸಾ ಕೇಂದ್ರಗಳು ಮತ್ತು ಸಂಚಾರಿ |

| | | | | |
|---|---|---|---|---|
| | | 3) ಸಾಂಕ್ರಾಮಿಕ ರೋಗಗಳ ಮತ್ತು ಅಂಟುರೋಗಗಳ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದು.<br>4) ಗ್ರಾಮ ಪಂಚಾಯತ್‌ಗಳ ಅಧೀನದಲ್ಲಿ ಬರುವ ನೀರಾವರಿ ಕಾಮಗಾರಿಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.<br>5) ಗ್ರಾಮೀಣ ಮೀನು ಮತ್ತು ಮಾಂಸದ ಮಾರುಕಟ್ಟೆಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು.<br>6) ಹುಲ್ಲುಗಾವಲು (grass land) ಮೇವು ಅಭಿವೃದ್ಧಿಪಡಿಸುವುದು. | ಔಷಧಿಗಳನ್ನು ಒದಗಿಸುವುದು ಮತ್ತು ವೈದ್ಯಕೀಯ ನೆರವನ್ನು ಒದಗಿಸುವುದು.<br>3) ಕೃಷಿಕರಿಗೆ ತಾಂತ್ರಿಕತಜ್ಞರ ನೆರವನ್ನು ಒದಗಿಸುವುದು ಮತ್ತು ತರಬೇತಿಗಳನ್ನು ಆಯೋಜಿಸುವುದು.<br>4) ಜಾನುವಾರು, ಕೋಳಿ ಸಾಕಣಿಕೆ ಮತ್ತು ಇತರೆ ಪಶುಗಳ ತಳಿಗಳನ್ನು ಸುಧಾರಿಸುವುದು.<br>5) ಪಶುಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಣೆ ಮತ್ತು ಮೀನುಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಹಕಾರಿ ಸಂಘಗಳಿಗೆ ಉತ್ತೇಜನ ನೀಡುವುದು. | ಪಶುವೈದ್ಯಕೀಯ ಔಷಧಾಲಯಗಳನ್ನು ಸ್ಥಾಪಿಸುವುದು.<br>4) ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು.<br>5) ಕೃಷಿಕರಿಗೆ ಜಿಲ್ಲಾಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br>6) ಔಷಧಗಳು, ಔಷಧೋಪಕರಣಗಳು ಮತ್ತು ಚುಚುಮದ್ದುಗಳನ್ನು ಒದಗಿಸುವುದು.<br>7) ಜಿಲ್ಲಾ ಪಂಚಾಯಿತಿಯ ಅಧೀನದಲ್ಲಿ ಬರುವ ನೀರಾವರಿ ಕಾಮಗಾರಿಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು.<br>8) ಮೀನುಗಾರಿಕೆ ಮತ್ತು ಮೀನುಗಾರರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.<br>9) ಹೈನುಗಾರಿಕೆ, ಕೋಳಿ ಸಾಕಾಣಿಕೆ ಮತ್ತು ಹಂದಿ ಸಾಕಾಣಿಕೆಗೆ ಉತ್ತೇಜಿಸುವುದು. |
| 5 | **ಸಾಮಾಜಿಕ ಅರಣ್ಯ** | 1) ಬಂಜರು ಭೂಮಿಯ ಅರಣ್ಯೀಕರಣ<br>2) ಸಾಮಾಜಿಕ ಅರಣ್ಯ, ಕೃಷಿ ಅರಣ್ಯಗಳನ್ನು (farm forestry) ಅಭಿವೃದ್ಧಿಪಡಿಸುವುದು, ಸಾಮಾಜಿಕ ಅರಣ್ಯದ ಉತ್ಪನ್ನಗಳ ಮಾರಾಟ ಸಂಸ್ಥೆಯನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಅವುಗಳನ್ನು ವಿಲೆ ಮಾಡುವುದು.<br>3) ದನಗಳ ಮೇವಿಗೆ, ಉರುವಲಿಗೆ ಬೇಕಾಗುವ ಮರಗಳನ್ನು ಬೆಳೆಸುವುದು ಮತ್ತು ಹಣ್ಣಿನ ಮರಗಳನ್ನು ಬೆಳೆಸುವುದು.<br>4) ಕೃಷಿ ಅರಣ್ಯ ಸ್ಕೀಮನ್ನು ಜಾರಿಗೊಳಿಸುವುದು.<br>5) ನರ್ಸರಿಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು.<br>6) ಮೀಸಲು ಅರಣ್ಯ, ಸಂರಕ್ಷಿತ ಅರಣ್ಯ, ಮತ್ತು ವನ್ಯ ಜೀವಿಗಳ ಸಂರಕ್ಷಿತ ಪ್ರದೇಶದಲ್ಲಿರುವ ಅರಣ್ಯ | 1) ತನ್ನ ನಿಯಂತ್ರಣದ ಅಧೀನದಲ್ಲಿ ಬರುವ ರಸ್ತೆ ಬದಿಗಳಲ್ಲಿ ಮತ್ತು ಇತರ ಸಾರ್ವಜನಿಕ ಜಮೀನಿನಲ್ಲಿ ಗಿಡಮರಗಳನ್ನು ಬೆಳೆಸುವುದು ಮತ್ತು ಅವುಗಳನ್ನು ನಿರ್ವಹಿಸುವುದು.<br>2) ಗ್ರಾಮ ಪಂಚಾಯತ್‌ಗಳಿಗೆ ಅಗತ್ಯವಿರುವ ಸಸಿಗಳನ್ನು ಬೆಳೆಸುವುದು ಮತ್ತು ಸಸಿಗಳು ಹಾಗೂ ಬೀಜಗಳನ್ನು ವಿತರಿಸುವುದು.<br>3) ಗ್ರಾಮ ಪಂಚಾಯತ್‌ಗಳಿಗೆ ಮೇವು ಅಭಿವೃದ್ಧಿ ಮತ್ತು ಇಂಧನ ಸ್ಥಾವರ ತಾಂತ್ರಿಕ ಜ್ಞಾನವನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ತರಬೇತಿಗಳನ್ನು, ಕಾರ್ಯಾಗಾರಗಳನ್ನು ಆಯೋಜಿಸುವುದು. | 1) ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಉಪಯೋಗಕ್ಕಾಗಿ ಸಾಮಾಜಿಕ ಅರಣ್ಯ ಮತ್ತು ಜೈವಿಕ ವೈವಿಧ್ಯತೆ ನಿರ್ವಹಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರಚಿಸುವುದು.<br>2) ಸಾಮಾಜಿಕ ಮತ್ತು ಕೃಷಿ ಅರಣ್ಯ, ಇಂಧನ ಸ್ಥಾವರ ಮತ್ತು ಮೇವು ಅಭಿವೃದ್ಧಿಯನ್ನು ಉತ್ತೇಜಿಸುವುದು.<br>3) ಸಮುದಾಯ ಭೂಮಿಯಲ್ಲಿ ಬೆಳೆದ ಸಣ್ಣ ಅರಣ್ಯ ಉತ್ಪನ್ನಗಳನ್ನು ನಿರ್ವಹಿಸುವುದು.<br>4) ಖರಾಬು ಭೂಮಿಯನ್ನು ಅಭಿವೃದ್ಧಿ ಪಡಿಸುವುದು. |

| | | | | |
|---|---|---|---|---|
| | | ಉತ್ಪನ್ನಗಳ ಹೊರತುಪಡಿಸಿ ಸಣ್ಣ ಅರಣ್ಯ ಪ್ರದೇಶಗಳ ಉತ್ಪನ್ನಗಳನ್ನು ನಿರ್ವಹಿಸುವುದು.<br>7) ಸಾಮಾಜಿಕ ಅರಣ್ಯ ನಿರ್ಮಾಣ ಮತ್ತು ಕೃಷಿ ಅರಣ್ಯ ನಿರ್ಮಾಣ ಬೆಳೆಸಲು ಯೋಜನೆ (ಪ್ರಾಜೆಕ್ಟ್)ಗಳನ್ನು ರೂಪಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು.<br>8) ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ರಸ್ತೆಯ ಬದಿಯಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಮರಗಳನ್ನು ನೆಡುವುದು ಮತ್ತು ಅವುಗಳನ್ನು ಸಂರಕ್ಷಿಸುವುದು. | | |
| 6 | **ಪ್ರವಾಸೋದ್ಯಮ** | 1) ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಪ್ರವಾಸಿ ತಾಣಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವಗಳನ್ನು ಸಲ್ಲಿಸುವುದು.<br>2) ಪ್ರವಾಸೋದ್ಯಮದ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಿಕೊಡುವುದು.<br>3) ಗ್ರಾಮ ಪಂಚಾಯತ್‌ಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು<br>4) ಭಾರತ ಪುರಾತನ ಸರ್ವೇಕ್ಷಣಾ ಇಲಾಖೆ ಅಥವಾ ಇತರ ಸ್ಥಳೀಯ ಪ್ರಾಧಿಕಾರಗಳು ಅಥವಾ ಸರ್ಕಾರಿ ಇಲಾಖೆಗಳು ನಿರ್ವಹಿಸುತ್ತಿರುವ ಪ್ರವಾಸಿ ತಾಣಗಳನ್ನು ಹೊರತುಪಡಿಸಿ ಇನ್ನಿತರ ಪ್ರವಾಸಿ ತಾಣಗಳಲ್ಲಿ ಪ್ರವೇಶ ಶುಲ್ಕವನ್ನು ಮತ್ತು ವಾಹನ ನಿಲುಗಡೆ ಶುಲ್ಕಗಳನ್ನು ಸಂಗ್ರಹಿಸುವುದು. | 1) ತಾಲ್ಲೂಕುಗಳಲ್ಲಿರುವ ಗ್ರಾಮ ಪಂಚಾಯತ್‌ಗಳ ಒಳಗಡೆ ಪ್ರವಾಸಿ ತಾಣಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾವಗಳನ್ನು ರೂಪಿಸುವುದು.<br>2) ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು.<br>3) ತಾಲ್ಲೂಕು ಪಂಚಾಯತ್‌ಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಕೇಂದ್ರಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು.<br>4) ತಾಲ್ಲೂಕು ಪಂಚಾಯತ್‌ಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಆಕರ್ಷಣೆ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು ಮತ್ತು ನಿರ್ವಹಿಸುವುದು. | 1) ಜಿಲ್ಲೆಗಳ ವಿವಿಧ ತಾಲ್ಲೂಕುಗಳಲ್ಲಿರುವ ಪ್ರವಾಸಿ ತಾಣಗಳನ್ನು ಗುರುತಿಸುವುದು ಮತ್ತು ಅಭಿವೃದ್ಧಿಪಡಿಸುವುದು.<br>2) ಜಿಲ್ಲಾ ಪ್ರವಾಸೋದ್ಯಮ ನೀತಿಯನ್ನು ಮತ್ತು ಪ್ರವಾಸೋದ್ಯಮ ಚಟುವಟಿಕೆಗಳನ್ನು ರೂಪಿಸುವುದು.<br>3) ಪ್ರವಾಸಿ ಕೇಂದ್ರಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು.<br>4) ಅವುಗಳಿಗೆ ವಹಿಸಿಕೊಟ್ಟಿರುವ ಪ್ರವಾಸೋದ್ಯಮ ಆಕರ್ಷಣೆಗಳನ್ನು ಆರಂಭಿಸುವುದು ಮತ್ತು ನಿರ್ವಹಿಸುವುದು.<br>5) ತಾಲ್ಲೂಕುಗಳಲ್ಲಿರುವ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಮಾರ್ಗದರ್ಶಕರು, ಹಸಿರು ಪೊಲೀಸ್, ಕಾವಲು ವ್ಯವಸ್ಥೆ, ಜೀವ ರಕ್ಷಕರುಗಳನ್ನು ನಿಯೋಜಿಸುವುದು ಮತ್ತು ಅವುಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಕೇಂದ್ರಗಳಲ್ಲಿ ಪ್ರವೇಶ ಶುಲ್ಕಗಳು, ವಾಹನ ನಿಲುಗಡೆ ಶುಲ್ಕಗಳನ್ನು ಸಂಗ್ರಹಿಸುವುದು. |
| 7 | **ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗ್ರಾಮೀಣ** | 1) ಗುಡಿ ಕೈಗಾರಿಕೆಗಳಿಗೆ ಮತ್ತು ಖಾದಿ ಕೈಗಾರಿಕೆಗಳಿಗೆ, ಕರಕುಶಲ ಕಲೆಗಳಿಗೆ, ಗ್ರಾಮೋದ್ಯೋಗಗಳಿಗೆ, ಆಹಾರ ಸಂಸ್ಕರಣಾ ಕೈಗಾರಿಕೆಗಳಿಗೆ ಹಾಗೂ ಇತರ | 1) ಗುಡಿ ಕೈಗಾರಿಕೆ ಮತ್ತು ಖಾದಿ ಉದ್ಯಮಗಳು, ಕರಕುಶಲ ಕಲೆಗಳು, ಗ್ರಾಮೀಣ ಕೈಗಾರಿಕೆಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು ಮತ್ತು ಇತರ | 1) ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಪಟ್ಟ ವ್ಯವಸ್ಥೆಯನ್ನು (ಟಜಭಿಚಿಟಘಟ) ಸ್ಥಾಪಿಸುವುದು.<br>2) ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು |

| | | | | |
|---|---|---|---|---|
| | **ಕೈಗಾರಿಕೆಗಳು – ಖಾದಿ, ಕರಕುಶಲ ಕಲೆಗಳು, ಗ್ರಾಮೋದ್ಯೋಗಗಳು, ಹಾಗೂ ಆಹಾರ ಸಂಸ್ಕರಣಾ ಕೈಗಾರಿಕೆಗಳು** | ಕೃಷಿಯೇತರ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು.<br>2) ಪ್ರದರ್ಶನ, ಮಾರುಕಟ್ಟೆ ಸೌಲಭ್ಯವನ್ನು ವ್ಯವಸ್ಥೆಗೊಳಿಸುವುದು.<br>3) ಗುಡಿ ಕೈಗಾರಿಕೆಗಳಿಗೆ ಮತ್ತು ಖಾದಿ ಕೈಗಾರಿಕೆಗಳಿಗೆ, ಕರಕುಶಲ ಕಲೆಗಳಿಗೆ, ಗ್ರಾಮೋದ್ಯೋಗಗಳಿಗೆ, ಆಹಾರ ಸಂಸ್ಕರಣಾ ಕೈಗಾರಿಕೆಗಳಿಗೆ ರಾಜ್ಯ ಸಮಿತಿಗಳ ಮತ್ತು ಅಖಿಲ ಭಾರತ ಸಮಿತಿಗಳ ಸ್ಕೀಮುಗಳನ್ನು ರೂಪಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು.<br>4) ಲಭ್ಯವಿರಬಹುದಾದ ಖಚ್ಚಾ ಸಾಮಗ್ರಿಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳಿಗೆ ಸಂಬಂಧಿಸಿದ ಮಾಹಿತಿ ದತ್ತಾಂಶವನ್ನು ಸಂಗ್ರಹಿಸುವುದು.<br>5) ಮಾರುಕಟ್ಟೆ ಸಮೀಕ್ಷೆ ನಡೆಸುವುದು ಮತ್ತು ಜನರಲ್ಲಿ ಮಾಹಿತಿ ಪ್ರಸಾರ ಮಾಡುವುದು.<br>6) ಆಹಾರ ಸಂಸ್ಕರಣೆ ಮತ್ತು ಉತ್ಪನ್ನ ಮಾರಾಟ ಚಟುವಟಿಕೆಗಳನ್ನು ಉತ್ತೇಜಿಸುವುದು. | ಕೃಷಿಯೇತರ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ನೆರವು ನೀಡಿಕೆಯ ಕಾರ್ಯತಂತ್ರ ವ್ಯವಸ್ಥೆಯನ್ನು ಸ್ಥಾಪಿಸುವುದು.<br>2) ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.<br>3) ಅತಿ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವುದು.<br>4) ಸ್ವಯಂ ಉದ್ಯೋಗ ಯೋಜನೆಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.<br>5) ಗ್ರಾಮ ಪಂಚಾಯತ್ ಸಮುಚ್ಚಯಗಳಿಗೆ (ಕ್ಲಸ್ಟರುಗಳಿಗೆ) ಅಥವಾ ಗ್ರಾಮಪಂಚಾಯತ್‌ಗಳ ಗುಂಪುಗಳಿಗೆ ಪರಿಕರ ಸೇವಾ ಕೇಂದ್ರಗಳನ್ನು ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಸೃಜಿಸುವುದು.<br>6) ಸಮುಚ್ಚಯ(ಕ್ಲಸ್ಟರ್) ಮಟ್ಟದ ಸಾಮಾನ್ಯ ಸೌಲಭ್ಯ ಕೇಂದ್ರಗಳಿಗೆ ಹಣಕಾಸಿನ ನೆರವನ್ನು ಒದಗಿಸುವುದು<br>7) ಬ್ಲಾಕ್‌ನಲ್ಲಿ ಅಥವಾ ಹೋಬಳಿ ಮಟ್ಟದಲ್ಲಿ ಇರುವ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ನಿರ್ವಹಿಸುವುದು | ಪಂಚಾಯತಿ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ತಾಂತ್ರಿಕ ಜ್ಞಾನ ಮತ್ತು ಸಂಬಂಧಿತ ಇತರ ಉಪಯುಕ್ತ ಕೌಶಲ್ಯಗಳು ಹಾಗೂ ತಿಳುವಳಿಕೆಯನ್ನು ಒದಗಿಸುವುದು.<br>3) ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು.<br>4) ಗುಡಿ ಕೈಗಾರಿಕೆಗಳು, ಖಾದಿ, ಗ್ರಾಮೋದ್ಯೋಗಗಳು ಮತ್ತು ಕರಕುಶಲಕಲೆಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು.<br>5) ಗ್ರಾಮೋದ್ಯೋಗಗಳು ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯ ಸಮಿತಿಗಳು ಮತ್ತು ಅಖಿಲ ಭಾರತ ಸಮಿತಿಗಳು ಹಾಗೂ ಆಯೋಗಗಳ ಸ್ಕೀಮುಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಸಂಪರ್ಕ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು.<br>6) ಜಿಲ್ಲಾ ಮಟ್ಟದ ಉದ್ಯಮಶೀಲತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br>7) ಖಾದಿ ಮತ್ತು ಗ್ರಾಮೋದ್ಯೋಗಗಳು ಹಾಗೂ ಆಹಾರ ಸಂಸ್ಕರಣಾ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಪತ್ತಿನ ಯೋಜನೆಗಳನ್ನು ರೂಪಿಸುವುದು ಹಾಗೂ ಅನುಷ್ಠಾನಗೊಳಿಸುವುದು.<br>8) ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದ ರಾಜ್ಯ ಸಮಿತಿಗಳು ಮತ್ತು ಅಖಿಲ ಭಾರತ ಸಮಿತಿಗಳು ಹಾಗೂ ಆಯೋಗಗಳ ಸ್ಕೀಮುಗಳನ್ನು ಅನುಷ್ಠಾನಗೊಳಿಸುವುದು. |
| 8 | **ಗ್ರಾಮೀಣ ವಸತಿ** | 1) ವಸತಿರಹಿತ ಮತ್ತು ನಿವೇಶನರಹಿತ ಜನರನ್ನು ಹಾಗೂ ವಲಸೆ ಕಾರ್ಮಿಕರನ್ನು ಗುರುತಿಸುವುದು. | 1) ಗ್ರಾಮಠಾಣಾ ಎಲ್ಲೆಗಳ ಹೊರಗೆ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಮತ್ತು | ಜಿಲ್ಲಾ ಮಟ್ಟದ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು. |

| | | | | |
|---|---|---|---|---|
| | | 2) ಮೀನುಗಾರರ ವಸತಿ ಸ್ಕೀಮುಗಳನ್ನು ಒಳಗೊಂಡಂತೆ ಎಲ್ಲಾ ಗ್ರಾಮೀಣ ವಸತಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಭಾಗವಹಿಸುವುದು.<br>3) ವಸತಿ ಮೇಲ್ದರ್ಜೀಕರಣ ಸ್ಕೀಮಿನ ಅನುಷ್ಠಾನದಲ್ಲಿ ಭಾಗವಹಿಸುವುದು.<br>4) ಋತುಮಾನದ ವಲಸೆ ಕಾರ್ಮಿಕರಿಗೆ ಋತುಮಾನದ ವಲಸೆ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವುದು.<br>5) ಗ್ರಾಮೀಣ ವಸತಿ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು.<br>6) ಸರ್ಕಾರಿ ಭೂಮಿಯನ್ನು ಗುರುತಿಸುವುದು ಮತ್ತು ಬಡಾವಣೆಗಳ ಅಭಿವೃದ್ಧಿಗಾಗಿ, ವಸತಿ ರಹಿತರಿಗೆ ವಸತಿ ನಿವೇಶನಗಳನ್ನು ವಿತರಿಸುವುದಕ್ಕೆ ಸಂಬಂಧಿಸಿದಂತೆ ನಿವೇಶನ ಹಂಚಿಕೆಗಾಗಿ ಅಥವಾ ನಿವೇಶನ ಮೀಸಲಾತಿಗಾಗಿ ಜಿಲ್ಲಾಧಿಕಾರಿಗೆ ಶಿಫಾರಸ್ಸು ಮಾಡುವುದು.<br>7) ಸರ್ಕಾರವು ನೀಡಿದ ಅಧಿಕಾರಗಳ ಪ್ರಕಾರ ಗ್ರಾಮೀಣ ವಸತಿ ಮತ್ತು ಬಡಾವಣೆ ಯೋಜನೆಗಳನ್ನು ಮಂಜೂರು ಮಾಡುವುದು. | ನಿವೇಶನಗಳನ್ನು ವಿತರಿಸುವುದು.<br>2) ಕಡಿಮೆ ವೆಚ್ಚದ ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ಸಮರ್ಪಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅವುಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಪ್ರಚುರಪಡಿಸುವುದು.<br>3) ಗ್ರಾಮ ಪಂಚಾಯತ್‌ಗಳಿಗೆ ತಾಂತ್ರಿಕ ನೆರವನ್ನು ಮತ್ತು ಪರಿಕರಗಳನ್ನು ಒದಗಿಸುವುದು.<br>4) ತಾಲ್ಲೂಕು ಮಟ್ಟದ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು | |
| 9 | **ಕುಡಿಯುವ ನೀರಿನ ಪೂರೈಕೆ** | 1) ನೀರಿನ ಗುಣಮಟ್ಟ ಮತ್ತು ಅದರ ವ್ಯಾಪ್ತಿ ಕುರಿತು ಅಗತ್ಯ ದತ್ತಾಂಶ, ಮಾಹಿತಿ ಸಂಗ್ರಹಿಸುವುದು ಹಾಗೂ ಆ ಕುರಿತು ಯೋಜನೆ ಸಿದ್ಧಪಡಿಸುವುದು.<br>2) ಗ್ರಾಮಪಂಚಾಯತಿಗಳ ವ್ಯಾಪ್ತಿಯೊಳಗಿನ ನೀರು ಸರಬರಾಜು ಸ್ಕೀಮುಗಳನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.<br>3) ಜಲಮಾಲಿನ್ಯದ ನಿಯಂತ್ರಣ, ರಕ್ಷಣೆ ಮತ್ತು ತಡೆಗಟ್ಟುವಿಕೆ<br>4) ಸಾಂಪ್ರದಾಯಿಕ ಕುಡಿಯುವ ಜಲಮೂಲಗಳ ನಿರ್ವಹಣೆ | 1) ನೀರನ್ನು ಮಲಿನಗೊಳಿಸುವುದನ್ನು ತಡೆಯುವುದು ಮತ್ತು ನಿಯಂತ್ರಿಸುವುದು.<br>2) ಗ್ರಾಮ ಪಂಚಾಯತ್‌ಗಳಿಗೆ ಹೊರಗೆ ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.<br>3) ಕುಡಿಯುವ ನೀರು ಪೂರೈಕೆಯ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಗ್ರಾಮ ಪಂಚಾಯತಿಗಳಿಗೆ ಪರಿಕರಗಳನ್ನು ಮತ್ತು ತಾಂತ್ರಿಕ ನೆರವನ್ನು ಒದಗಿಸುವುದು. | 1) ಕುಡಿಯುವ ನೀರು ಪೂರೈಕೆ ಯೋಜನೆಗಳು ಅಥವಾ ಬಹು ತಾಲ್ಲೂಕು ಕುಡಿಯುವ ನೀರು ಪೂರೈಕೆ ಯೋಜನೆಗಳನ್ನು ಸ್ಥಾಪಿಸುವುದು.<br>2) ಕುಡಿಯುವ ನೀರು ಪರೀಕ್ಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸುವುದು.<br>3) ನೀರು ಪೂರೈಕೆ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಹಣಕಾಸು ನೆರವು ನೀಡುವುದು. |

| | | | | |
|---|---|---|---|---|
| | | 5) ಪರೀಕ್ಷೆಗಾಗಿ ಕುಡಿಯುವ ನೀರಿನ ಮೂಲಗಳಿಂದ ನೀರಿನ ಮಾದರಿಯ ಸಂಗ್ರಹಣೆ<br>6) ಕುಡಿಯುವ ನೀರಿನ ಮೂಲಗಳ ನಿಯತಕಾಲಿಕ ಶುದ್ಧೀಕರಣ<br>7) ಬಳಕೆದಾರರ ಶುಲ್ಕಗಳನ್ನು ಸಂಗ್ರಹಿಸುವ ಮೂಲಕ ಮನೆಗಳಿಗೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ನಲ್ಲಿ ನೀರನ್ನು ಒದಗಿಸುವುದು<br>8) ನೀರು ಶುದ್ಧೀಕರಣ ಘಟಕಗಳ ಸ್ಥಾಪನೆ ಮತ್ತು ನಿರ್ವಹಣೆ<br>9) ಅಂತರ್ಜಲ ದುರ್ಬಳಕೆಯ ನಿಯಂತ್ರಣಕ್ಕೆ ಪ್ರಾಧಿಕಾರಗಳಿಗೆ ನೆರವು ನೀಡುವುದು. | | |
| 10 | **ಪಟ್ಟಣ ಮತ್ತು ಗ್ರಾಮಾಂತರ ಯೋಜನೆಗಳು ಮತ್ತು ಲೋಕೋಪಯೋಗಿ ಕಾಮಗಾರಿಗಳು (ರಸ್ತೆಗಳು, ಸೇತುವೆಗಳು ಹಾಯ್ಗಡಗಳು, ಜಲಮಾರ್ಗಗಳು ಮತ್ತು ಇತರ ಸಂಪರ್ಕ ಕಲ್ಪಿಸುವ ಮಾರ್ಗಗಳು)** | 1) ಈ ಕೆಳಗಿನ ನಿರ್ಮಿತಿಗಳಿಗಾಗಿ ಯೋಜನೆ ರೂಪಿಸುವುದು, ಅವುಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು:<br>(ಎ) ಪಾದಚಾರಿ ಮಾರ್ಗಗಳು/ಓಣಿಗಳು<br>(ಬಿ) ಗ್ರಾಮ ರಸ್ತೆಗಳು<br>(ಸಿ) ಸೇತುವೆಗಳು, ಮೋರಿಗಳು,<br>(ಡಿ) ಕಟ್ಟಡಗಳು<br>(ಇ) ಚರಂಡಿಗಳು<br>(ಎಫ್) ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಎಂಡಿಆರ್‌ಗಳನ್ನು ಅಥವಾ ಇತರ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಸರ್ಕಾರಿ ಇಲಾಖೆಗಳಿಗೆ ವಹಿಸಿಕೊಟ್ಟಂಥ ನಿರ್ಮಿತಿಗಳನ್ನು ಹೊರುತುಪಡಿಸಿ ಇತರ ನಿರ್ಮಿತಿಗಳು.<br>2) ಈ ಕೆಳಗಿನವುಗಳನ್ನು ನಿರ್ಮಿಸುವುದು ಹಾಗೂ | 1) ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರದ ಬಹು ಗ್ರಾಮ ಪಂಚಾಯತ್ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ<br>(ಎ) ರಸ್ತೆಗಳು<br>(ಬಿ) ಪಾದಚಾರಿ ಮಾರ್ಗಗಳಿಗೆ/ ಓಣಿಗಳಿಗೆ<br>(ಸಿ) ತಾಲ್ಲೂಕು ರಸ್ತೆಗಳಿಗೆ<br>(ಡಿ) ಸೇತುವೆಗಳಿಗೆ/ಸುರಂಗ ಕಾಲುವೆಗಳಿಗೆ (ಕಲ್ವರ್ಟ್ಸ್)<br>(ಇ) ಕಟ್ಟಡಗಳಿಗೆ<br>(ಎಫ್) ಚರಂಡಿಗಳಿಗೆ<br>(ಜಿ) ರಾಜ್ಯ ಅಥವಾ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಇತರ ಸ್ಥಳೀಯ ಪ್ರಾಧಿಕಾರಗಳ ನಿಯಂತ್ರಣದ ಅಡಿಯಲ್ಲಿ ಬಾರದಿರುವುದು | 1) ಯಾವುದೇ ಇತರ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ನಿಯಂತ್ರಣದ ಅಡಿಯಲ್ಲಿ ಬರದಿರುವಂಥ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಹೆದ್ದಾರಿಗಳು ಹಾಗೂ ಬಹುಜಿಲ್ಲಾ ರಸ್ತೆಗಳು (ಎಂಆರ್‌ಡಿಗಳು), ಸೇತುವೆಗಳು, ಸುರಂಗ ಕಾಲುವೆಗಳನ್ನು, ಹೊರತುಪಡಿಸಿ, ಒಂದಕ್ಕಿಂತ ಹೆಚ್ಚು ತಾಲ್ಲೂಕುಗಳ ಮೂಲಕ ಹಾದುಹೋಗುವ ಅಂಥ ತಾಲ್ಲೂಕುಗಳಿಗೆ ಸಂಬಂಧಪಟ್ಟಿರುವ ಎಲ್ಲಾ ಜಿಲ್ಲಾ ರಸ್ತೆಗಳ ಸಂಬಂಧದಲ್ಲಿ ಯೋಜನೆ ರೂಪಿಸುವುದು, ನಿರ್ಮಾಣ ಮಾಡುವುದು ಮತ್ತು ನಿರ್ವಹಿಸುವುದು.<br>2) ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳು ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ತಂತ್ರಜ್ಞಾನವನ್ನು ಒದಗಿಸುವುದು.<br>3) ಗ್ರಾಮಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕೋರಿಕೆಯ ಮೇರೆಗೆ ತಾಂತ್ರಿಕ, ವಿನ್ಯಾಸಗಳನ್ನು ಹೊಸ ತಂತ್ರಜ್ಞಾನಗಳನ್ನು |

| | | | | |
|---|---|---|---|---|
| | | ನಿರ್ವಹಿಸುವುದು<br>ಎ. ಪ್ರಯಾಣಿಕರ ತಂಗುದಾಣಗಳು/ವಾಹನ ನಿಲುಗಡೆ ಸ್ಥಳಗಳು<br>ಬಿ. ಆಟದ ಮೈದಾನಗಳು<br>3) ಎಲ್ಲಾ ವಿಧದ ಸ್ಮಶಾನ ಭೂಮಿ/ಸಮಾಧಿ ಭೂಮಿಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು, ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ಎಲ್ಲಾ ಸ್ಮಶಾನ ಭೂಮಿ/ಸಮಾಧಿ ಭೂಮಿಗಳ ಬಳಕೆಗಾಗಿ ನಿಯಮಗಳನ್ನು ಮತ್ತು ವಿನಿಮಯಗಳ್ನು ರಚಿಸುವುದು<br>4) ದೋಣಿಗಳು, ಹಾಯ್ಗಡಗಳು ಮತ್ತು ಜಲ ಮಾರ್ಗಗಳನ್ನು ನಿರ್ವಹಿಸುವುದು<br>5) ಮಳೆ ನೀರು ಚರಂಡಿಗಳನ್ನು ನಿರ್ವಹಿಸುವುದು<br>6) ಸ್ನಾನ ಘಟ್ಟಗಳು, ಸಾರ್ವಜನಿಕ ಮಾರುಕಟ್ಟೆ ಮುಂತಾದವುಗಳಂಥಹ ಮೂಲಸೌಕರ್ಯಗಳನ್ನು/ಸೌಲಭ್ಯಗಳನ್ನು ಆಧರಿಸಿದ ಸಮುದಾಯ ಅವಶ್ಯಕತೆಗಳನ್ನು ಸ್ಥಾಪಿಸುವುದು.<br>7) ಜನವಸತಿ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು.<br>8) ವಸತಿ ಬಡಾವಣೆಗಳನ್ನು ನಿರ್ಮಿಸುವುದು<br>9) ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಟ್ಟಿರುವ ಶಾಲಾ ಕಟ್ಟಡಗಳು, ಆಸ್ಪತ್ರೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳ ನಿರ್ಮಾಣಕ್ಕೆ ಯೋಜನೆ ಸಿದ್ಧಪಡಿಸುವುದು, ಅವುಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.<br>10) ಸಮಗ್ರ ಗ್ರಾಮ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು. | 2) ತಾಲ್ಲೂಕು ಪಂಚಾಯತ್‌ಗಳ ನಿಯಂತ್ರಣಕ್ಕೆ ಒಳಪಡುವ ಬಹು ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯ ಒಳಗೆ ದೋಣಿಗಳು, ತೆಪ್ಪಗಳು (ಫ್ಲೆರ್ರಿಗಳು) ಮತ್ತು ಜಲಮಾರ್ಗಗಳನ್ನು ನಿರ್ವಹಿಸುವುದು.<br>3) ತಾಲ್ಲೂಕು ಪಂಚಾಯತಿ ನಿಯಂತ್ರಣಕ್ಕೆ ಒಳಪಟ್ಟ ಪ್ರೌಢಶಾಲಾ ಕಟ್ಟಡಗಳಿಗೆ, ತಾಲ್ಲೂಕು ಆಸ್ಪತ್ರೆಗಳಿಗೆ ಮತ್ತು ಇತರ ತಾಲ್ಲೂಕು ಮಟ್ಟದ ಸಾರ್ವಜನಿಕ ಸಂಸ್ಥೆಗಳಿಗೆ ಯೋಜನೆ ರೂಪಿಸುವುದು, ಅವುಗಳ ನಿರ್ಮಾಣ ಮಾಡುವುದು ಮತ್ತು ಅವುಗಳನ್ನು ನಿರ್ವಹಿಸುವುದು. | ಒದಗಿಸುವುದು.<br>4) ಮಾರುಕಟ್ಟೆಗಳು, ಆಟದ ಮೈದಾನ, ಕ್ರೀಡಾಂಗಣ ಮೊದಲಾದಂಥ ಬಹು ತಾಲ್ಲೂಕು ಮಟ್ಟದ ನಾಗರಿಕ ಮೂಲಸೌಲಭ್ಯಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು. |

| | | | | |
|---|---|---|---|---|
